ಭಾನುವಾರ, ಜೂನ್ 23, 2024 | ₹ 7.00

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರಾವಳಿ ಅಡಿಕೆ ಕೃಷಿಗೆ 'ದೋಟಿ ಗ್ಯಾಂಗ್' ಆಸರೆ

ಕರ್ನಾಟಕದಲ್ಲಿ ಅಡಿಕೆ ಬೆಳೆ

6.14 ಲಕ್ಷ ಹೆಕ್ಟೇರ್ ಅಡಿಕೆ ಬೆಳೆ ಪ್ರದೇಶ

9.33 ಲಕ್ಷ ಟನ್ ಉತ್ಪಾದನೆಯಾಗುವ ಅಡಿಕೆ

(ಆಧಾರ: ತೋಟಗಾರಿಕೆ ಇಲಾಖೆ)

ಕರ್ನಾಟಕದಲ್ಲಿ ತೆಂಗು ಬೆಳೆ

5.57 ಲಕ್ಷ ಹೆಕ್ಟೇರ್ ತೆಂಗು ಬೆಳೆ ಪ್ರದೇಶ

5,897 ಕೋಟಿ ಕಾಯಿ ಉತ್ಪಾದನೆ

(ಆಧಾರ: ತೆಂಗು ಅಭಿವೃದ್ಧಿ ಮಂಡಳಿ)

• ಗಣೇಶ ಚಂದನಶಿವ

ಒಳನೋಟ

ಮಂಗಳೂರು: 'ನಮ್ಮ ಜಮೀನಿನಲ್ಲಿ 400 ಅಡಿಕೆ ಮರ ಬೆಳೆಸಿದ್ದೇನೆ. ಮದ್ದು ಸಿಂಪಡಿಸಲು, ಕೊಯ್ಲು ಮಾಡಲು ಮರ ಹತ್ತಲೇ ಬೇಕಿತ್ತು. ನಾನು ಮರ ಹತ್ತಿ ಕೆಲಸ ಮಾಡುವಾಗ ಜೀವಭಯ ಕಾಡುತ್ತಿತ್ತು. ಈಗ ದೋಟಿ ಗ್ಯಾಂಗ್ ಬಂದ ಮೇಲೆ ಆ ತಾಪತ್ರಯ ಇಲ್ಲ. ಕೆಲಸವೂ ಸಲೀಸಾಗಿದೆ. ಮೇಲಾಗಿ ಕಾರ್ಮಿಕರಲ್ಲಿ ಸುರಕ್ಷಿತ ಭಾವವೂ ಮೂಡಿದೆ' ಎಂದು ಮಾತಿಗಿಳಿದರು ಪದ್ಮನಾಭ.

ಪುತ್ತೂರು ಬಳಿಯ ಕುರಿಯ ಗ್ರಾಮದ ಕೆ.ವಿಶ್ವನಾಥ ಭಟ್ಟ ಅವರ ಅಡಿಕೆ ತೋಟಕ್ಕೆ ಬೆಳಿಗ್ಗೆ 9.15ರ ವೇಳೆಗೇ 'ಪಿಂಗಾರ ಅಡಿಕೆ ಕೌಶಲ್ಯ ಪಡೆ'ಯ ವಾಹನ ಬಂದಿತ್ತು. ಅದರಲ್ಲಿದ್ದ ಕಾರ್ಮಿಕರು ದೋಟಿ ಮತ್ತಿತರ ಉಪಕರಣ ಜೋಡಿಸಿಕೊಂಡು ಕೆಲಸಕ್ಕೆ ಅಣಿಯಾದರು. ಅಡಿಕೆಗೆ ಮದ್ದು (ಕೀಟನಾಶಕ) ಸಿಂಪಡಿಸುವ ಪೈಪ್‌ನ್ನು ದೋಟಿಗೆ ಕಟ್ಟಿ ಸುಮಾರು 70–80 ಎತ್ತರದ ಅಡಿಕೆ ಮರಗಳ ಅಡಿಕೆ ಗೊನೆಗಳಿಗೆ ಮದ್ದು ಸಿಂಪಡಿಸಲಾರಂಭಿಸಿದರು. ಒಬ್ಬ ದೋಟಿ ಹಿಡಿದುಕೊಂಡರೆ, ಇನ್ನೊಬ್ಬ ಕಾರ್ಮಿಕ ಆ ಸ್ಪ್ರೇಯರ್‌ನ ಕಂಟ್ರೋಲ್ ವಾಲ್ವ್ ನಿರ್ವಹಿಸುತ್ತಿದ್ದರು. ಮರಗಳನ್ನು ಲೆಕ್ಕಹಾಕಿದ ಈ ತಂಡ (ದೋಟಿ ಗ್ಯಾಂಗ್)ದ ವ್ಯವಸ್ಥಾಪಕ ಪದ್ಮನಾಭ, ಬಿಲ್ಲು ಬರೆದು ಕೊಟ್ಟರು. ಅದರಲ್ಲಿದ್ದ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿದ ಕೆ.ವಿಶ್ವನಾಥ ಭಟ್ಟರು, ಯುಪಿಐ ಮೂಲಕ ಹಣ ಪಾವತಿಸಿದರು. ಎಲ್ಲ ಕಾರ್ಮಿಕರನ್ನು ತಮ್ಮ ಪಿಂಗಾರ ವಾಹನದಲ್ಲಿ ಕೂಡ್ರಿಸಿಕೊಂಡು ಪದ್ಮನಾಭ, 'ನಮಗೆ ಬಿಡುವಿಲ್ಲದ ಕೆಲಸ ಮರ್ರೆ...' ಎನ್ನುತ್ತ ಮತ್ತೊಂದು ತೋಟಕ್ಕೆ ಹೊರಟುಹೋದರು.

ದಕ್ಷಿಣ ಕನ್ನಡ ಜಿಲ್ಲೆ ವಿಟ್ಲ ಬಳಿಯ ಕೊಡಂಗಾಯಿ ಗ್ರಾಮದ ಪದ್ಮನಾಭ ಅವರು ಅಡಿಕೆ ಕೃಷಿಕ. ವಿಟ್ಲದ ಪಿಂಗಾರ ತೋಟಗಾರಿಕೆ ಬೆಳೆಗಾರರ ಉತ್ಪಾದಕ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಪಿಂಗಾರ ಸಂಸ್ಥೆಯು 2022ರ ಫೆಬ್ರುವರಿಯಿಂದ ಅಡಿಕೆ–ತೆಂಗು ಬೆಳೆಗಾರರಿಗೆ 'ಕಾರ್ಮಿಕರ ಸೇವೆ' ಒದಗಿಸುತ್ತಿದೆ. ಅದಕ್ಕೆ 'ಅಡಿಕೆ/ತೆಂಗು ಕೌಶಲ್ಯ ಪಡೆ' ಎಂದು ಹೆಸರಿಟ್ಟಿದೆ. ಇವರಲ್ಲಿ ಅಡಿಕೆಯ ಆರು ದೋಟಿ ಗ್ಯಾಂಗ್‌ಗಳಿದ್ದು, ಪದ್ಮನಾಭ ಅವರು ಒಂದು ಗ್ಯಾಂಗ್‌ನ ವಾಹನ ಚಾಲಕ ಕಂ ವ್ಯವಸ್ಥಾಪಕರಾಗಿದ್ದಾರೆ. ತೆಂಗು ಕೊಯ್ಲಿಗೆ ಒಂದು ತಂಡ ಇದೆ.

ಕರಾವಳಿ ಭಾಗದ ಮುಖ್ಯ ಕೃಷಿ ಅಡಿಕೆ ಮತ್ತು ತೆಂಗು. ಮರಹತ್ತಿ ಕೊಯ್ಲು ಮಾಡುವುದು, ಮರಹತ್ತಿಯೇ ಕೀಟನಾಶಕ ಸಿಂಪಡಣೆ ಮಾಡುವುದು ಸಾಂಪ್ರದಾಯಿಕ ವಿಧಾನ.

ಇದಕ್ಕೆ ಕುಶಲ ಕಾರ್ಮಿಕರು ಬೇಕು. ಆದರೆ, ಈ ಶ್ರಮದಾಯಿಕ ಕೆಲಸಕ್ಕೆ ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕರೇ ಸಿಗುತ್ತಿಲ್ಲ ಎಂದು ರೈತರು ಗೋಳಾಡುತ್ತಿದ್ದರು. ಇದಕ್ಕೆ ಪರಿಹಾರ ಎಂಬಂತೆ ಯಾಂತ್ರೀಕರಣದ ಬಳಕೆ ಶುರುವಾಯಿತು.

ಉತ್ತರ ಕನ್ನಡ ಜಿಲ್ಲೆ ನಾನಿಕಟ್ಟಾ ಗ್ರಾಮದ ತ್ಯಾಗಳ್ಳಿ ಸೇವಾ ಸಹಕಾರಿ ಸಂಘ, 2020ರಲ್ಲಿ ಕಾರ್ಮಿಕರಿಗೆ ತರಬೇತಿ ನೀಡಿ 'ದೋಟಿ' ಉಪಕರಣ ಬಳಸಿ ಕೆಲಸ ಮಾಡುವ ವಿಧಾನ ಪರಿಚಯಿಸಿತು. ದೋಟಿ ಎಂದರೆ ಕಾರ್ಬನ್ ಫೈಬರ್‌ನಿಂದ ಮಾಡಿರುವ ಸಿಂಪಡಣೆ ಮತ್ತು ಕೊಯ್ಲು ಸಾಧನ. 60 ಅಡಿಯಿಂದ 80 ಅಡಿ ವರೆಗೆ ಉದ್ದದ ದೋಟಿ ಲಭ್ಯ. ಇವು ಹಗುರವಾಗಿದ್ದು, ಸರಾಸರಿ 6 ಕೆ.ಜಿ. ಭಾರ ಹೊಂದಿರುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲ ಕೃಷಿಕರ ಸಂಘಗಳು ಯಾಂತ್ರೀಕರಣದ ಸೇವೆಯನ್ನು (ದೋಟಿ) ರೈತರಿಗೆ ನೀಡುತ್ತಿವೆ. ಇವರಿಂದ ಪ್ರೇರಣೆ ಪಡೆದ ಪಿಂಗಾರ ತನ್ನ ವ್ಯಾಪ್ತಿಯಲ್ಲೂ ಈ ಸೇವೆ ಆರಂಭಿಸಿದೆ.

'2023–24ರ ಆರ್ಥಿಕ ವರ್ಷದಲ್ಲಿ ಪಿಂಗಾರ ತಂಡಗಳು 350 ಅಡಿಕೆ ತೋಟಗಳಲ್ಲಿ ಅಡಿಕೆ ಕೊಯ್ಲು, ಮದ್ದು ಸಿಂಪಡಣೆ ಕೆಲಸ ಮಾಡಿವೆ. ಇದರಿಂದ ಒಟ್ಟಾರೆ ₹1.60 ಕೋಟಿ ವಹಿವಾಟು ನಡೆದಿದೆ' ಎನ್ನುತ್ತಾರೆ ಇದರ ಸಿಇಒ ಪ್ರದೀಪ್ ಕೆ.

ಬಂಟ್ವಾಳ ತಾಲ್ಲೂಕು ಕುಳಾಲು ಕುಂಟ್ರಕಲ ಗ್ರಾಮದ ಆನಂದ ನಾಯ್ಕ್ ಅವರದ್ದು ಸಣ್ಣ ಕೃಷಿಕ ಕುಟುಂಬ. ಹೆಚ್ಚು ಓದಲಾಗಲಿಲ್ಲ. ಬಾಲ್ಯದಲ್ಲೇ ಅಡಿಕೆ ಕೃಷಿ ಕೆಲಸ ಸೆಳೆಯಿತು. ಅದು ಅವರಿಗೆ ಅನಿವಾರ್ಯವೂ ಆಗಿತ್ತು. ಸಣ್ಣವರಿದ್ದಾಗಲೇ ಮರ ಹತ್ತಿ ಕೆಲಸ ಮಾಡುವುದು ಕಾರ್ಯಗತವಾಯಿತು.

ಅಡಿಕೆ ಮರಕ್ಕೆ ದೋಟಿ ಉಪಯೋಗಿಸಿ ರಾಸಾಯನಿಕ ಸಿಂಪಡಿಸುತ್ತಿರುವ ಕಾರ್ಮಿಕ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

4ನೇ ಪುಟ ನೋಡಿ



A BRAND OF SSKL
SAI SILKS (KALAMANDIR) LIMITED
ಆಷಾಢ ಗ್ರಾಂಡ್ ಸೇಲ್
ರೇಷ್ಮೆ ಸೀರೆಗಳು
ಫ್ಯಾನ್ಸಿ ಸೀರೆಗಳು
ಡ್ರೆಸ್ ಮೆಟೀರಿಯಲ್ಸ್
UPTO 30% OFF
ಮೆನ್ಸ್‌ವೇರ್ ಮತ್ತು
ಕಿಡ್ಸ್‌ವೇರ್‌ಗಳ ಮೇಲೆ
UPTO 20% OFF
*T&C Apply
SCAN AND VISIT OUR WEBSITE FOR STORE LOCATIONS.
ಕಮ್ಮನಹಳ್ಳಿ : 091089 36060, ಮಾರತ್‌ಹಳ್ಳಿ : 091489 46060
ಈ ಕೊಡುಗೆಗಳು ಮಾರತ್‌ಹಳ್ಳಿ ಮತ್ತು ಕಮ್ಮನಹಳ್ಳಿ ಸ್ಟೋರ್ಸ್‌ನಲ್ಲಿ ಮಾತ್ರ
kalamandir Kalamandirfashions
ಕಳಾಮಂದಿರ್®
Symbol Of South


A BRAND OF SSKL
SAI SILKS (KALAMANDIR) LIMITED
ಕಾಂಚೀಪುರಂ
ವರಮಹಾಲಕ್ಷ್ಮಿ ಸಿಲ್ಕ್ಸ್
ಯಾವುದೇ ಶುಭ ಕಾರ್ಯದ ಶುಭಾರಂಭ
ಕಾಂಚೀಪುರಂ ವರಮಹಾಲಕ್ಷ್ಮಿಯಿಂದ
WE PROMISE PQR • PRICE • QUALITY • RANGE
KANCHEEPURAM ORIGINAL BRAND
ಕಾಂಚೀಪುರಂ ರೇಷ್ಮೆಸೀರೆ । ಆರಣಿ । ಬನಾರಸ್ । ಪೈಥಾನಿ । ಪಟೋಲ । ಇಕ್ಕತ್ । ಬಾಂದನಿ । ಸಾಫ್ಟ್ ಸಿಲ್ಕ್ । ಡಿಸೈನರ್ ಫ್ಯಾನ್ಸಿ ಸೀರೆಗಳು । ಕಾಟನ್
ಕುಪ್ಪಡಂ । ಗದ್ವಾಲ್ । ಖಾದಿ । ಕಲಂಕಾರಿ । ಟಸ್ಸಾರ್ । ಕೋರ । ಚಂದೇರಿ । ಲೆನಿನ್ । ಪಾವಾಡಗಳು । ಡಿಸೈನರ್ ಧೋತಿಗಳು
ಜಯನಗರ
ಬಸ್ ಸ್ಟಾಪ್ ಎದುರು, 46ನೇ ಕ್ರಾಸ್, 5ನೇ ಬ್ಲಾಕ್
ಫೋನ್: 91089 16060
ಮಲ್ಲೇಶ್ವರಂ
8ನೇ ಕ್ರಾಸ್, ಎಸ್.ಬಿ.ಐ. ಬ್ಯಾಂಕ್ ಬಿಲ್ಡಿಂಗ್, ಮಾರ್ಗೋಸ ರೋಡ್
ಫೋನ್: 080 41481117
ಹೊಸೂರು
'ಆಹಾ' ರೆಸ್ಟೋರೆಂಟ್ ಹತ್ತಿರ,
ಮೂಕೊಂಡಪಲ್ಲಿ ಮುಖ್ಯರಸ್ತೆ, ಬೆಂಗಳೂರು ಹೈವೇ
ಫೋನ್: 043 44612226
Scan for Website
Follow Us on: /kanchivmlsilks
ಪ್ರಮುಖ ಮಳಿಗೆ: ಗಾಂಧಿ ರೋಡ್, ಕಾಂಚೀಪುರಂ

ಭಾನುವಾರ, ಜೂನ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 174 | ಪುಟ 22

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾಲೀಮು
ಭಾರತ ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಬೆಂಗಳೂರಿನಲ್ಲಿ ಶನಿವಾರ ಅಭ್ಯಾಸದ ವೇಳೆ ಸಹ ಆಟಗಾರ್ತಿ ಜೊತೆ ಕಾಣಿಸಿಕೊಂಡರು...

ಸಹಕಾರ: ಭಾರತ, ಬಾಂಗ್ಲಾದೇಶ ಒಪ್ಪಂದಗಳಿಗೆ ಸಹಿ 9

ನಟ ದರ್ಶನ್ ಸಹಚರರಿಗೆ ಜೈಲು 6

‘ಒಂದಾಗಿ ಕಾಂಗ್ರೆಸ್ ಸೊಕ್ಕು ಮುರಿಯುತ್ತೇವೆ’ 6

ತಾಂಡಾ ಅಭಿವೃದ್ಧಿ ನಿಗಮ: ಅಕ್ರಮದ ಘಾಟು 7

ಲೇಖಕಿ ಕಮಲಾ ಹಂಪನಾ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಕಮಲಾ ಹಂಪನಾ (89) ಅವರು ಹೃದಯಾಘಾತದಿಂದಾಗಿ ಶನಿವಾರ ಮುಂಜಾನೆ ನಿಧನರಾದರು.

ಅವರಿಗೆ ಸಾಹಿತಿ, ಸಂಶೋಧಕರಾಗಿರುವ ಪತಿ ಹಂ.ಪ. ನಾಗರಾಜಯ್ಯ, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ. ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಕ್ರೆಸೆಂಟ್ ರಸ್ತೆಯಲ್ಲಿರುವ ಪುತ್ರಿಯ ನಿವಾಸದಲ್ಲಿ ಮೃತಪಟ್ಟಿದ್ದಾರೆ. ರಾತ್ರಿ ನಿದ್ದೆಯಲ್ಲಿರುವಾಗಲೇ ಅವರಿಗೆ ಹೃದಯಾಘಾತವಾಗಿದೆ.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪರೀಕ್ಷಾ ಪ್ರಕ್ರಿಯೆ: ತಜ್ಞರ ಸಮಿತಿ

- ಇಸ್ರೊ ಮಾಜಿ ಮುಖ್ಯಸ್ಥ ಕೆ. ರಾಧಾಕೃಷ್ಣನ್ ನೇತೃತ್ವದ ತಜ್ಞರ ತಂಡ ನೇಮಿಸಿದ ಕೇಂದ್ರ
- ನೀಟ್ ಅಕ್ರಮ: ತನಿಖೆ ಸಿಬಿಐಗೆ ವಹಿಸಲು ಕೇಂದ್ರ ಸರ್ಕಾರ ನಿರ್ಧಾರ
- ಇಂದು ನಡೆಯಬೇಕಿದ್ದ ನೀಟ್–ಪಿಜಿ ಪರೀಕ್ಷೆ ಮುನ್ನೆಚ್ಚರಿಕೆ ಕ್ರಮವಾಗಿ ಮುಂದೂಡಿಕೆ

ನವದೆಹಲಿ (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾರದರ್ಶಕ ಮತ್ತು ನ್ಯಾಯೋಚಿತವಾಗಿ ನಡೆಸಲು ಹಾಗೂ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಕಾರ್ಯವಿಧಾನವನ್ನು ಸಮಗ್ರವಾಗಿ ಪರಿಶೀಲಿಸಲು ಕೇಂದ್ರ ಸರ್ಕಾರವು ಇಸ್ರೊ ಮಾಜಿ ಮುಖ್ಯಸ್ಥ ಕೆ. ರಾಧಾಕೃಷ್ಣನ್ ನೇತೃತ್ವದಲ್ಲಿ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿದೆ.

ರಾಧಾಕೃಷ್ಣನ್

ದೆಹಲಿಯ ಏಮ್ಸ್‌ನ ಮಾಜಿ ನಿರ್ದೇಶಕ ರಣದೀಪ್ ಗುಲೇರಿಯಾ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಬಿ.ಜೆ.ರಾವ್, ಐಐಟಿ ಮದ್ರಾಸ್‌ನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಕೆ. ರಾಮಮೂರ್ತಿ, ‘ಪೀಪಲ್ ಸ್ಟ್ರಾಂಗ್’ನ ಸಹ ಸಂಸ್ಥಾಪಕ ಮತ್ತು ಕರ್ಮಯೋಗಿ ಭಾರತ್ ಮಂಡಳಿಯ ಸದಸ್ಯ ಪಂಕಜ್ ಬನ್ಸಾಲ್, ಐಐಟಿ ದೆಹಲಿ ವಿದ್ಯಾರ್ಥಿ ವ್ಯವಹಾರಗಳ ಡೀನ್ ಆದಿತ್ಯ ಮಿತ್ತಲ್, ಶಿಕ್ಷಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಗೋವಿಂದ್ ಜೈಸ್ವಾಲ್ ಸಮಿತಿಯ ಸದಸ್ಯರಾಗಿದ್ದಾರೆ.

‘ಪಾರದರ್ಶಕ, ನಕಲು ರಹಿತ ಮತ್ತು ಲೋಪ ಮುಕ್ತ ಪರೀಕ್ಷೆಗಳನ್ನು ನಡೆಸಬೇಕು ಎಂಬುದು ನಮ್ಮ ಬದ್ಧತೆಯಾಗಿದೆ. ಈ ನಿಟ್ಟಿನಲ್ಲಿ ಶಿಫಾರಸುಗಳನ್ನು ಮಾಡಲು ಉನ್ನತ ಮಟ್ಟದ ತಜ್ಞರ ಸಮಿತಿ ರಚಿಸಲಾಗಿದೆ. ಪರೀಕ್ಷಾ ಪ್ರಕ್ರಿಯೆಯಲ್ಲಿನ ದಕ್ಷತೆ ಹೆಚ್ಚಿಸಲು, ಸಂಭವನೀಯ ದುಷ್ಕೃತ್ಯ ತಡೆಯಲು, ದತ್ತಾಂಶ ಭದ್ರತೆಯನ್ನು ಬಲಪಡಿಸಲು ಸಮಿತಿ ಶಿಫಾರಸುಗಳನ್ನು ಮಾಡಲಿದೆ. ಅಲ್ಲದೆ, ಎನ್‌ಟಿಎ ಅನ್ನು ಕೂಲಂಕಷವಾಗಿ ಪರಿಶೀಲಿಸಿ, ಅದರ ಸುಧಾರಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸಮಿತಿ ತಿಳಿಸಲಿದೆ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.

ಸಮಿತಿ ರಚನೆಯ ಕುರಿತು ಪ್ರಧಾನ್ ಅವರು ಘೋಷಿಸಿದ ಎರಡು ದಿನಗಳ ಬಳಿಕ ಸಚಿವಾಲಯ ಈ ಕುರಿತು ಅಧಿಸೂಚನೆ ಹೊರಡಿಸಿದ್ದು, ಎರಡು ತಿಂಗಳೊಳಗೆ ಸಮಿತಿ ವರದಿ ನೀಡಬೇಕು ಎಂದು ತಿಳಿಸಿದೆ.

ಸಮಿತಿಯ ಹೊಣೆಗಾರಿಕೆ ಏನು? 9

ಎನ್‌ಟಿಎ ಮಹಾನಿರ್ದೇಶಕ ಎತ್ತಂಗಡಿ

ನವದೆಹಲಿ (ಪಿಟಿಐ): ‘ಯುಜಿ-ನೀಟ್’ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳಲ್ಲಿನ ಅಕ್ರಮಗಳ ಕುರಿತು ದೇಶದಾದ್ಯಂತ ಭಾರೀ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮಹಾನಿರ್ದೇಶಕ ಸುಬೋಧ್ ಸಿಂಗ್ ಅವರನ್ನು ಆ ಹುದ್ದೆಯಿಂದ ಶನಿವಾರ ತೆಗೆದು ಹಾಕಲಾಗಿದೆ.

ಮುಂದಿನ ಆದೇಶದವರೆಗೆ ಅವರನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆಯಲ್ಲಿ (ಡಿಒಪಿಟಿ) ‘ಕಡ್ಡಾಯ ಕಾಯುವಿಕೆ’ಯಲ್ಲಿ ಇರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ‘ಇಂಡಿಯಾ ಟ್ರೇಡ್ ಪ್ರಮೋಷನ್ ಆರ್ಗನೈಸೇಷನ್’ (ಐಟಿಪಿಒ) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಪ್ರದೀಪ್ ಸಿಂಗ್ ಖರೋಲಾ ಅವರಿಗೆ ಎನ್‌ಟಿಎ ಮಹಾನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ.

ನೀಟ್–ಪಿಜಿ ಪರೀಕ್ಷೆ ಮುಂದೂಡಿಕೆ: ಭಾನುವಾರ ನಿಗದಿಯಾಗಿದ್ದ ‘ನೀಟ್–ಪಿಜಿ’ ಪರೀಕ್ಷೆಯನ್ನು ಮುನ್ನೆಚ್ಚರಿಕೆ ಕ್ರಮವಾಗಿ ಆರೋಗ್ಯ ಸಚಿವಾಲಯ ಮುಂದೂಡಿ ಆದೇಶಿಸಿದೆ.

ಕಠಿಣ ಕಾನೂನು ಜಾರಿಗೆ

ನವದೆಹಲಿ (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮಗಳನ್ನು ತಡೆಯುವ ಉದ್ದೇಶದ ಕಠಿಣ ಕಾನೂನನ್ನು ಕೇಂದ್ರ ಸರ್ಕಾರವು ಶುಕ್ರವಾರದಿಂದ ಜಾರಿಗೆ ತಂದಿದೆ. ತಪ್ಪು ಮಾಡಿರುವುದು ಸಾಬೀತಾದರೆ ಗರಿಷ್ಠ 10 ವರ್ಷ ಜೈಲು ಶಿಕ್ಷೆ ಮತ್ತು ₹1 ಕೋಟಿವರೆಗೆ ದಂಡ ವಿಧಿಸಲು ಈ ಕಾನೂನು ಅವಕಾಶ ಕಲ್ಪಿಸುತ್ತದೆ.

‘ಪರೀಕ್ಷೆಗಳ (ಅಕ್ರಮಗಳ ತಡೆ) ಕಾಯ್ದೆ – 2024’ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿ ಸರಿಸುಮಾರು ನಾಲ್ಕು ತಿಂಗಳು ಕಳೆದ ನಂತರ ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಕಾಯ್ದೆಯು ಜೂನ್ 21ರಿಂದ ಜಾರಿಗೆ ಬಂದಿದೆ ಎಂದು ಅಧಿಸೂಚನೆ ಹೇಳಿದೆ.

ಯುಜಿಸಿ–ನೆಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವ ಈ ಸಂದರ್ಭದಲ್ಲಿ ಕಾಯ್ದೆಯು ಜಾರಿಗೆ ಬಂದಿರುವುದು ಮಹತ್ವ ಪಡೆದುಕೊಂಡಿದೆ. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ಈ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಆಗಿದ್ದರ ಬಗ್ಗೆ ತನಿಖೆ ಆರಂಭಿಸಿರುವ ಸಿಬಿಐ ಅಧಿಕಾರಿಗಳು ಗುರುವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ. ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ನೀಟ್–ಯುಜಿ ಪರೀಕ್ಷೆಯಲ್ಲಿ ಕೂಡ ಅಕ್ರಮಗಳು ನಡೆದಿವೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

‘ಪರೀಕ್ಷೆಗಳ (ಅಕ್ರಮಗಳ ತಡೆ) ಮಸೂದೆ – 2024’ಕ್ಕೆ ರಾಜ್ಯಸಭೆಯು ಫೆಬ್ರುವರಿ 9ರಂದು ಅಂಗೀಕಾರ ನೀಡಿತ್ತು. ಲೋಕಸಭೆಯು ಇದಕ್ಕೆ ಫೆಬ್ರುವರಿ 6ರಂದು ಒಪ್ಪಿಗೆ ನೀಡಿತ್ತು. ರಾಷ್ಟ್ರಪತಿಯವರು ಈ ಮಸೂದೆಗೆ ಫೆಬ್ರುವರಿ 12ರಂದು ಅಂಕಿತ ಹಾಕಿದ್ದರು.

9ನೇ ಪುಟ ನೋಡಿ

ಮಸೂದೆ ಮರಳಿಸಿದ್ದ ರಾಜ್ಯದ ರಾಜ್ಯಪಾಲರು

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಪತ್ತೆಯಾದ ಬಳಿಕ ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಮಸೂದೆ– 2023 ಅನ್ನು ರೂಪಿಸಿದ್ದ ರಾಜ್ಯ ಸರ್ಕಾರ 2023ರ ಡಿಸೆಂಬರ್‌ನಲ್ಲಿ ವಿಧಾನಮಂಡಲದ ಅಂಗೀಕಾರ ಪಡೆದಿತ್ತು.

ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕಾಗಿ 2023ರ ಡಿ. 28ರಂದು ರಾಜಭವನಕ್ಕೆ ಕಳುಹಿಸಲಾಗಿತ್ತು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡುವಂತೆ ಸೂಚಿಸಿ 2024ರ ಜನವರಿ 16ರಂದು ಮಸೂದೆಯನ್ನು ಸಂಸದೀಯ ವ್ಯವಹಾರಗಳ ಇಲಾಖೆಗೆ ಮರಳಿಸಿದ್ದರು. ರಾಜ್ಯಪಾಲರು ಕೋರಿರುವ ಸ್ಪಷ್ಟನೆಗಳನ್ನು ಒದಗಿಸುವಂತೆ ಸೂಚಿಸಿ ಜ.17ರಂದು ಗೃಹ ಇಲಾಖೆಗೆ ಮಸೂದೆಯನ್ನು ಕಳಿಸಿದ್ದು, ಅಲ್ಲಿಯೇ ಬಾಕಿ ಇದೆ.

Industry-Aligned Curriculum
NIRF Ranked - Innovation Band (51-100)
450+ Recruitment Partners
205+ Digital Classrooms to Support Hybrid Learning
45+ International Collaborations
World-Class Amenities
Alignment with SDGs
Learn and Earn Opportunity

- B.B.A., LL.B. (H)
- B.B.A.
- B.Sc. Computer Science (Cloud Computing and Big Data)
- B.A., LL.B. (H)
- B.Com.
- B.A. Journalism & Mass Communication
- B.Sc. (H) Sports and Exercise Science
- B.Sc. (H) Psychology
- B.A. in Journalism with Political Science
- B.Sc. in Microbiology, Chemistry, Genetics
- B.Sc in Medical Laboratory Technology

Call 90211 90211
Apply Online @ reva.edu.in

OFFICE OF ADMISSIONS
REVA University, Rukmini Knowledge Park, Kattigenahalli, Yelahanka, Bengaluru, Karnataka 560064

1.0L Turbo Boosterjet Engine with Progressive Smart Hybrid

360 View Camera

Head Up Display

NEXTre’ Rear Combination Lights

In-Built Suzuki Connect

Wireless Charger

Contact us at
1800-200-[6392]
1800-102-[NEXA]
www.nexaexperience.com
NOW YOU CAN ALSO BOOK ONLINE

SOUTH BANGALORE: NEXA ELECTRONIC CITY (SURAKSHAA CAR CARE PVT. LTD. PH: 080-25732229, 8884442229), **NEXA JP NAGAR** (KALYANI MOTORS PH: 9590990011), **NEXA SARJAPUR ROAD** (PRATHAM MOTORS PH: 9008455550), **NEXA KORAMANGALA** (KATARIA AUTOMOBILES PVT. LTD. PH: 08046837002), **WEST BANGALORE: NEXA NAGARBHAVI** (BIMAL AUTO AGENCY PH: 08030693069), **NEXA RAJAJINAGAR** (VARUN MOTORS PVT. LTD. PH: 8884000042), **NEXA RR NAGAR** (KALYANI MOTORS PH: 9590990011), **EAST BANGALORE: NEXA ORR MARATHALLI** (BIMAL AUTO AGENCY PH: 08030693069), **NEXA BANASWADI** (KALYANI MOTORS PH: 9590990011), **NEXA WHITEFIELD** (VARUN MOTORS PVT. LTD. PH: 9620827474), **NORTH BANGALORE: NEXA YELAHANKA** (MANDOVI MOTORS PVT. LTD. PH: 9886003030), **NEXA HEBBAL ORR** (VARUN MOTORS PVT. LTD. PH: 9513838777), **CENTRAL BANGALORE: NEXA MUSEUM ROAD** (PRATHAM MOTORS PH: 9880006006), **NEXA PALACE** (MANDOVI MOTORS PH: 9886003030), **TUMKUR: NEXA SIRA ROAD** (SAKETH AUTOMOBILES PH: 9900500051).

Scan to know more.
SMART FINANCE
AN ONLINE END-TO-END CAR FINANCE SOLUTION
- Multiple financiers
- Digital Document Upload
- Live Loan status
- Complete transparency (associated fees & charges)

*Terms and conditions apply. Offer valid for select models/variants and in select states only. Accessories and features shown may not be part of standard equipment and may vary from variant to variant. Images used are for illustration purpose only. Appearance of black shade on glass is due to lighting effect. Maruti Suzuki reserves the right to withdraw the offers at any point in time without any advance notice.

ಸ್ಥಾಪನೆ : 2000

RBI Licence No. UBD/KAN/0010P Dated 14-06-2000

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ. 1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034. ದೂರವಾಣಿ : 080-25526266/25526288/25526299

2023 - 24ನೇ ಸಾಲಿನ ಲಾಭ - ನಷ್ಟದ ತಃಖ್ತೆ

2022-23 ರೂ.	ವೆಚ್ಚ	2023-24 ರೂ.	2022-23 ರೂ.	ಆದಾಯ	2023-24 ರೂ.
12,99,72,792.00	ಠೇವಣಿ ಮೇಲಿನ ಬಡ್ಡಿ ಪಾವತಿ	13,73,94,738.50	13,58,44,878.79	ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ	12,85,24,968.00
2,27,65,778.00	ಸಿಬ್ಬಂದಿ ಸಂಬಳ, ಪಿ. ಎಫ್ ಮತ್ತು ಭತ್ಯೆಗಳು	2,49,04,767.00	13,71,99,376.27	ಹೂಡಿಕೆಗಳ ಮೇಲಿನ ಬಡ್ಡಿ	16,78,01,483.04
57,66,876.00	ಬಾಡಿಗೆ, ತೆರಿಗೆ, ವಿಮೆ , ವಿದ್ಯುತ್ ಇತ್ಯಾದಿ	57,45,785.81	9,65,413.15	ಕಮೀಷನ್, ವಿನಿಮಯ ಇತ್ಯಾದಿ	11,96,478.21
-	ಕಾನೂನು ಮತ್ತು ವಸೂಲಾತಿ ವೆಚ್ಚ	29,000.00	21,06,350.00	ಇತರೆ ಆದಾಯ	21,66,159.50
3,28,733.50	ಅಂಚೆ, ತಂತಿ ಮತ್ತು ದೂರವಾಣಿ ವೆಚ್ಚ	4,05,945.75	73,91,000.00	ಅವಕಾಶ ವಾಪಸಾತಿ	--
12,00,635.00	ಲೆಕ್ಕಪರಿಶೋಧಕರ ಶುಲ್ಕ	13,80,981.00			
15,50,007.50	ಸವಕಳಿ ಹಾಗೂ ರಿಪೇರಿ ವೆಚ್ಚ	14,83,017.00			
6,40,426.00	ಮುದ್ರಣ , ಸ್ಟೇಷನರಿ ಮತ್ತು ಜಾಹೀರಾತು	6,42,085.00			
99,71,587.21	ಇತರೆ ಖರ್ಚುಗಳು	110,46,993.69			
2,86,08,947.00	ಆದಾಯ ತೆರಿಗೆ ಪಾವತಿ	2,91,51,323.00			
8,27,01,236.00	ನಿವ್ವಳ ಲಾಭ	8,75,04,452.00			
28,35,07,018.21	ಜುಮ್ಲಾ	29,96,89,088.75	28,35,07,018.21	ಜುಮ್ಲಾ	29,96,89,088.75

ದಿನಾಂಕ : 31-3-2024 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

2022-23 ರೂ.	ಜವಾಬ್ದಾರಿಗಳು	2023-24 ರೂ.	2022-23 ರೂ.	ಆಸ್ತಿಗಳು	2023-24 ರೂ.
12,68,90,700.00	ಪಾವತಿಯಾದ ಷೇರು ಬಂಡವಾಳ	14,19,79,200.00	1,88,01,512.00	ನಗದು ಶಿಲ್ಕು	88,86,503.00
91,77,96,820.29	ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು	98,09,85,008.29	29,67,15,908.51	ಬ್ಯಾಂಕುಗಳಲ್ಲಿ ಶಿಲ್ಕು	26,42,88,830.62
271,57,35,757.84	ಠೇವಣಿಗಳು ಮತ್ತು ಇತರೆ ಖಾತೆಗಳು	305,95,62,487.75	225,38,27,514.00	ಹೂಡಿಕೆಗಳು	269,33,17,554.00
16,68,945.00	ಬರಬೇಕಾಗಿರುವ ಬಿಲ್ಲುಗಳ ಮೊತ್ತ	2,05,59,727.00	122,33,58,635.83	ಸಾಲ ಮತ್ತು ಮುಂಗಡಗಳು	128,93,42,493.63
56,07,324.00	ಸುಸ್ತಿ ಬಡ್ಡಿ ಕಾಯ್ದಿರಿಸಿದ್ದು	11,38,220.00	56,07,324.00	ಸುಸ್ತಿ ಸಾಲದ ಬಡ್ಡಿ ಬರಬೇಕಾದದ್ದು	11,38,220.00
45,45,786.00	ಠೇವಣಿಗಳ ಮೇಲೆ ಕೊಡಬೇಕಾದ ಬಡ್ಡಿಗಳು	49,57,725.00	2,48,10,083.00	ಹೂಡಿಕೆಗಳ ಬಡ್ಡಿ ಬರಬೇಕಾದದ್ದು	3,34,58,045.00
2,73,81,805.00	ಇತರೆ ಜವಾಬ್ದಾರಿಗಳು	7,22,41,264.00	16,68,945.00	ಬರಬೇಕಾದ ಬಿಲ್ಲುಗಳ ಮೊತ್ತ	2,05,59,727.00
8,27,01,236.00	ನಿವ್ವಳ ಲಾಭ	8,75,04,452.00	4,16,94,220.00	ಸ್ಥಿರಾಸ್ತಿಗಳು- ನಿವೇಶನ	4,16,94,220.00
53,30,655.00	ಅನ್‌ಕ್ಲೈಮಡ್ ಡಿ.ಇ.ಎ.ಎಫ್‌ನಲ್ಲಿ ಇರಿಸಿದ್ದು	61,88,583.00	59,71,867.00	ಚರಾಸ್ತಿಗಳು	55,67,822.00
10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00	98,72,364.79	ಇತರೆ ಆಸ್ತಿಗಳು	1,06,74,668.79
			53,30,655.00	ಅನ್‌ಕ್ಲೈಮಡ್ ಡಿಇಎಎಫ್‌ನಲ್ಲಿ ಇರಿಸಿದ್ದು	61,88,583.00
			10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00
388,76,69,029.13	ಜುಮ್ಲಾ	437,51,26,667.04	388,76,69,029.13	ಜುಮ್ಲಾ	437,51,26,667.04

Disclosure in financial statements – 'Notes to Accounts'

1. Regulatory Capital: *a) Composition of Regulatory Capital* (Amount in ₹ crore)

Sr.No.	Particulars	31.03.2024	31.03.2023
i)	Paid up share capital and reserves (net of deductions, if any)	14.20	12.69
ii)	Other Tier 1 capital	67.96	64.74
iii)	Tier 1 capital (i + ii)	82.16	77.43
iv)	Tier 2 capital	8.52	6.32
v)	Total capital (Tier 1+Tier 2)	90.68	83.75
vi)	Total Risk Weighted Assets (RWAs)	161.15	154.07
vii)	Paid-up share capital and reserves as percentage of RWAs	8.81%	8.24%
viii)	Tier 1 Ratio (Tier 1 capital as a percentage of RWAs)	50.98%	50.26%
ix)	Tier 2 Ratio (Tier 2 capital as a percentage of RWAs)	5.29%	4.10%
x)	Capital to Risk Weighted Assets Ratio (CRAR) (Total Capital as a percentage of RWAs)	56.27%	54.36%
	Amount of Tier 2 capital raised during the year of which: a) Perpetual Cumulative Preference Shares, b) Redeemable Non-Cumulative Preference Share. c) …….		

b) Draw down from Reserves

Reserves	Amount in Lakhs	Reason for with drawl
Member Welfare Fund	4.44	Scholarship for Member Children
Charity Fund	2.00	Given to Various Institution
Death Relief Fund	1.25	Given to diseased member family
Staff Welfare Fund	0.50	Gift fund for staff

2. Asset Liability Management : a) Maturity pattern of certain items of assets and liabilities (Amount in ₹ crore)

	Day 1	2 to 7 days	8 to 14 days	15 to 30 days	31 days to 2 months	Over 2 months to 3 months	Over 3 months to 6 months	Over 6 months and up to 1 year	Over 1 year to 3 years	Over 3 years to 5 years	Over 5 years	Total
Deposits	15.80	0.18	1.51	9.05	12.13	11.12	23.25	50.16	179.80	2.11	0.85	**305.96**
Advances	0.17	0.00	0.00	0.03	0.11	0.22	0.29	17.49	2.79	8.21	99.62	**128.93**
Investments	0.00	20.00	4.85	7.83	12.90	28.80	69.09	10.97	24.31	42.44	48.14	**269.33**
Borrowings	-	-	-	-	-	-	-	-	-	-	-	-

3. Investments : a) Composition of Investment Portfolio (Amount in ₹ crore)

Investment- Govt. Securities	31.03.2024	31.03.203
Held to Maturity	76.55	63.99
Available for Sale	133.96	109.90
Total Investments	210.51	173.89
Less: Provision for depreciation and NPI	-	-
Net Investments	**210.51**	**173.89**

b) Movement of Provisions for Depreciation and Investment Fluctuation Reserve (Amount in ₹ crore)

Particulars	31.03.2024	31.03.2023
i) Movement of provisions held towards depreciation on investments		
a) Opening balance	0.04	0.04
b) Add: Provisions made during the year	-	-
c) Less: Write off/ write back of excess provision during the year	-	-
d) Closing balance	0.04	0.04
ii) Movement of Investment Fluctuation Reserve		
a) Opening balance	4.40	3.29
b) Add: Amount transferred during the year	2.10	1.11
c) Less: Drawdown	-	-
d) Closing balance	6.50	4.40
iii) Closing balance in IFR as a percentage of closing balance of investments in AFS and HFT/Current category	4.22%	3.38%

c) Sale and transfers to/from HTM category: The one-time transfer of securities to/from HTM category with the approval of Board of Directors undertaken by banks at the beginning of the accounting year. **–NIL-**

d) Non- SLR Investment portfolio : i) Non-Performing Non- SLR Investment: **NIL**

ii) Issuer Composition of Non-SLR Investment: (Amount in ₹ crore)

Sr. No.	Non- SLR Investment	31.03.2024	31.03.2023
a)	PSUs		
b)	FIs	20.00	20.00
c)	Banks		
d)	Private Corporates	-	-
	Total	**20.00**	**20.00**

3. Asset Quality : a) Classification of advances and provisions held (Amount in ₹ crore)

	Total Standard Advances	Non-Performing				Total
		Sub-standard	Doubtful	Loss	Total NPA	
Gross Standard Advances and NPAs						
Opening Balance	118.73	1.34	2.27	-	3.61	122.34
Add: Additions during the year	27.57	-	-	-	-	27.57
Less: Reductions during the year*	19.73	0.75	0.50	-	1.25	20.98
Closing balance	**126.57**	**0.59**	**1.77**	**-**	**2.36**	**128.93**
Recoveries (excluding recoveries from upgraded accounts)	19.73	0.75	0.50	-	1.25	20.98
Provisions (excluding Floating Provisions)						
Opening balance of provisions held	1.82	0.06	11.83	-	11.89	13.71
Add: Fresh provisions made during the year	-	-	0.84	-	0.84	0.84
Less: Excess provision reversed/ Write-off loans	-	-	-	-	-	-
Closing balance of provisions held	1.82	0.06	12.67	-	12.73	14.55
Net NPAs						
Opening Balance	-	-	-	-	-	0.00
Add: Fresh additions during the year	-	-	-	-	-	-
Less: Reductions during the year	-	-	-	-	-	-
Closing Balance	-	-	-	-	-	0.00

Ratios (in per cent)	31.03.2024	31.03.2023
Gross NPA to Gross Advances	1.83%	2.95%
Net NPA to Net Advances	0%	0%
Provision coverage ratio	538.40%	329.72%

b) Sector-wise Advances and Gross NPAs (Amount in ₹ crore)

Sr. No.	Sector*	31.03.2024			31.03.2023		
		O/s Total Advances	Gross NPAs	% of Gross NPAs to Total Advances	O/s Total Advances	Gross NPAs	% of Gross NPAs to Total Advances
i)	**Priority Sector**						
a)	Agriculture and allied activities	18.99	-	0.00	8.28	-	0.00
b)	Advances to industries sector eligible as priority sector lending	52.68	1.76	1.36	53.56	2.26	1.84
c)	Services	4.05	-	0.00	3.49	-	0.00
d)	Personal loans	0.16	0.01	0.01	0.02	0.01	0.01
	Subtotal (i)	**75.88**	**1.77**	**1.37**	**65.35**	**2.27**	**1.85**
ii)	**Non-priority Sector**						
a)	Agriculture and allied activities	-	-	-	-	-	-
b)	Industry	-	-	-	-	-	-
c)	Services	53.05	0.59	0.46	56.99	1.34	1.10
d)	Personal loans	-	-	-	-	-	-
	Sub-total (ii)	53.05	0.59	0.46	56.99	1.34	1.10
	Total (I + ii)	**128.93**	**2.36**	**1.83**	**122.34**	**3.61**	**2.95**

i) Details of accounts *subjected to restructuring* (Amount in ₹ crore)

Standard	31.03.2024		31.03.2023	
	No. of Borrowers	Gross Amount	No. of Borrowers	Gross Amount
Micro, Small and Medium Enterprises (MSME)	5	2.18	5	2.28
Retail (excluding agriculture and MSME)	5	2.08	5	2.23
Total	**10**	**4.26**	**10**	**4.51**
Provision Held		**0.47**		**0.47**

C. Divergence in asset classification and provisioning (Amount in ₹ crore)

Sr.	Particulars	Amount
1.	Gross NPAs as on March 31,2023*as reported by the bank	3.61
2.	Gross NPAs as on March 31, 2023 as assessed by Reserve Bank of India	3.61
3.	Divergence in Gross NPAs (2-1)	Nil
4.	Net NPAs as on March 31, 2023 as reported by the bank	Zero
5.	Net NPAs as on March 31, 2023 as assessed by Reserve Bank of India	Zero
6.	Divergence in Net NPAs (5-4)	Nil
7.	Provisions for NPAs as on March 31, 2023 as reported by the bank	11.89
8.	Provisions for NPAs as on March 31, 2023 as assessed by Reserve of India	11.89
9.	Divergence in provisioning (8-7)	Nil
10	Reported Profit before Provisions and Contingencies for the year ended March31, 2023	11.13
11.	Reported Net Profit after Tax (PAT) for the year ended March 31,2023	8.27
12.	Adjusted (notional) Net Profit after Tax (PAT) for the year ended March 31, 2023 after considering the divergence in provisioning	8.27

d) Fraud Accounts : Banks shall make disclose details on the number and amount of frauds as well as the provisioning thereon –**NIL-**

i) Disclosure under Resolution Framework for COVID-19 related Stress: Format for disclosures to be made starting March 31, 2024. (Amount in ₹ crore)

Type of borrower	Exposure to accounts classified as Standard consequent to implementation of resolution plan– Position as at the end of the previous year (A)	of (A), aggregate debt that slipped into NPA during the year	Of (A) amount paid by the borrowers during the year	Exposure to accounts classified as standard consequent to implementation of resolution plan- Position as at the end of this year
Personal Loans	4.51	-	0.25	4.26
Corporate persons*	-	-	-	-
Of which MSMEs	-	-	-	-
Others	-	-	-	-
Total	**4.51**	**-**	**0.25**	**4.26**

4. Exposure to real estate sector (Amount in ₹ crore)

Category	31.03.2024	31.03.2023
a) Residential Mortgages– Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	17.59	18.99
b) Commercial Real Estate–Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.).Exposure would also include non-fund based(NFB) limits;	19.55	19.85
Total Exposure to Real Estate Sector	**37.14**	**38.84**
Total unsecured advances of the bank	0.11	0.02

5. Concentration of deposits, advances and NPAs: ***a) Concentration of deposits*** *(Amount in ₹ crore)*

Particulars	31.03.2024	31.03.2023
Total deposits of the twenty largest depositors	61.80	39.42
Percentage of deposits of twenty largest depositors to total deposits of the bank	20.20%	14.52%

b) Concentration of advances (Amount in ₹ crore)

Particulars	31.03.2024	31.03.2023
Total advances to the twenty largest borrowers	62.95	59.13
Percentage of advances to twenty largest borrowers to total advances of the bank	48.82%	48.33%

c) Concentration of NPAs (Amount in ₹ crore)

Particulars	31.03.2024	31.03.2023
Total Exposure to the top twenty NPA accounts	2.36	3.61
Percentage of exposures to the twenty largest NPA exposure to total Gross NPAs.	100%	100%

6. Transfers to Depositor Education and Awareness Fund (DEA Fund) *(Amount in ₹ Lakhs)*

Sr. No.	Particulars	31.03.2024	31.03.2023
i)	Opening balance of amounts transferred to DEA Fund	53.31	51.16
ii)	Add: Amounts transferred to DEA Fund during the year	8.58	2.24
iii)	Less: Amounts reimbursed by DEA Fund towards claims	-	0.09
iv)	Closing balance of amounts transferred to DEA Fund	61.89	53.31

7. Disclosure of complaints received by Bank from Customers (OBOs) : -NIL-

8. Disclosure of penalties imposed by the Reserve Bank of India: -NIL-

9. Other Disclosure: a) Business ratios:

Sr. No.	Particular	31.03.2024	31.03.2023
i)	Interest Income as a percentage to Working Funds	7.64	7.41
ii)	Non-interest income as a percentage to Working Funds	0.09	0.28
iii)	Cost of Deposits	5.15	5.12
iv)	Net Interest Margin	4.38	4.19
v)	Operating Profit as a percentage to Working Funds	2.01	2.13
vi)	Return on Assets	2.26	2.42
vii)	Business (deposits plus advances) per employee	27.18	24.62
viii)	Profit per employee	0.55	0.52

b) Bank assurance business : The details of fees / brokerage earned in respect of insurance broking, agency and bank assurance business undertaken by them shall be disclosed for both the current year and previous year. **-NIL-**

c) Disclosures regarding Priority Sector Lending Certificates (PSLCs): *The amount of PSLCs (category-wise) sold and purchased during the year shall be disclosed. (Amount in ₹crore)*

PSLCs Purchased	31.03.2024	31.03.2023
PSLC- General	20.00	75.00
PSLC- Micro Enterprises	4.00	10.00
PSLCs Sold	Nil	Nil

d) Provision and contingencies *(Amount in ₹ Lakhs)*

	Provision debited to Profit and Loss Account	31.03.2024	31.03.2023
i)	Provisions for NPI	Nil	Nil
ii)	Provision towards NPA	1273.05	1188.82
iii)	Provision made towards Income Tax	291.51	286.00
iv)	Other Provisions and Contingencies (with details)		
a)	Depreciation on Investment	654.23	443.66
b)	Provision towards Standard Asset	135.33	135.33
c)	Provision for Resolution of Stressed Assets	46.97	46.97
d)	Deferred Tax	(-)2.72	0.08

a) Payment of DICGC Insurance Premium *(Amount in ₹ Lakhs)*

Sr. No.	Particulars	31.03.2024	31.03.2023
i)	Payment of DICGC Insurance Premium	34.56	31.72
ii)	Arrears in payment of DICGC premium	Nil	Nil

b) Disclosure of facilities granted to directors and their relatives: NIL

(ಶಿವಣ್ಣ ಕೆ.ಬಿ.) (ವೆಂಕಟೇಶ್ ಅಯ್ಯರ್ ಪಿ. ವಿ.) (ನಾರಾಯಣ್ ಎಸ್. ಭಟ್) (ಎಂ. ಮುನಿರೆಡ್ಡಿ)

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನಿರ್ದೇಶಕರು ಉಪಾಧ್ಯಕ್ಷರು ಅಧ್ಯಕ್ಷರು

-:ದೃಢೀಕರಣ :-

ನಾವು ಮೇಲ್ಕಂಡ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು - 34 ಇದರ 2023-24ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ನಮ್ಮ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ಮತ್ತು ಲೆಕ್ಕ ಪರಿಶೋಧನೆಗೆ ದೊರೆತ ಮಾಹಿತಿ ಹಾಗೂ ವಿವರಣೆಗಳನ್ನು ಪರಿಶೀಲಿಸಿರುತ್ತೇವೆ ಹಾಗೂ ಅವು ತೃಪ್ತಿಕರವೆಂದು ಕಂಡುಬಂದಿರುತ್ತವೆ. ನಮ್ಮ ಅಭಿಪ್ರಾಯದಂತೆ ದೊರೆತ ಮಾಹಿತಿ ವಿವರಣೆಗಳಂತೆ ಹಾಗೂ ಲಗತ್ತಿಸಿರುವ ನಮ್ಮ ಲೆಕ್ಕ ಪರಿಶೋಧನಾ ವರದಿಯಲ್ಲಿ ವಿವರಿಸಿರುವ ವಿವರಗಳಿಗೊಳಪಟ್ಟ ದಿನಾಂಕ 31-3-2024ಕ್ಕೆ ಇದ್ದಂತೆ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯ ನೈಜ ಹಾಗೂ ಸಮಂಜಸ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಅಭಿಪ್ರಾಯಪಡುತ್ತೇವೆ.

ಮೆ|| ಬಾಬು ಅಂಡ್ ಬದತ್

ಸನ್ನದು ಲೆಕ್ಕ ಪರಿಶೋಧಕರು

(ಕೆ. ಚಂದ್ರ ಬಾಬು)

ಪಾಲುದಾರರು

UDIN : 24029130BKEDJQ8107

75ನೇ ಜನ್ಮದಿನದ ಶುಭಾಶಯಗಳು

ಸರಳ, ಸಜ್ಜನ, ಬಡ, ಮಧ್ಯಮ ವರ್ಗದ ವಿದ್ಯಾದಾತರು, ಶಿಕ್ಷಕರ ಅನ್ನದಾತರು, ತ್ಯಾಗಮಯಿಗಳಾದ ಬೆಂಗಳೂರಿನ ದೊಡ್ಡಣ್ಣ ವಿದ್ಯಾಸಂಸ್ಥೆ (ಸುಂಕದಕಟ್ಟೆ/ಹೆಗ್ಗನಹಳ್ಳಿ) ಹಾಗೂ ದೊಡ್ಡಣ್ಣ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಸಂಸ್ಥಾಪಕರಾದ

ಶ್ರೀಯುತ ಡಿ. ನಾರಾಯಣಪ್ಪರವರ 75ನೇ ವಸಂತದ ವಜ್ರಮಹೋತ್ಸವವನ್ನು

ದಿನಾಂಕ 23-06-2024 ರಂದು ಎಲ್ಲಾ ಅಭಿಮಾನಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ದೊಡ್ಡಣ್ಣ ಕುಟುಂಬ ವರ್ಗದವರಿಂದ ಹೃದಯಪೂರ್ವಕವಾಗಿ ಆಚರಿಸುತ್ತಾ ಭಗವಂತ ಶ್ರೀಯುತರಿಗೆ ಆಯುಷ್ಯ, ಆರೋಗ್ಯ ಕರುಣಿಸಲೆಂದು ಜನ್ಮದಿನದ ಹಾರ್ದಿಕ ಶುಭಾಶಯಗಳನ್ನು ಕೋರಲಾಗಿದೆ.

ಸ್ಥಳ: ದೊಡ್ಡಣ್ಣ ವಿದ್ಯಾಸಂಸ್ಥೆಯ ಆವರಣ, ಸುಂಕದಕಟ್ಟೆ, ಬೆಂಗಳೂರು-91

ಶುಭಾಶಯಕೋರಲು ವಾಟ್ಸ್‌ಅಪ್ ನಂ.: 9535305299

ಟಿಕೆಟ್ ರಹಿತ ಪ್ರಯಾಣ 4,064 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಮೇ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 4,064 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಮೇನಲ್ಲಿ 19,125 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿ ಸುತ್ತಿದ್ದ 4,064 ಮಂದಿ ಪತ್ತೆಯಾಗಿದ್ದರು. ಅವರಿಂದ ₹8,25,210 ದಂಡ ವಸೂಲಿ ಮಾಡಲಾಯಿತು. ಕರ್ತವ್ಯಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 1,092 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 501 ಪುರುಷ ಪ್ರಯಾಣಿಕರಿಗೆ ₹50,100 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮಲ್ಲೇಶ್ವರ–ಬನಶಂಕರಿ ನಡುವೆ ಬಸ್ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಿಂದ ಬನಶಂಕರಿ ಬಸ್ ನಿಲ್ದಾಣಕ್ಕೆ ಬಿಎಂಟಿಸಿ ಬಸ್ ಸಂಚರಿಸಲಿದೆ.

ನೂತನ ಬಸ್ ಮಾರ್ಗವು ಮಲ್ಲೇಶ್ವರ ಬಸ್ ನಿಲ್ದಾಣದಿಂದ ಮಲ್ಲೇಶ್ವರ ಸರ್ಕಲ್, ರಾಜಾಜಿನಗರ ಇಎಸ್‌ಐ, ಮಾಗಡಿ ರಸ್ತೆ ಟೋಲ್ ಗೇಟ್, ವಿಜಯನಗರ ಹಾಗೂ ನಾಯಂಡಹಳ್ಳಿ ಜಂಕ್ಷನ್ ಮಾರ್ಗವಾಗಿ ಬನಶಂಕರಿ ಬಸ್ ನಿಲ್ದಾಣಕ್ಕೆ ತಲುಪಲಿದೆ ಎಂದು ಬಿಎಂಟಿಸಿ ಸಾರ್ವಜನಿಕ ಅಧಿಕಾರಿ ತಿಳಿಸಿದ್ದಾರೆ.

ಆಟೊ ಚಾಲಕರ ವಿರುದ್ಧ 833 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ ಆಟೊ ಚಾಲಕರ ವಿರುದ್ಧ 833ಕ್ಕಿಂತಲೂ ಹೆಚ್ಚು ಪ್ರಕರಣಗಳನ್ನು ಸಂಚಾರ ಪೊಲೀಸರು ದಾಖಲಿಸಿದ್ದಾರೆ.

'ಚಾಲನ ಪರವಾನಗಿ ಪತ್ರವಿಲ್ಲದೇ ವಾಹನ ಚಾಲನೆ ಮಾಡುವವರ ವಿರುದ್ಧ ಮೂರು ಪ್ರಕರಣ ದಾಖಲು ಮಾಡಲಾಗಿದೆ. ನಿಗದಿತ ದರಕ್ಕಿಂತ ಹೆಚ್ಚಿನ ದರವನ್ನು ಪಡೆಯುವವರ ವಿರುದ್ಧ 213 ಪ್ರಕರಣ ದಾಖಲಿಸಲಾಗಿದೆ. ಬಾಡಿಗೆಗೆ ಹೋಗಲು ನಿರಾಕರಣೆ ಮಾಡಿದವರ ವಿರುದ್ಧ 234 ಹಾಗೂ ಇತರೆ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ 383 ಪ್ರಕರಣ ದಾಖಲು ಮಾಡಲಾಗಿದೆ' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

'ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವುದರಿಂದ ರಸ್ತೆ ಅಪಘಾತಗಳು ಸಂಭವಿಸಲು ಕಾರಣವಾಗುತ್ತಿವೆ. ಪರವಾನಗಿ ಪತ್ರ ಹೊಂದಿಲ್ಲದೇ ಆಟೊ ಚಾಲನೆ ಮಾಡುತ್ತಿರುವುದು, ಹೆಚ್ಚಿನ ದರ ಕೇಳುತ್ತಿರುವುದು ಹಾಗೂ ಪ್ರಯಾಣಿಕರು ಕೇಳಿದ ಸ್ಥಳಕ್ಕೆ ಬಾರದಿರುವ ಸಂಬಂಧ ದೂರುಗಳು ಬಂದಿದ್ದವು. ದೂರು ಬಂದ ಕಾರಣ ಕಾರ್ಯಾಚರಣೆ ನಡೆಸಿ ಪ್ರಕರಣಗಳನ್ನು ದಾಖಲು ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

FARNAZ

ಜಿಕೆವಿಕೆ ಆವರಣದಲ್ಲಿ ಶನಿವಾರ ನಡೆದ ಉತ್ಪನ್ನಗಳ ಸಂತೆಯಲ್ಲಿ ತರಕಾರಿ ಸೆಲ್ಫಿ ಪಾಯಿಂಟ್‌ನಲ್ಲಿ ಯುವತಿಯರು ಫೋಟೊ ತೆಗೆಸಿಕೊಂಡರು – ಪ್ರಜಾವಾಣಿ ಚಿತ್ರ

'ಉತ್ಪನ್ನಗಳ ಸಂತೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉತ್ಪನ್ನಗಳ ಸಂತೆ'ಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಶನಿವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಕೇಂದ್ರಗಳಲ್ಲಿ ಉತ್ಪಾದಿಸಿದ ಕೃಷಿ ಉತ್ಪನ್ನಗಳು, ಕೃಷಿಗೆ ಸಂಬಂಧಿಸಿದ ತಂತ್ರಜ್ಞಾನ ರೈತರಿಗೆ ಪರಿಚಯಿಸಲು ಈ ಸಂತೆ ವೇದಿಕೆಯಾಗಿದೆ' ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಇದುವರೆಗೆ 485 ತಂತ್ರಜ್ಞಾನಗಳು, 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ರಾಜ್ಯದ ಒಟ್ಟಾರೆ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಇದು ನಿರ್ಣಾಯಕ ಪಾತ್ರ ವಹಿಸಿದೆ. ಆಧುನಿಕ ಉಪಕರಣಗಳು ಹಾಗೂ ಉತ್ಪನ್ನಗಳು ಏಕಗವಾಕ್ಷಿಯಡಿಯಲ್ಲಿ ತಲುಪಿಸಲು ಉತ್ಪನ್ನಗಳ ಸಂತೆ ಸಹಕಾರಿ ಆಗಲಿದೆ' ಎಂದರು.

ಕಂಪನಿ ಹೆಸರಿನ ನಕಲಿ ಬಟ್ಟೆ ಮಾರಾಟ: ₹4 ಲಕ್ಷದ ಬಟ್ಟೆ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ನಕಲಿ ಬಟ್ಟೆಗಳನ್ನು ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿ, ₹4 ಲಕ್ಷ ಮೌಲ್ಯದ ನಕಲಿ ಬಟ್ಟೆಗಳನ್ನು ಜಪ್ತಿ ಮಾಡಿದ್ದಾರೆ.

'ನಗರದ ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾಮೂಲ್‌ಪೇಟೆ ಅಂಗಡಿಯೊಂದರಲ್ಲಿ ನಕಲಿ ಬಟ್ಟೆಗಳನ್ನು ಮಾರಾಟ ಮಾಡಲಾಗುತ್ತಿತ್ತು. ಕಂಪನಿಯ ಅಸಲಿ ಬಟ್ಟೆಗಳೆಂದು ನಂಬಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿತ್ತು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ನಕಲಿ ಬಟ್ಟೆಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯಗಳು ನಡೆಯುವ ಕಾರಣ, ಈ ಕೆಳಕಂಡ ಸ್ಥಳಗಳಲ್ಲಿ ಸೋಮವಾರ (ಜೂನ್ 24) ಬೆಳಿಗ್ಗೆ 10.30ರಿಂದ ಮಧ್ಯಾಹ್ನ 4ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತ್ ಜಯಂತಿ ಕಾಲೇಜು, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿ.ಎಸ್.ಐ ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕನಕ ಶ್ರೀ ಲೇಔಟ್, ಗೆದ್ದಲಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿ.ಹೆಚ್.ಕೆ. ಇಂಡಸ್ಟ್ರೀಸ್, ಜಾನಕೀ ರಾಮ್ ಲೇಔಟ್, ವಡ್ಡರ ಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮ ವಿದ್ಯಾನಗರ, ಬೈರತಿಹಳ್ಳಿ, ಕೆ.ಆರ್.ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಮ್ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಆಂಧ್ರ ಕಾಲೋನಿ ಮಂಜುನಾಥ್ ನಗರ, ಹೊರಮಾವು ಬಿಬಿಎಂಪಿ, ಅಗರ ಗ್ರಾಮ, ಪಟಾಲಮ್ಮ ಟೆಂಪಲ್, ಎ.ಕೆ.ಆರ್ ಸ್ಕೂಲ್, ಹೊಸ ಮಿಲೇನಿಯಮ್ ಸ್ಕೂಲ್, ಲಕ್ಕಮ್ಮ ಲೇಔಟ್, ಪ್ರಕಾಶ್ ಗಾರ್ಡನ್, ಕ್ರಿಸ್ಟೆನ್ ಕಾಲೇಜು ರಸ್ತೆ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಇರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. Visit: www.rera.karnataka.gov.in

'ಪರಿಶ್ರಮ' ನೀಟ್ ಅಕಾಡೆಮಿಯಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ • ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ

ಮೂಲ ಮರೆತರೆ ಯಶಸ್ಸು ಸಾಧ್ಯವಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮ ಮೂಲವನ್ನು ಮರೆತರೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

'ಪರಿಶ್ರಮ' ನೀಟ್ ಅಕಾಡೆಮಿಯಲ್ಲಿ ಕಲಿತು ನೀಟ್ ಪರೀಕ್ಷೆಯಲ್ಲಿ ಯಶಸ್ವಿಯಾದ ವಿದ್ಯಾರ್ಥಿಗಳಿಗೆ ಶನಿವಾರ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, 'ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ. ನೀವೇ ಅವಕಾಶಗಳನ್ನು ಹುಡುಕಿಕೊಂಡು ಹೋಗಬೇಕು ಎಂದು ಇಂದಿರಾ ಗಾಂಧಿ ಹೇಳಿದ್ದರು. ಪರಿಶ್ರಮ ಸಂಸ್ಥೆ ನಿಮಗೆ ದಾರಿ ದೀಪವಾಗಿ ಹೊಸ ಬೆಳಕು ನೀಡಲಿದೆ' ಎಂದರು.

'ಇತಿಹಾಸ ಮರೆತವ, ಇತಿಹಾಸ ಸೃಷ್ಟಿಸಲಾರ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದಾರೆ. ಸದ್ಯ ದೇಶದಲ್ಲಿ ನೀಟ್, ಹಾಗೂ ಬೇರೆ ಬೇರೆ ಪರೀಕ್ಷೆಗಳ ಅಕ್ರಮಗಳ ಬಗ್ಗೆ ಚರ್ಚೆಯಾಗುತ್ತಿದೆ' ಎಂದೂ ಹೇಳಿದರು.

ಪರಿಶ್ರಮ ನೀಟ್ ಅಕಾಡೆಮಿ ಮುಖ್ಯಸ್ಥರೂ ಆಗಿರುವ ಶಾಸಕ ಪ್ರದೀಪ್ ಈಶ್ವರ್ ಅವರನ್ನು ಉದ್ದೇಶಿಸಿ ಮಾತನಾಡಿದ ಶಿವಕುಮಾರ್, 'ಪ್ರದೀಪ್ ಈಶ್ವರ್ ಅವರು ತಮ್ಮ ಮಾತು, ಆಚಾರ ವಿಚಾರ ಪ್ರಚಾರ ಮಾಡಿ ವಿಧಾನಸೌಧಕ್ಕೆ ಬಂದಿದ್ದಾರೆ. ಮಾಜಿ ಶಾಸಕ ಶಿವಶಂಕರ್ ರೆಡ್ಡಿಯವರು ಪ್ರದೀಪ್ ಈಶ್ವರ್ ಅವರನ್ನು ನನ್ನ ಬಳಿ ಕರೆದುಕೊಂಡು ಬಂದಾಗ, 'ಯಾರೋ ಹುಚ್ಚನನ್ನು ಕರೆದುಕೊಂಡು ಬಂದಿದ್ದೀರಿ' ಎಂದಿದ್ದೆ. ಆಗ ಅವರು, 'ಇಲ್ಲ, ಈತ ಉಪಯೋಗಕ್ಕೆ ಬರುತ್ತಾರೆ. ಒಂದು ಅವಕಾಶ ನೀಡಿ' ಎಂದರು. ಅವರು ಈಗ ರಾಜ್ಯದಲ್ಲೇ ಹೊಸ ಇತಿಹಾಸ ಸೃಷ್ಟಿ ಮಾಡಿ ಶಾಸಕನಾಗಿದ್ದಾರೆ. ವಿಧಾನಸಭೆಯಲ್ಲೂ ತಮ್ಮ ಆಚಾರ, ವಿಚಾರ ಪ್ರತಿಪಾದನೆ ಮಾಡುತ್ತಿದ್ದಾರೆ' ಎಂದರು.

'ಪರಿಶ್ರಮ ಸಂಸ್ಥೆಯವರು ಇಲ್ಲಿನ ಮಕ್ಕಳನ್ನು ಯಾವ ರೀತಿ ತಯಾರು ಮಾಡಿದ್ದಾರೆ ಎಂದರೆ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ 250 ಸೀಟುಗಳಿದ್ದರೆ ಅದರಲ್ಲಿ 150ರಿಂದ 180 ಮಕ್ಕಳು ಇಲ್ಲಿ ಶಿಕ್ಷಣ ಪಡೆದವರೇ ಇದ್ದಾರೆ. ಇದಕ್ಕಿಂತ ದೊಡ್ಡ ಸಾಧನೆ, ಬದಲಾವಣೆ ಯಾರೂ ಮಾಡಲು ಸಾಧ್ಯವಿಲ್ಲ' ಎಂದರು.

'ಪ್ರದೀಪ್ ಈಶ್ವರ್ ಅವರು ತಮ್ಮ ಸಂಸ್ಥೆಗಾಗಿ ಸ್ವಂತ ಕಟ್ಟಡ ಬೇಕು ಎಂದು ಮನವಿ ಮಾಡಿದ್ದಾರೆ. ನನ್ನ ಅವಧಿಯಲ್ಲಿ ಜಾಗ ಮಂಜೂರು ಮಾಡುವುದಾಗಿ ಭರವಸೆ ನೀಡುತ್ತೇನೆ' ಎಂದರು.

'ಪರಿಶ್ರಮ' ನೀಟ್ ಅಕಾಡೆಮಿಯಲ್ಲಿ ಕಲಿತು ನೀಟ್ ಪರೀಕ್ಷೆಯಲ್ಲಿ ಯಶಸ್ವಿಯಾದ ವಿದ್ಯಾರ್ಥಿಗಳಿಗೆ ಶನಿವಾರ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಲಕ್ಷ್ಮಣ್, ಅಕಾಡೆಮಿಯ ಮುಖ್ಯಸ್ಥ ಪ್ರದೀಪ್ ಈಶ್ವರ್, ಸಚಿವರಾದ ಎಂ.ಸಿ.ಸುಧಾಕರ್, ಮಧು ಬಂಗಾರಪ್ಪ ಇದ್ದರು

'ಎ', 'ಬಿ' ಖಾತೆ: ಅಧ್ಯಯನಕ್ಕೆ ಮಾಜಿ ಮೇಯರ್‌ಗಳ ಸಮಿತಿ– ಡಿಸಿಎಂ

ಬೆಂಗಳೂರು: 'ನಗರದಲ್ಲಿ 'ಎ' ಖಾತೆ, 'ಬಿ' ಖಾತೆ ಸೇರಿದಂತೆ ಅನೇಕ ಸಾರ್ವಜನಿಕ ಸಮಸ್ಯೆಗಳು ಮತ್ತು ಆಡಳಿತಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಮಾಜಿ ಮೇಯರ್‌ಗಳ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯ ಇಂದಿರಾ ಗಾಂಧಿ ಭವನದಲ್ಲಿ ಕಾಂಗ್ರೆಸ್ ಪಕ್ಷದ ಮಾಜಿ ಮೇಯರ್ ಮತ್ತು ಉಪಮೇಯರ್‌ಗಳ ಜತೆ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, '10 ದಿನಗಳಲ್ಲಿ ಮತ್ತೊಮ್ಮೆ ಸಭೆ ಸೇರುತ್ತೇವೆ. ಸಮಿತಿ ವರದಿ ಸಲ್ಲಿಸಿದ ಬಳಿಕ ಮುಖ್ಯಮಂತ್ರಿ ಮತ್ತು ಶಾಸಕರ ಜತೆ ಚರ್ಚೆ ಮಾಡುತ್ತೇವೆ. ನಂತರ ಕಾರ್ಯಯೋಜನೆ ರೂಪಿಸುತ್ತೇವೆ' ಎಂದರು.

'ಮಾಜಿ ಮೇಯರ್ ಹಾಗೂ ಉಪಮೇಯರ್‌ಗಳ ಜತೆ ಬೆಂಗಳೂರಿನ ಆಚಾರ–ವಿಚಾರಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಸಾರ್ವಜನಿಕರ ಸಮಸ್ಯೆಗಳ ಬಗ್ಗೆ, ಬಿಬಿಎಂಪಿ ಚುನಾವಣೆ ತಯಾರಿ ಬಗ್ಗೆ ಸಲಹೆ, ಅಭಿಪ್ರಾಯ ಕೇಳಿದ್ದೇವೆ' ಎಂದರು. ಬಿಬಿಎಂಪಿ ಚುನಾವಣೆ ಬಗ್ಗೆ ಕೇಳಿದ ಪ್ರಶ್ನೆಗೆ, 'ಖಂಡಿತವಾಗಿ ಚುನಾವಣೆ ಮಾಡಲೇಬೇಕು. ಅದನ್ನು ನಿರ್ಲಕ್ಷ್ಯ ಮಾಡಲು ಸಾಧ್ಯವಿಲ್ಲ' ಎಂದರು.

ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಜಿ.ಸಿ. ಚಂದ್ರಶೇಖರ್, ಮಂಜುನಾಥ್ ಭಂಡಾರಿ, ಮಾಜಿ ಮೇಯರ್‌ಗಳಾದ ಪಿ.ಆರ್. ರಮೇಶ್, ಪದ್ಮಾವತಿ, ಸಂಪತ್ ರಾಜ್ ಪಾಲ್ಗೊಂಡಿದ್ದರು.

'ವಾರದೊಳಗೆ ಹೊಸ ಜಾಹೀರಾತು ನೀತಿ ಕರಡು'

ಬೆಂಗಳೂರು: 'ಒಂದು ವಾರದೊಳಗೆ ಜಾಹೀರಾತು ನೀತಿಯ ಕರಡು ಪ್ರತಿಯನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬಿಬಿಎಂಪಿ ಕಚೇರಿಯಲ್ಲಿ ಶುಕ್ರವಾರ ಅಧಿಕಾರಿಗಳೊಂದಿಗಿನ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕರಡು ಪ್ರತಿಯ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನ ಕಾಲಾವಕಾಶ ನೀಡಲಾಗುವುದು. ಅನೇಕ ವರ್ಷಗಳಿಂದ ನ್ಯಾಯಾಲಯ ದಲ್ಲಿ ಪ್ರಕರಣಗಳು ಇದ್ದ ಕಾರಣಕ್ಕೆ ಕಳೆದ ಒಂದು ವರ್ಷದಿಂದ ಜಾಹೀರಾತು ನೀತಿ ಬಾಕಿ ಉಳಿದಿತ್ತು. ಪ್ರಸ್ತುತ ಸಂಘ, ಸಂಸ್ಥೆಗಳ ಜೊತೆ ಚರ್ಚೆ ನಡೆಸಲಾಗಿದೆ. 60 ಅಡಿಗಿಂತ ಹೆಚ್ಚಿನ ಅಗಲದ ರಸ್ತೆಗಳಲ್ಲಿ 'ಗ್ರೂಪ್ ಪ್ಯಾಕೇಜ್' ತಯಾರಿಸಿ ಅವಕಾಶ ನೀಡಲಾಗುವುದು ಎಂದು ಹೇಳಿದರು.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ದಿನಾಂಕ: 21.06.2024
ಎನ್ಐಎಎನ್‌ಪಿ/ಎಡಿವಿ–ಪ್ರಾಜೆಕ್ಟ್–6–ಎಸ್ಟಾ/2024

"ಸ್ಪರ್ಮ್ ಟ್ರಾನ್ಸ್‌ಕ್ರಿಪ್ಟ್ ಸಿಗ್ನೇಚರ್ಸ್ ಆಧಾರದಲ್ಲಿ ಬಫೆಲೊ ಬುಲ್ ಫರ್ಟಿಲಿಟಿ ಡಯಾಗ್ನೊಸ್ಟಿಕ್ ಚಿಪ್ ಅಭಿವೃದ್ಧಿ" ಎಂಬ ಶೀರ್ಷಿಕೆಯುಳ್ಳ, ಐಸಿಎಆರ್–ನ್ಯಾಷನಲ್ ಫೆಲೊ ಪ್ರಾಜೆಕ್ಟ್ ಅಡಿಯಲ್ಲಿ ರಿಸರ್ಚ್ ಅಸೋಸಿಯೇಟ್ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ ಮುಂತಾದ ವಿವರಗಳು ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
ಸಹಿ/– ಆಡಳಿತಾಧಿಕಾರಿ

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎಫ್.ನಂ.ಎನ್ಐಎಎನ್‌ಪಿ/2–5(169)/ಎಸ್ಟಾ/2021–22 ದಿನಾಂಕ: 21–06–2024
ಎನ್ಐಎಎನ್‌ಪಿ/ಎಡಿವಿ–ಪ್ರಾಜೆಕ್ಟ್–8–ಎಸ್ಟಾ/2024

"ಟ್ರಾನ್ಸ್‌ಜೆನಿಕ್ ಚಿಕನ್ ಫಾರ್ ಎಕ್ಸ್‌ಪ್ರೆಷನ್ ಆಫ್ ಲ್ಯೂಕೆಮಿಯಾ ಇನ್ಹಿಬಿಟರಿ ಫ್ಯಾಕ್ಟರ್ (ಎಲ್ಐಎಫ್); ಎ ಪೊಟೆನ್ಷಿಯಲ್ ಸೈಟೊಕೈನ್ಸ್ ಇನ್ ಸ್ಟೆಮ್ ಸೆಲ್ ಬಯಾಲಜಿ ಅಂಡ್ ಥೆರಪಿ" ಎಂಬ ಶೀರ್ಷಿಕೆಯುಳ್ಳ ಸಮಯಾಧಾರಿತ ಡಿಎಸ್‌ಟಿ–ಎಸ್ಇಆರ್‌ಬಿ ಯೋಜನೆಯ ಅಡಿಯಲ್ಲಿ ಪ್ರಾಜೆಕ್ಟ್ ಅಸೋಸಿಯೇಟ್–1 ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ ಮುಂತಾದ ವಿವರಗಳು ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
ಸಹಿ/– ಆಡಳಿತಾಧಿಕಾರಿ

PUBLIC NOTICE

This is to inform the general public that our client intends to purchase the properties, morefully set out in the schedule given herein below and collectively referred as the "Schedule Property", from its owner **Mr. Sandeep Kumar Reddy. D**, son of D. Venkateshwara Reddy, residing at No.147, 1st Floor, Vasavi Complex, 1st Main, Sheshadripuram, Bangalore-560020. Any person/s whomsoever having any right, title, interest or claim in the Schedule Property or any part thereof, in any manner or objecting to such sale in favour of our client should write to the undersigned within **Ten (10) days** of issuance of this public notice with all documentary proof on which they are basing their rights with regard to the Schedule Property. If no claims or objections are received within the stipulated time, it shall be deemed that the Schedule Property is free from all acts of encumbrances or claims whatsoever of any nature and our client shall proceed to complete the sale transaction.

SCHEDULE PROPERTY
ALL THAT PIECE AND PARCEL of the residentially converted lands situated at Kuppahalli Village, Nandi Hobli, Chikkaballapura Taluk, Chikkaballapura District.

Converted Sy No.	Extent	Boundary			
		East by	West by	North by	South by
64/3 (Old Survey No.64)	01 Acre 13.08 Guntas	Land in Sy No.63 of Kuppahalli Village	Nandi Ghadi	Land in Sy No.64/3 of Kuppahalli Village	Nandi Ghadi
64/7 (earlier Sy No.64/3, Old No.64)	26.08 Guntas	Land in Sy No.63 of Kuppahalli Village	Nandi Ghadi	Land in Sy No.63 of Kuppahalli Village	Nandi Ghadi

ILP INDIA LAW PRACTICE
Praveen Prabhakar / Prashanth Mirle
India Law Practice – ILP, Advocates and Attorneys
No. 7/5, First Floor, II Main, Palace Cross Road, Bangalore - 560 020
Phone: +91 80 3561220/2770 e-mail: contact@ilplaw.co.in
Date : 23/06/2024, Bangalore

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಶ್ರೀ. ಎಸ್. ರಾಜು ರವರ ಹೆಂಡತಿ ಶ್ರೀಮತಿ. ಎಂ. ರಾಧ ("ಮಾಲೀಕರು") ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯುಲ್ ಸ್ವತ್ತು ಸದರಿ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾರಾಟದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷಿದಾರರು, ಸದರಿಯವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲು ಸ್ವತ್ತನು ಖರೀದಿಸಲು ಮುಂದಾಗುವರು.

ಷೆಡ್ಯುಲು ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕು, ಕುಂದಣ ಹೋಬಳಿ, ತಿಂಡ್ಲು ಗ್ರಾಮದಲ್ಲಿರುವ 1 ಎಕರೆ 17 ಗುಂಟೆ ವಿಸ್ತೀರ್ಣವುಳ್ಳ ಸರ್ವೆ ನಂ. 101/2 ರ ಸ್ವತ್ತಿಗೆ ಚಕ್ಕುಬಂದಿ **ಪೂರ್ವಕ್ಕೆ** : ಸರ್ವೆ ನಂ. 102/1 ಮತ್ತು 102/2 ರ ಜಮೀನುಗಳು, **ಪಶ್ಚಿಮಕ್ಕೆ** : ಸರ್ವೆ ನಂ. 90/8 ರ ಜಮೀನು, **ಉತ್ತರಕ್ಕೆ** : ಸರ್ವೆ ನಂ. 101/1 ರ ಜಮೀನು, **ದಕ್ಷಿಣಕ್ಕೆ** : ಸರ್ವೆ ನಂ. 101/4, 101/6, 101/3 ಮತ್ತು 101/7 ರ ಜಮೀನುಗಳು.

ಸ್ಥಳ : ಬೆಂಗಳೂರು ದಿನಾಂಕ : ಜೂನ್ 23, 2024

ಸಹಿ./– ಎ. ಸುಪ್ರೀತ್, ವಕೀಲರು, ಕ್ರೆಸ್ಟ್ ಲಾ ಪಾರ್ಟ್ನರ್ಸ್,
33, ಝುವಿಯರ್ ಲೇಔಟ್, 1 ನೆ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು – 560 047.
ದೂ: 41473535 / 41473536

ಜುಲೈ 1ರಿಂದ ಎ.ಐ ಕ್ಯಾಮೆರಾ ಚಾಲನೆ

ಹೆದ್ದಾರಿ: ಎಟಿಎಂಎಸ್ ಕಾರಿಡಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ, ಮೈಸೂರು ನಗರ ಹಾಗೂ ಜಿಲ್ಲೆಯ ವ್ಯಾಪ್ತಿಯ ಹೆದ್ದಾರಿಗಳು ಜುಲೈ 1ರಿಂದ ಕೃತಕ ಬುದ್ಧಿಮತ್ತೆ (ಎ.ಐ) ಸಂಚಾರ ನಿರ್ವಹಣಾ ವ್ಯವಸ್ಥೆಯ (ಐಟಿಎಂಎಸ್) ಕಾರಿಡಾರ್ ಆಗಲಿವೆ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ತಿಳಿಸಿದ್ದಾರೆ.

'ಎಕ್ಸ್‌ಪ್ರೆಸ್ ವೇ, ಮೈಸೂರು ನಗರ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು ₹8.5 ಕೋಟಿ ವೆಚ್ಚದಲ್ಲಿ ಸ್ವಯಂ ಚಾಲಿತ ಕೃತಕ ಬುದ್ಧಿಮತ್ತೆ ಕ್ಯಾಮೆರಾ ಅಳವಡಿಕೆ ಮಾಡಲಾಗಿದೆ. ಎ.ಐ ಕ್ಯಾಮೆರಾಗಳು ಪೂರ್ಣ ಪ್ರಮಾಣದಲ್ಲಿ ಜುಲೈ 1ರಿಂದ ಚಾಲನೆಗೆ ಬರಲಿವೆ' ಎಂದು ತಿಳಿಸಿದ್ದಾರೆ.

'ವಾಹನಗಳ ನೋಂದಣಿ ಫಲಕಗಳನ್ನು ಪತ್ತೆಹಚ್ಚಲು ಈ ಕ್ಯಾಮೆರಾಗಳು ಕೆಲಸ ಮಾಡಲಿವೆ. ಹೆದ್ದಾರಿಗಳಲ್ಲಿ ಅಪಘಾತ ಪ್ರಕರಣ ಕಡಿಮೆ ಮಾಡಲು ಹಾಗೂ ಮಿತಿಮೀರಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ನಿಗಾ ಇಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಎಕ್ಸ್‌ಪ್ರೆಸ್ ವೇನ ಮೂರು ಸ್ಥಳಗಳಲ್ಲಿ ಹೆಚ್ಚು ಅಪಘಾತ ಪ್ರಕರಣಗಳು ನಡೆಯುತ್ತಿವೆ. ಅಲ್ಲಿ ಸೂಚನಾ ಫಲಕ ಹಾಕಲಾಗಿದೆ. ಅಲ್ಲದೇ ಕ್ಯಾಮೆರಾ ಸಂಖ್ಯೆ ಹೆಚ್ಚಿಸಲಾಗಿದೆ' ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹೇಳುತ್ತಾರೆ.

ಎಕ್ಸ್‌ಪ್ರೆಸ್ ವೇನಲ್ಲಿ ಎ.ಐ ಕ್ಯಾಮೆರಾ ಅಳವಡಿಕೆಯಿಂದ ಅಪಘಾತ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು, ಬೆಂಗಳೂರಿನಿಂದ ಹೊರವಲಯಕ್ಕೆ ಸಂಪರ್ಕಿಸುವ ನಾಲ್ಕು ಪ್ರಮುಖ ಹೆದ್ದಾರಿಯಲ್ಲೂ ಕೃತಕ ಬುದ್ಧಿಮತ್ತೆ (ಎಐ) ಸಂಚಾರ ನಿರ್ವಹಣಾ ವ್ಯವಸ್ಥೆಯ (ಐಟಿಎಂಎಸ್) ಅನುಷ್ಠಾನಕ್ಕೆ ತರಲು ಪೊಲೀಸ್ ಇಲಾಖೆಯ ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ ಮುಂದಾಗಿದೆ.

ತುಮಕೂರು ರಸ್ತೆಯಲ್ಲಿ ಶಿರಾದ ವರೆಗೆ, ಕನಕಪುರ ರಸ್ತೆಯಲ್ಲಿ ಕೊಳ್ಳೇಗಾಲದ ವರೆಗೆ, ಹೊಸೂರು ರಸ್ತೆಯಲ್ಲಿ ಅತ್ತಿಬೆಲೆ ತನಕ ಮತ್ತು ಕೋಲಾರ ರಸ್ತೆಯಲ್ಲಿ ಈ ವ್ಯವಸ್ಥೆ ಅನುಷ್ಠಾನಕ್ಕೆ ತರಲು ಮುಂದಾಗಿದ್ದೇವೆ. ಶೀಘ್ರದಲ್ಲೇ ಟೆಂಡರ್ ಸಹ ಕರೆಯಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಆರ್ಥಿಕ ಸಲಹೆಗೆ ವಿದೇಶಿ ಕಂಪನಿ ಬೇಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲೇ ನಿವೃತ್ತ ಐಎಎಸ್ ಅಧಿಕಾರಿಗಳೂ ಸೇರಿದಂತೆ ಅನುಭವಿ ತಜ್ಞರು ಇರುವಾಗ ರಾಜ್ಯ ಸರ್ಕಾರವು ಸಂಪನ್ಮೂಲ ಸಂಗ್ರಹಕ್ಕೆ ಸಲಹೆ ಪಡೆಯಲು ವಿದೇಶಿ ಕಂಪನಿಯನ್ನು ನೇಮಿಸಿಕೊಳ್ಳುವ ಅಗತ್ಯವಿದೆಯೆ' ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಪ್ರಶ್ನಿಸಿದ್ದಾರೆ.

ಈ ಕುರಿತು ಶನಿವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ರಾಜ್ಯ ಸರ್ಕಾರವು ವರಮಾನ ಸಂಗ್ರಹದ ಕುರಿತು ಸಲಹೆ ಪಡೆಯಲು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ ಎಂಬ ಕಂಪನಿಗೆ ₹ 10 ಕೋಟಿ ಪಾವತಿಸುತ್ತಿದೆ ಎಂಬ ಮಾಹಿತಿ ನೋಡಿ ಆಶ್ಚರ್ಯವಾಯಿತು. ಸರ್ಕಾರ ಇಂತಹ ದುಬಾರಿ ವೆಚ್ಚದ ನಿರ್ಧಾರಗಳನ್ನು ಕೈಗೊಳ್ಳುವ ಅಗತ್ಯವಿದೆಯೆ' ಎಂದು ಕೇಳಿದ್ದಾರೆ.

ಲಹರ್ ಸಿಂಗ್

ನಿವೃತ್ತ ಐಎಎಸ್ ಅಧಿಕಾರಿಗಳಾದ ಐ.ಎಸ್.ಎನ್. ಪ್ರಸಾದ್, ಚಿರಂಜೀವಿ ಸಿಂಗ್, ವಿ. ಬಾಲಸುಬ್ರಮಣಿಯನ್, ಎಂ.ಆರ್. ಶ್ರೀನಿವಾಸ ಮೂರ್ತಿ ಸೇರಿ ಹಲವು ಅನುಭವಿಗಳು ವರಮಾನ ಸಂಗ್ರಹ ಹೆಚ್ಚಳಕ್ಕೆ ಸಲಹೆ ನೀಡುವ ಸಾಮರ್ಥ್ಯ ಹೊಂದಿದ್ದಾರೆ. ರಾಜ್ಯದಲ್ಲೇ ಇಂತಹ ಪ್ರತಿಭಾವಂತರು ಇರುವಾಗ ವಿದೇಶಿ ಕಂಪನಿಯ ಸಲಹೆ ಅನಿವಾರ್ಯವಾಗದು ಎಂದಿದ್ದಾರೆ.

'ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯ ಸರ್ಕಾರದ ಆರ್ಥಿಕತೆ ಸಂಕಷ್ಟದಲ್ಲಿದೆ ಎಂಬುದು ಈ ತೀರ್ಮಾನದಿಂದ ಬಹಿರಂಗವಾಗಿದೆ. ರಾಜ್ಯದ ದೀರ್ಘಾವಧಿಯ ಹಿತಾಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡು ಗ್ಯಾರಂಟಿಗಳನ್ನು ಹಿಂಪಡೆಯುವುದಕ್ಕೂ ಸರ್ಕಾರ ಹಿಂದೇಟು ಹಾಕಬಾರದು. ಸರ್ಕಾರ ಈ ವಿಚಾರದಲ್ಲಿ ಪ್ರತಿಷ್ಠೆಗೆ ಬೀಳಬಾರದು' ಎಂದು ಆಗ್ರಹಿಸಿದ್ದಾರೆ.

B / ARBI / Regn. 2557 / 72-73 Dt: 28th March 1973

ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ.)
ನಂ. 35, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು – 560 004.

ಪತ್ರಿಕಾ ಪ್ರಕಟಣೆ

ಸಂಘವು ಈ ಮೂಲಕ ಸಾರ್ವಜನಿಕವಾಗಿ ತಿಳಿಸುವುದೇನೆಂದರೆ,ಇದೇ ಬೆಂಗಳೂರು ದಕ್ಷಿಣ ತಾಲೂಕು ಕೆಂಗೇರಿ ಹೋಬಳಿ ಪಟ್ಟಣಗೆರೆಗೆ ಸರ್ವೆ ನಂ.17/1, 20/1, 41/6, 3, 4, 5, 10, 11 ಮತ್ತು 19 ಹಾಗೂ ಬೆಂಗಳೂರು ದಕ್ಷಿಣ ತಾಲೂಕು ಕೆಂಗೇರಿ ಹೋಬಳಿ ಹಲಗೆವಡೇರಹಳ್ಳಿಗೆ ಸೇರಿದ ಸರ್ವೆ ನಂ. 195, 196, 216, 224/2, 228, 237, 237/1, 238, 240, 242/1, 242/2, 239 ಮತ್ತು 241ಗಳಿಗೆ ಸೇರಿದ ಒಟ್ಟು 62 ಎಕರೆ 21 ಗುಂಟೆಯಲ್ಲಿ ನಿರ್ಮಿಸಿರುವ ಸಂಘದ ಐದನೇ ಹಂತ ಸಚ್ಚಿದನಂದನಗರ ಬಡಾವಣೆಗೆ ಸಂಬಂಧಿಸಿದಂತೆ ಸಂಘವು ಹಲವು ಬಾರಿ ಪತ್ರಿಕಾ ಪ್ರಕಟಣೆಗಳನ್ನು ನೀಡಿ ತಮ್ಮ–ತಮ್ಮ ನಿವೇಶನಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಸಂಘಕ್ಕೆ ಸಲ್ಲಿಸಲು ಸದಸ್ಯರುಗಳಲ್ಲಿ ಕೋರಿರುವುದು ಸರಿಯಷ್ಟೆ. ಆದಾಗಿ, ಈ ಕೆಳಗೆ ನಮೂದಿಸಿರುವ ನಿವೇಶನಗಳಿಗೆ ಸಂಬಂಧಿಸಿದಂತೆ ಹಂಚಿಕೆಯಾದ / ನೋಂದಣಿಯಾದ ಕುರಿತು ಯಾವುದೇ ದಾಖಲಾತಿಗಳನ್ನು ಸದಸ್ಯರುಗಳು ಸಂಘಕ್ಕೆ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಸಂಘದ ಐದನೇ ಹಂತ ಬಡಾವಣೆಯ ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸಂಘವು ಸದರಿ ಈ ಕೆಳಗೆ ನಮೂದಿಸಿರುವ ನಿವೇಶನಗಳನ್ನು ಸಂಘದ ಸದಸ್ಯರುಗಳಿಗೆ ಹಂಚಿಕೆ / ನೋಂದಣಿಯಾಗಿದ್ದಲ್ಲಿ ಅಂತಹ ದಾಖಲಾತಿಗಳನ್ನು ಮತ್ತು ಸದಸ್ಯತ್ವದ ಮಾಹಿತಿಗಳನ್ನು ಸಂಘಕ್ಕೆ ಈ ಪತ್ರಿಕಾ ಪ್ರಕಟಣೆಯ **15 ದಿನಗಳ** ಒಳಗಾಗಿ ಸಂಘದ ಕೆಲಸದ ವೇಳೆಯಲ್ಲಿ ಬಂದು ತಲುಪಿಸತಕ್ಕದ್ದು. ಮುಂದುವರೆದು, ನಿಗದಿತ ದಿನಾಂಕದ ಒಳಗಾಗಿ ಈ ಕೆಳಗೆ ನಮೂದಿಸಿರುವ ನಿವೇಶನ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಸೂಕ್ತ ದಾಖಲಾತಿಗಳನ್ನು ಸಂಘಕ್ಕೆ ತಲುಪಿಸದೇ ಇದ್ದಲ್ಲಿ, ಸದರಿ ಈ ಕೆಳಗೆ ನಮೂದಿಸಿರುವ ನಿವೇಶನಗಳನ್ನು ಖಾಲಿ ನಿವೇಶನಗಳೆಂದು ಎಂದು ಘೋಷಿಸಿ, ಯಾವುದೇ ಸದಸ್ಯರುಗಳಿಗೆ ಹಂಚಿಕೆ/ ನೋಂದಣಿಯಾಗಿರುವುದಿಲ್ಲ ಎಂದು ನಿರ್ಧರಿಸಿ, ಇನ್ನೂ ನಿವೇಶನ ಪಡೆಯದೇ ಇರುವಂತಹ ಸಂಘದ ಹಿರಿಯ ಅರ್ಹ / ನಿವೇಶನ ವಂಚಿತ ಸದಸ್ಯರುಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಈ ಮೂಲಕ ಸಾರ್ವಜನಿಕವಾಗಿ ತಿಳಿಸಲು ಸಂಘವು ಇಚ್ಛಿಸುತ್ತದೆ.

ಖಾಲಿ ಇರುವ ನಿವೇಶನಗಳ ವಿವರ ಈ ಕೆಳಗಿನಂತಿದೆ:

ಕ್ರಮ ಸಂಖ್ಯೆ	ನಿವೇಶನ ಸಂಖ್ಯೆ	ಕ್ರಮ ಸಂಖ್ಯೆ	ನಿವೇಶನ ಸಂಖ್ಯೆ	ಕ್ರಮ ಸಂಖ್ಯೆ	ನಿವೇಶನ ಸಂಖ್ಯೆ	ಕ್ರಮ ಸಂಖ್ಯೆ	ನಿವೇಶನ ಸಂಖ್ಯೆ	ಕ್ರಮ ಸಂಖ್ಯೆ	ನಿವೇಶನ ಸಂಖ್ಯೆ
01	166	11	355	21	267/A	31	518	41	600
02	167	12	355/1	22	268	32	544	42	603
03	168	13	355/2	23	268/A	33	547	43	581
04	173	14	527	24	367	34	545	44	584
05	174	15	574	25	582	35	546	45	725
06	175	16	575	26	583	36	551	46	294
07	176	17	576/A	27	558	37	550	47	295
08	382	18	576	28	476	38	552		
09	367	19	294/A	29	483	39	558		
10	334	20	267	30	486	40	718		

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,
ಸಹಿ/–
ಕಾರ್ಯದರ್ಶಿ
(ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ)

ದಿನಾಂಕ: 22.06..2024
ಸ್ಥಳ : ಬೆಂಗಳೂರು.

ಲಾರಿ ಚಕ್ರ ಹರಿದು ಮಗು ಸಾವು

ದೊಡ್ಡಬಳ್ಳಾಪುರ: ದಾಬಸ್‌ಪೇಟೆ–ದೊಡ್ಡಬಳ್ಳಾಪುರ ರಾಷ್ಟ್ರೀಯ ಹೆದ್ದಾರಿಯ ಕೆಸ್ತೂರು ಗೇಟ್ ಬಳಿ ಶುಕ್ರವಾರ ನಡೆದ ಅಪಘಾತದಲ್ಲಿ ಐದು ವರ್ಷದ ಮಗು ಸ್ಥಳದಲ್ಲೇ ಮೃತಪಟ್ಟಿದೆ.

ಧನ್ವಿತ್ ಮೃತ ಮಗು. ತಾಯಿ ಜತೆ ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದಾಗ ತುಮಕೂರು ಕಡೆಯಿಂದ ಬಂದ ಲಾರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ರಸ್ತೆಗೆ ಬಿದ್ದ ಮಗುವಿನ ಮೇಲೆ ಲಾರಿ ಚಕ್ರ ಹರಿದಿದೆ. ದ್ವಿಚಕ್ರವಾಹನ ಸವಾರ ಅಂಜಿನಪ್ಪ ಹಾಗೂ ಹಿಂಬದಿ ಕುಳಿತಿದ್ದ ಮಗುವಿನ ತಾಯಿ ಮಮತಾ ಅವರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಸುದ್ದಿ 2 ನಿಮಿಷ

ಉದ್ಯೋಗಕ್ಕೆ ಸ್ಲೋವಾಕಿಯಾಕ್ಕೆ ತೆರಳಿದ 94 ಅಭ್ಯರ್ಥಿಗಳು

ಬೆಂಗಳೂರು: ಐಟಿಐ, ಡಿಪ್ಲೊಮಾ ಪೂರ್ಣಗೊಳಿಸಿದ 94 ಅಭ್ಯರ್ಥಿಗಳಿಗೆ ಸ್ಲೋವಾಕಿಯಾ ದೇಶದಲ್ಲಿ ಉದ್ಯೋಗ ಕಲ್ಪಿಸುವಲ್ಲಿ ಕರ್ನಾಟಕ ಕೌಶಲಾಭಿವೃದ್ಧಿ ನಿಗಮವು ಯಶಸ್ವಿಯಾಗಿದೆ.

ಸ್ಲೋವಾಕಿಯಾ ದೇಶವು 2,500 ಹುದ್ದೆಗಳ ನೇಮಕಾತಿಗೆ ಇತ್ತೀಚೆಗೆ ಪ್ರಕ್ರಿಯೆ ಆರಂಭಿಸಿತ್ತು. ತಕ್ಷಣ ಕಾರ್ಯ-ಪ್ರವೃತ್ತರಾದ ಕೌಶಲಾಭಿವೃದ್ಧಿ, ಜೀವನೋಪಾಯ ಸಚಿವ ಶರಣಪ್ರಕಾಶ ಪಾಟೀಲ, ವಿದೇಶಾಂಗ ವ್ಯವಹಾರಗಳ ಇಲಾಖೆಯನ್ನು ಸಂಪರ್ಕಿಸಿ, ಆ ದೇಶಕ್ಕೆ ಅರ್ಹರನ್ನು ಕಳುಹಿಸಲು ಒಡಂಬಡಿಕೆ ಮಾಡಿಕೊಂಡಿದ್ದಾರೆ. ಅದರ ಅನ್ವಯ ಮೊದಲ ಹಂತದಲ್ಲಿ 54 ಮಂದಿ ಐಟಿಐ ಮತ್ತು 31 ಮಂದಿ ಡಿಪ್ಲೊಮಾ ಕೋರ್ಸ್ ಮುಗಿಸಿದವರು ಆಯ್ಕೆ ಯಾಗಿದ್ದಾರೆ.

'ಆಯ್ಕೆಯಾದವರಿಗೆ ಬಿಡದಿಯ ಟೊಯೊಟಾ ಕಿರ್ಲೋಸ್ಕರ್ ಕಂಪನಿಯಲ್ಲಿ ತರಬೇತಿ ನೀಡಲಾಗಿದೆ. ಈ ತರಬೇತಿಗೆ ವೆಚ್ಚವಾದ ₹ 35 ಸಾವಿರವನ್ನು ಇಲಾಖೆಯಿಂದ ಭರಿಸಲಾಗಿದೆ. ಸ್ಲೋವಾಕಿಯಾದಲ್ಲಿ ಉದ್ಯೋಗಕ್ಕೆ ಅರ್ಹರಾದವರು ತಿಂಗಳಿಗೆ 970 ಯೂರೊ (₹ 86 ಸಾವಿರ) ವೇತನ ಪಡೆಯಲಿದ್ದಾರೆ. ಆ ದೇಶಕ್ಕೆ ತೆರಳಿದ ಮೊದಲ ತಂಡಕ್ಕೆ ಜೂನ್ 5ರಂದು, ಎರಡನೇ ತಂಡಕ್ಕೆ 20ರಂದು ಬೀಳ್ಕೊಡಲಾಗಿದೆ. ಇದೇ 24 ಮತ್ತು ಜುಲೈ 1ರಂದು ಉಳಿದವರು ತೆರಳಲಿದ್ದಾರೆ ಎಂದು ಸಚಿವ ಶರಣಪ್ರಕಾಶ ತಿಳಿಸಿದ್ದಾರೆ.

'ನಿಗಮವು 37 ಚಾಲಕರನ್ನು ಈಗಾಗಲೇ ಹಂಗರಿ ದೇಶಕ್ಕೆ ಕಳುಹಿಸಿದೆ. ಅಲ್ಲದೆ, ಮಾರಿಷಸ್‌ಗೆ ವೆಲ್ಡರ್‌ಗಳು, ಬಾಯ್ಲರ್ ತಯಾರಕರನ್ನು ಉದ್ಯೋಗಕ್ಕೆ ಕಳುಹಿಸಲಾಗುವುದು. ಆಸ್ಟ್ರೇಲಿಯಾ, ಜಪಾನ್, ಫಿನ್ಲೆಂಡ್, ಜರ್ಮನಿ, ನಾರ್ವೆ ಸೇರಿದಂತೆ ವಿವಿಧ ದೇಶಗಳಿಂದಲೂ ಬೇಡಿಕೆಯಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ. ಕನಗವಲ್ಲಿ ಹೇಳಿದ್ದಾರೆ.



₹22 ಕೋಟಿ ಆಸ್ತಿ ತೆರಿಗೆ ಪಾವತಿಸಿದ ಸ್ಯಾಬ್‌ಲ್ಯಾಬ್

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯ ಸ್ಯಾಬ್‌ಲ್ಯಾಬ್ ಇಂಡಿಯಾ ಸಂಸ್ಥೆಯಿಂದ 'ಒಂದು ಬಾರಿ ಪರಿಹಾರ ಯೋಜನೆ'ಯಲ್ಲಿ (ಒಟಿಎಸ್) ₹22 ಕೋಟಿ ಆಸ್ತಿ ತೆರಿಗೆ ಪಾವತಿಸಿದೆ.

ಗರುಡಾಚಾರ್ ಪಾಳ್ಯ ವಾರ್ಡ್ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಲ್ಲಿರುವ ಸ್ಯಾಪ್ ಲ್ಯಾಬ್ 2008-09ರಿಂದ 2023-24ರವರೆಗೆ ತಪ್ಪಾಗಿ ವರ್ಗ ಮತ್ತು ಕಡಿಮೆ ದರದಡಿಯಲ್ಲಿ ಆಸ್ತಿ ತೆರಿಗೆ ಪಾವತಿಸಿದ್ದರು. ಒಟಿಎಸ್ ಯೋಜನೆಯಲ್ಲಿ ಸಂಸ್ಥೆಗೆ ತಿಳಿವಳಿಕೆ ಪತ್ರ ನೀಡಲಾಗಿತ್ತು. ಅದರಂತೆ ತೆರಿಗೆ ಪಾವತಿ ಮಾಡಿದ್ದಾರೆ ಎಂದು ವಲಯ ಜಂಟಿ ಆಯುಕ್ತೆ ದಾಕ್ಷಾಯಿಣಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮಾಯಣ್ಣಸ್ವಾಮಿ ಕಿರಂಗೂರು ಅವರ 'ಕೊಪ್ಪದ ಕಾಂತಿ', 'ಕಾಂಬೋಲ', ತಲಪರಿಗೆಯ ತಾರಕ ಕೆ.ಟಿ. ರಾಮಸ್ವಾಮಿ', 'ರೋಚನಿ' ಪುಸ್ತಕಗಳ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಉದ್ಘಾಟನೆ: ಪ್ರದೀಪ್ ಕುಮಾರ್ ಸೇಠಿಯ, ಪುಸ್ತಕಗಳ ಪರಿಚಯ: ಗೋಪಾಲ ಅಯ್ಯಂಗಾರ್, ಕೋಟಿಗಾನಹಳ್ಳಿ ರಾಮಯ್ಯ, ಹುಲಿಕುಂಟೆ ಮೂರ್ತಿ, ಅಧ್ಯಕ್ಷತೆ: ಸುಬ್ಬು ಹೊಲೆಯಾರ್, ಅತಿಥಿಗಳು: ರಾಮಸ್ವಾಮಿ ಅಯ್ಯಂಗಾರ್, ಹೆಬ್ಬಾಲೆ ಲಿಂಗರಾಜು, ಶೇಷಾದ್ರಿ ಎಂಬಾರ್, ರವಿ, ಸುದರ್ಶನ್, ಚಂದ್ರಮೋಗೇರ, ಆಯೋಜನೆ: ಸತ್ತಿಗೆ ಪ್ರಕಾಶನ, ಬಿಇಎಲ್ ಗೆಳೆಯರ ಬಳಗ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಳಿಗ್ಗೆ 10.30

ಮೂಡ್ನಾಕೂಡು ಚಿನ್ನಸ್ವಾಮಿ

ಡಿ. ನಾರಾಯಣಪ್ಪ ಅವರ '75ನೇ ವಸಂತದ ವಜ್ರಮಹೋತ್ಸವ': ಉದ್ಘಾಟನೆ: ಮುನಿರತ್ನ, ಡಾ.ಸಿ.ಎನ್. ಮಂಜುನಾಥ್, ಅತಿಥಿಗಳು: ಎಂ. ಕೃಷ್ಣಪ್ಪ, ಪುಟ್ಟಣ್ಣ, ಎಸ್. ಮುನಿರಾಜು, ಡಿ.ಎಸ್. ಆನಂದಗೌಡ, ಅಧ್ಯಕ್ಷತೆ: ಎಸ್.ಎನ್. ಮೋಹನ್ ಕುಮಾರ್, ಉಪಸ್ಥಿತಿ: ಚಂದ್ರಾವತಿ ನಾರಾಯಣಪ್ಪ, ಆಯೋಜನೆ: ದೊಡ್ಡಣ್ಣ ವಿದ್ಯಾಸಂಸ್ಥೆ, ಸ್ಥಳ: ದೊಡ್ಡಣ್ಣ ಶಾಲಾ ಆವರಣ, ಸುಂಕದಕಟ್ಟೆ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 8

'ಮಾಹಿತಿ, ಭದ್ರತೆ ಮತ್ತು ತಂತ್ರಜ್ಞಾನ'ದ ಕುರಿತು ಪಟ್ಟಣ ಸಹಕಾರಿ ಬ್ಯಾಂಕುಗಳ ಸಮಾವೇಶ: ಅತಿಥಿಗಳು: ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ಜಿ.ಟಿ. ದೇವೇಗೌಡ, ಜಿ.ಸಿ. ಚಂದ್ರಶೇಖರ್, ಪಿ. ಮಹೇಶ್, ಮೀನಾಕ್ಷಿ ಶೇಷಗಿರಿ ಗಡ್, ಎಂ.ಆರ್. ವೆಂಕಟೇಶ್, ರಾಘವ್ ಗುಪ್ತಾ, ಪೀಯೂಷ್ ಸೋಮಾನಿ, ರಾಮಕುಮಾರ್ ಶೇಖರ್, ಅಧ್ಯಕ್ಷತೆ: ಕೆ.ಜಿ. ಅನಂತ್ ಕುಮಾರ್, ಆಯೋಜನೆ: ಭಾವಸಾರ ಬ್ಯಾಂಕ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 9.30

ಸಸಿ ನೆಡುವ ಕಾರ್ಯಕ್ರಮ: ಉಪಸ್ಥಿತಿ: ರಮ್ಯಾ ಎಸ್., ಆಯೋಜನೆ: ಮಿಯಾವಾಕಿ ಮಿನಿ ಫಾರೆಸ್ಟ್, ಸ್ಥಳ: ರಾಯಲ್ ಪಾರ್ಕ್ ರೆಸಿಡೆನ್ಸಿ ಲೇಔಟ್, ಅಂಜನಾಪುರ, ಜೆ.ಪಿ. ನಗರ, 9ನೇ ಹಂತ, ಬೆಳಿಗ್ಗೆ 9.30

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ಎಂ. ಶಿವಸ್ವಾಮಿ, ಉಪಸ್ಥಿತಿ: ಎ. ಅರುಣ ಪ್ರಕಾಶ್, ಸನ್ಮಾನಿತರು: ಮಾಸ್ತಿ ಎಸ್.ಎಂ., ಆಯೋಜನೆ: ಸಹಮತ, ಸ್ಥಳ: ಹೇಮ ಸದನ, 7ನೇ ಮುಖ್ಯರಸ್ತೆಯ ಅಡ್ಡರಸ್ತೆ, ಸಿಕ್ಯುಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

'ಜಗಜ್ಯೋತಿ ಬಸವಣ್ಣ ಹಾಗೂ ಶಿವಕುಮಾರ್ ಸ್ವಾಮೀಜಿ ಅವರ ಜಯಂತ್ಯುತ್ಸವ: ಸಾನ್ನಿಧ್ಯ: ಪಟ್ಟದ ಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ, 'ಶರಣ ಮುಕುಟ' ಪ್ರಶಸ್ತಿ ಪ್ರದಾನ: ಚಂದ್ರಶೇಖರ ಕಂಬಾರ, ಪ್ರಶಸ್ತಿ ಪುರಸ್ಕೃತರು: ಹೂಲಿ ಶೇಖರ್, ಅತಿಥಿಗಳು: ಗೌರೀಶ್ ಅಕ್ಕಿ, ಬಿ.ಎಸ್. ಸುಮಾ, ದಿನೇಶ್ ಎಂ.ಎನ್., ಆಯೋಜನೆ: ವೀರಶೈವ ಸೇವಾ ಸಮಾಜ, ಸ್ಥಳ: ಎಸ್.ಎಂ. ಕಲ್ಯಾಣ ಮಂಟಪ, ಜರಗನಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 10

ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್‌ನ ಸುವರ್ಣ ಮಹೋತ್ಸವ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಸಿದ್ದರಾಮಯ್ಯ, ಕೆ.ಎನ್. ರಾಜಣ್ಣ, ಎಚ್.ಕೆ. ಪಾಟೀಲ, ತೇಜಸ್ವಿ ಸೂರ್ಯ, ಉದಯ್ ಬಿ. ಗರುಡಾಚಾರ್, ಆಯೋಜನೆ: ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ: ರಾಯಲ್ ಸೆನಟ್, ಗೇಟ್ ಸಂಖ್ಯೆ 6, ಅರಮನೆ ಮೈದಾನ, ಬೆಳಿಗ್ಗೆ 10

'2023ನೇ ಸಾಲಿನ ವಿವಿಧ ದತ್ತಿ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಅಧ್ಯಕ್ಷತೆ, ಪ್ರಶಸ್ತಿ ಪ್ರದಾನ: ಎಚ್.ಎಲ್. ಪುಷ್ಪ, ಅತಿಥಿಗಳು: ಕೆ.ಆರ್. ಸಂಧ್ಯಾರೆಡ್ಡಿ, ರಘುನಾಥ ಚ.ಹ., ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಎಚ್.ಎಸ್. ವೆಂಕಟೇಶಮೂರ್ತಿ ಅವರ 80ರ ಸಂಭ್ರಮ 'ಎಚ್ಚೆಸ್ವಿ' ಕಾವ್ಯ ಸಂಭ್ರಮ–2024: ಪುಸ್ತಕ ಬಿಡುಗಡೆ: ವೆಂಕಟಾಚಲ ಹೆಗಡೆ, ಗೀತಗುಚ್ಛ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಉಪಸ್ಥಿತಿ: ಎಚ್.ಎಸ್. ವೆಂಕಟೇಶಮೂರ್ತಿ, ಎಚ್.ಎಸ್. ಸತ್ಯನಾರಾಯಣ, ಅತಿಥಿಗಳು: ಕಾ.ವೆಂ. ಶ್ರೀನಿವಾಸಮೂರ್ತಿ, ಇಂದಿರಾ ಸುಂದರ್, ಹರಿಪ್ರಸಾದ್, ಪ್ರಾಣೇಶ್ ಸಿರಿವರ, ಆಯೋಜನೆ: ಉಪಾಸನಾ ಟ್ರಸ್ಟ್, ಎಚ್ಚೆಸ್ವಿ ವಿದ್ಯಾರ್ಥಿ ಬಳಗ, ಸ್ಥಳ: ಪತ್ತಿ ಸಭಾಂಗಣ, ರಾಮಮಂದಿರದ ಆವರಣ, ಎನ್.ಆರ್. ಕಾಲೊನಿ, ಸಂಜೆ 5

ಎಚ್.ಎಸ್. ವೆಂಕಟೇಶಮೂರ್ತಿ

ಲಕ್ಷ್ಮಣ್ ಕನಕುಂಟ್ಲಾ ಅವರ 'ಮೈ–ಮನ', ಅಕ್ಕಯ್ ಪದ್ಮಶಾಲಿ ಅವರ ಆತ್ಮಕಥೆ 'ಅಕ್ಕಯ್', ಅಕ್ಕಯ್ ಪದ್ಮಶಾಲಿ, ಲಕ್ಷ್ಮಣ್ ಕನಕುಂಟ್ಲಾ ಸಂಪಾದಿಸಿದ 'ಅಟೆಂಷನ್ ಪ್ಲೀಸ್' ಪುಸ್ತಕಗಳ ಬಿಡುಗಡೆ ಮತ್ತು ಸಂವಾದ: ರೂಮಿ ಹರೀಶ್, ಸಿ.ಜಿ. ಲಕ್ಷ್ಮೀಪತಿ, ಸುಭಾಷ ರಾಜಮಾನೆ, ಆಯೋಜನೆ ಮತ್ತು ಸ್ಥಳ: ಬೀಟಲ್ ಬುಕ್ ಶಾಪ್, ಎಲ್.ಜೆ. ಆರ್ಕೇಡ್, ವಿಜಯನಗರ ಮೆಟ್ರೊ ನಿಲ್ದಾಣ ಹತ್ತಿರ, ಬೆಳಿಗ್ಗೆ 10.30

ಎಸ್.ಪಿ. ಬಾಲಸುಬ್ರಮಣ್ಯಂ ನೆನಪಿನ ಪ್ರಯುಕ್ತ 'ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ': ಅಧ್ಯಕ್ಷತೆ: ಬಿ. ಶಾಂತಕುಮಾರ್, ಅತಿಥಿಗಳು: ಜಿ.ವಿ. ನರಸಿಂಹಮೂರ್ತಿ, ಎಚ್.ಕೆ. ಸುಪ್ರಭಾ, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಆರ್ಯಭಟ ನೃತ್ಯೋತ್ಸವ: ಉದ್ಘಾಟನೆ: ಎಚ್.ಟಿ. ಪ್ರಭಾಕರ ಶಾಸ್ತ್ರಿ, ಅತಿಥಿಗಳು: ಮಹೇಶ ಜೋಶಿ, ಎಸ್. ನಾರಾಯಣ್, ಅಧ್ಯಕ್ಷತೆ: ಎಚ್.ಎಲ್.ಎನ್. ರಾವ್, ಆಯೋಜನೆ: ಆರ್ಯಭಟ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ವಿಶ್ವ ಸಂಗೀತ ದಿನ: ಸಂಗೀತ ಕಛೇರಿ: ಜ್ಯಾಮ್ ಸೆಷನ್, ರಾಕ್ ಬ್ಯಾಂಡ್ ಗಾಲೇ ಭಾಯ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಜೆ.ಪಿ. ನಗರ, ಸಂಜೆ 4ರಿಂದ

ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಶತಮಾನೋತ್ಸವ ಸಂಭ್ರಮ: ಉಪನ್ಯಾಸ: ಟಿ.ಎನ್. ವಾಸುದೇವಮೂರ್ತಿ, ಅತಿಥಿಗಳು: ಎಸ್.ಆರ್. ವಿಜಯಶಂಕರ, ಪುರುಷೋತ್ತಮ ಬಿಳಿಮಲೆ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ವಿನಾಯಕ ದೇವಸ್ಥಾನದ ಸಭಾಂಗಣ, ಆರ್.ಟಿ. ನಗರ, ಸಂಜೆ 4

'ನೂಪುರ ನಿರಂತರ–5' ನೃತ್ಯ ಪ್ರದರ್ಶನ: ಕಾವ್ಯಾ ದಿಲೀಪ್ ಮತ್ತು ತಂಡ, ಅತಿಥಿಗಳು: ಪೂರ್ಣಾ ಸುರೇಶ್, ವೈ.ಕೆ. ಸಂಧ್ಯಾಶರ್ಮಾ, ಆಯೋಜನೆ: ರಚನಾ ಡಾನ್ಸ್ ಅಕಾಡೆಮಿ, ಸ್ಥಳ: ಸೇವಾ ಸದನದ ಸಭಾಂಗಣ, ಮಲ್ಲೇಶ್ವರ, ಸಂಜೆ 4.30

'ವಾಮನ ಚರಿತ್ರೆ' ಯಕ್ಷಗಾನ ಪ್ರದರ್ಶನ: ಭಾಗವತರು: ಕೇಶವ ಹೆಗಡೆ, ಮೃದಂಗ: ಶಂಕರ ಭಾಗವತ, ಅರ್ಥಧಾರಿಗಳು: ಶಂಭು ಶರ್ಮಾ, ಗಣರಾಜ ಕುಂಬ್ಳೆ, ಗ.ನಾ. ಭಟ್ಟ, ಆಯೋಜನೆ: ಯಕ್ಷ ಕೌಮುದಿ ಟ್ರಸ್ಟ್, ಸ್ಥಳ: ಕೊಬಾಲ್ಟ್ ಗ್ಯಾಲರಿ, ಸಂಜೆ 5

ಕೆ.ಬಿ. ಪವಾರ ಅವರ 'ಕೊಳ್ಳ', 'ಬಂಜಾರ ಮತ್ತು ಜಿಪ್ಸಿ' ಪುಸ್ತಕಗಳ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಪುಸ್ತಕಗಳ ಕುರಿತು: ಆರ್.ಜಿ. ಹಳ್ಳಿ ನಾಗರಾಜ, ಧರಣೇಂದ್ರ ಕುರಕುರಿ, ಅಧ್ಯಕ್ಷತೆ: ಎ.ಆರ್. ಗೋವಿಂದ ಸ್ವಾಮಿ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸನ್ಮತಿ ಸಾಹಿತ್ಯ ಪೀಠ ಶಿರಸಿ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ

'ಸೋಮಣ್ಣ 50' ಜನಪದ, ರಂಗಗೌರವ, ನಾಟಕ: ಉದ್ಘಾಟನೆ: ಸಿ.ಎಂ. ನರಸಿಂಹಮೂರ್ತಿ, ಅಧ್ಯಕ್ಷತೆ: ಮಂಜುನಾಥ್ ಭಟ್, ಅಭಿನಂದನಾ ನುಡಿ: ಶಶಿಕಾಂತ ಯಡಹಳ್ಳಿ, ಅಣ್ಣಾಜಿ ಕೃಷ್ಣಾರೆಡ್ಡಿ, ಅತಿಥಿಗಳು: ಎನ್.ಎಸ್. ರಾಜು, ಸವಿತಾ ಬಿ., 'ಕರ್ಣ ಭಾರ' ನಾಟಕ ಪ್ರದರ್ಶನ: ರಚನೆ: ಎಲ್. ಗುಂಡಪ್ಪ, ನಿರ್ದೇಶನ: ಗಿರೀಶ್ ಮೇಲುಕೋಟೆ, ಆಯೋಜನೆ: ಸಂಸ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 5.30

'ಮಹಾಭಾರತ ತಾತ್ಪರ್ಯ ನಿರ್ಣಯ' ಧಾರ್ಮಿಕ ಪ್ರವಚನ: ಸಿಂಧನೂರು ಕೃಷ್ಣಾಚಾರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಸ್ಥಾಪನೆ: 1969

ನಂ.24 "ಸುವರ್ಣ ಭವನ" 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104

ದೂರವಾಣಿ: 080 – 23300497, 23359600, 41159606. ಈಮೇಲ್: jscbinfo@jscbl.com, ವೆಬ್‌ಸೈಟ್: www.jscbl.com

2023-2024 ನೇ ಸಾಲಿನ ಲಾಭ-ನಷ್ಟ ತ:ಖ್ತೆ

ಮೊಬಲಗು 31/03/2023 ಕ್ಕೆ ಇದ್ದಂತೆ	ವೆಚ್ಚದ ವಿವರಗಳು	ಮೊಬಲಗು 31/03/2024 ಕ್ಕೆ ಇದ್ದಂತೆ	ಮೊಬಲಗು 31/03/2023 ಕ್ಕೆ ಇದ್ದಂತೆ	ಆದಾಯದ ವಿವರಗಳು	ಮೊಬಲಗು 31/03/2024 ಕ್ಕೆ ಇದ್ದಂತೆ
ರೂ. ಪೈ.		ರೂ. ಪೈ.	ರೂ. ಪೈ.		ರೂ. ಪೈ.
77,89,16,072.50	ಠೇವಣಿ ಮತ್ತು ಸಾಲಗಳ ಮೇಲೆ ಬಡ್ಡಿ ಪಾವತಿಸಿದ್ದು	74,45,04,420.24	55,69,16,236.49	ಸಾಲಗಳ ಮೇಲಿನ ಬಡ್ಡಿ ಬಂದದ್ದು	68,14,75,842.00
6,43,05,629.00	ಸಿಬ್ಬಂದಿ ಸಂಬಳ ಹಾಗೂ ಇತರೆ	8,39,24,707.91	52,20,04,751.17	ಹೂಡಿಕೆಯ ಮೇಲಿನ ಬಡ್ಡಿ ಮತ್ತು ಡಿವಿಡೆಂಡ್ ಆದಾಯ	42,56,10,515.06
15,69,901.00	ನಿರ್ದೇಶಕರ ಸಭೆ ಹಾಜರಾತಿ ವೆಚ್ಚ	15,92,049.00	2,63,95,138.15	ಇತರೆ ಆದಾಯ, ಫೀ, ಕಮಿಷನ್	5,62,05,557.31
1,76,17,228.67	ಬಾಡಿಗೆ ಮತ್ತು ಇತರೆ ವೆಚ್ಚ	1,75,54,071.08	3,81,18,513.00	ಹಿಂದಿನ ಸಾಲಿನಲ್ಲಿ ಹೆಚ್ಚುವರಿ ಅವಕಾಶ ಕಲ್ಪಿಸಿದ್ದು	41,20,550.00
4,67,000.00	ಕಾನೂನು ವೆಚ್ಚ	3,80,692.00			
48,62,075.67	ಅಂಚೆ ಮತ್ತು ದೂರವಾಣಿ ವೆಚ್ಚ	43,62,030.52			
9,37,000.00	ಲೆಕ್ಕ ಪರಿಶೋಧನಾ ವೆಚ್ಚ	12,67,000.00			
7,30,64,941.50	ಸವಕಳಿ ಮತ್ತು ಕಾಯ್ದಿರಿಸಿದ್ದು	5,72,23,081.63			
17,76,999.97	ಇತರೆ ಉಸ್ತುವಾರಿ ವೆಚ್ಚ	21,76,540.37			
45,34,369.66	ಸರಕು ಮತ್ತು ಸೇವಾ ತೆರಿಗೆ ವೆಚ್ಚ	46,86,210.56			
20,60,912.63	ಮುದ್ರಣ, ಲೇಖನಿ ಸಾಮಗ್ರಿಗಳು ಮತ್ತು ಜಾಹೀರಾತು	23,67,839.69			
4,91,61,453.70	ಇತರೆ ಖರ್ಚುಗಳು	2,41,51,808.93			
99,92,73,584.30	ಉಪಮೊತ್ತ	**94,41,90,451.93**			
14,41,61,054.51	ಲಾಭ ಆದಾಯ ತೆರಿಗೆಗೆ ಮೊದಲು	22,32,22,012.44			
3,82,44,709.00	ಆದಾಯ ತೆರಿಗೆ (–)	5,96,95,464.00			
65,28,580.00	ಡೆಫರ್ಡ್ ಟ್ಯಾಕ್ಸ್ (+)	45,51,671.00			
11,24,44,925.51	ನಿವ್ವಳ ಲಾಭ	16,80,78,219.44			
114,34,34,638.81	ಒಟ್ಟು ರೂ.	**116,74,12,464.37**	**114,34,34,638.81**	ಒಟ್ಟು ರೂ.	**116,74,12,464.37**

ದಿನಾಂಕ 31-03-2024ರ ಅಂತ್ಯಕ್ಕೆ ಆಸ್ತಿ-ಜವಾಬ್ದಾರಿ ತಃಖ್ತೆ

ಮೊಬಲಗು 31/03/2023 ಕ್ಕೆ ಇದ್ದಂತೆ	ಜವಾಬ್ದಾರಿಗಳು	ಮೊಬಲಗು 31/03/2024 ಕ್ಕೆ ಇದ್ದಂತೆ	ಮೊಬಲಗು 31/03/2023 ಕ್ಕೆ ಇದ್ದಂತೆ	ಆಸ್ತಿಗಳು	ಮೊಬಲಗು 31/03/2024 ಕ್ಕೆ ಇದ್ದಂತೆ
ರೂ. ಪೈ.		ರೂ. ಪೈ.	ರೂ. ಪೈ.		ರೂ. ಪೈ.
31,43,14,100.00	ಪಾವತಿಯಾದ ಷೇರು ಬಂಡವಾಳ	31,07,12,600.00	1,71,63,266.00	ನಗದು ಶಿಲ್ಕು	2,74,46,672.00
116,49,29,548.51	ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು	122,85,04,277.02	59,55,63,305.30	ಇತರೆ ಬ್ಯಾಂಕುಗಳ ಚಾಲ್ತಿ ಖಾತೆಯ ಶಿಲ್ಕು	64,74,34,117.50
1144,15,90,276.41	ಠೇವಣಾತಿಗಳು	1184,84,45,636.33	101,84,14,763.00	ಇತರೆ ಬ್ಯಾಂಕುಗಳಲ್ಲಿ ಬ್ಯಾಂಕಿನ ಠೇವಣಿಗಳು	118,13,00,000.00
1,26,00,025.70	ಚೆಕ್ ಪಾರ್ ಕಲೆಕ್ಷನ್ (ಕಾಂಟ್ರ)	2,46,65,012.00	589,37,24,476.00	ಹೂಡಿಕೆಗಳು	544,95,06,142.00
12,29,60,440.19	ವಸೂಲಾಗಬೇಕಾದ ಸಾಲದ ಮೇಲಿನ ಬಡ್ಡಿ (ಕಾಂಟ್ರ)	9,66,13,821.19	595,41,84,676.92	ಸಾಲ ಮತ್ತು ಮುಂಗಡಗಳು	674,67,52,966.34
46,77,178.00	ಬಡ್ಡಿ ಪಾವತಿಸಬೇಕಾದದ್ದು	96,63,299.00	4,23,66,586.00	ಬ್ಯಾಂಕೇತರ ಆಸ್ತಿಗಳು	4,23,66,586.00
7,08,38,520.91	ಇತರೆ ಜವಾಬ್ದಾರಿಗಳು	10,52,37,938.60	12,29,60,440.19	ವಸೂಲಾಗಬೇಕಾದ ಸಾಲದ ಮೇಲಿನ ಬಡ್ಡಿ	9,66,13,797.19
74,37,92,948.00	ಅವಕಾಶಗಳು	78,68,92,948.00	1,26,00,025.70	ಚೆಕ್ ಪಾರ್ ಕಲೆಕ್ಷನ್ (ಕಾಂಟ್ರ)	2,46,65,012.00
11,24,44,925.51	ನಿವ್ವಳ ಲಾಭ	16,80,78,219.44	27,213.38	ಶಾಖೆಗಳ ಹೊಂದಾಣಿಕೆ	79,815.85
			12,94,78,700.45	ಬ್ಯಾಂಕಿನ ನಿವೇಶನ ಮತ್ತು ಕಟ್ಟಡ ಖಾತೆ	17,01,41,327.50
			1,28,27,448.84	ಪೀಠೋಪಕರಣ ಹಾಗೂ ಮರಮುಟ್ಟುಗಳು	2,33,86,191.01
			36,46,273.66	ಕಂಪ್ಯೂಟರ್ ಹಾರ್ಡ್‌ವೇರ್	22,19,141.00
			10,02,902.67	ಕಂಪ್ಯೂಟರ್ ಸಾಫ್ಟ್‌ವೇರ್	26,46,644.46
			9,87,108.00	ಬ್ಯಾಂಕಿನ ವಾಹನ	8,39,042.00
			18,32,00,777.12	ಇತರೆ ಆಸ್ತಿಗಳು	16,34,16,296.73
1398,81,47,963.23	ಒಟ್ಟು ರೂ.	**1457,88,13,751.58**	**1398,81,47,963.23**	ಒಟ್ಟು ರೂ.	**1457,88,13,751.58**
2,40,11,525.37	ಡೆಫ್ ಖಾತೆ (ಕಾಂಟ್ರ)	2,74,86,955.98	2,40,11,525.37	ಡೆಫ್ ಖಾತೆ (ಕಾಂಟ್ರ)	2,74,86,955.98
1,68,71,027.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರ)	1,52,79,585.00	1,68,71,027.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರ)	1,52,79,585.00
4,08,82,552.37	ಉಪ ಒಟ್ಟು	**4,27,66,540.98**	**4,08,82,552.37**	ಉಪ ಒಟ್ಟು	**4,27,66,540.98**

Disclosure in financial statements- 'Notes to Accounts'

1. Regulatory Capital : a) Composition of Regulatory Capital — ₹ in Crore

Sr.No.	Particulars	31.03.2024	31.03.2023
i)	Paid up share capital and reserves (net of deductions, if any)	31.07	31.43
ii)	Other Tier 1 capital	81.14	72.86
iii)	Tier 1 capital (i + ii)	112.21	104.29
iv)	Tier 2 capital	24.48	23.13
v)	Total capital (Tier 1+Tier 2)	136.69	127.42
vi)	Total Risk Weighted Assets (RWAs)	610.61	535.75
vii)	Paid-up share capital and reserves as percentage of RWAs	5.09%	5.87%
viii)	Tier 1 Ratio (Tier 1 capital as a percentage of RWAs)	18.38%	19.47%
ix)	Tier 2 Ratio (Tier 2 capital as a percentage of RWAs)	4.01%	3.96%
x)	Capital to Risk Weighted Assets Ratio (CRAR) (Total Capital as a percentage of RWAs)	22.39%	23.78%
xi)	Amount of paid -up capital raised during the year	-0.36	3.36
xii)	Amount of non equity Tier-1 capital during the year	8.28	5.51
xiii)	Amount of Tier -2 capital raised during the year	1.35	5.86

2. Asset Liability Management : a) Maturity pattern of certain items of assets and liabilities — ₹ in Crore

	Day 1	2 to 7 days	8 to 14 days	15 to 30 days	31 days to 2 Month	Over 2 months and to 3 Months	Over 3 months and up to 6 Months	Over 6 months up to 1 Years	Over 1 year and up to 3 years	Over 3 years and to 5 years	Over 5 years	Total
Deposits	1.82	11.35	26.6	44.71	67.97	106.82	176.25	313.41	414.3	21.61	0	1184.84
Advances	14.94	0.61	0.99	1.32	6.63	8.96	11.69	41.55	84.59	44.2	459.19	674.67
Investment	0	0	0	21.63	0	94.77	167.95	126.37	19.44	20.04	89.25	539.45

Note : The investments are matched with the deficit in advances over deposits.

3. Investments : (a) Composition of Investment Portfolio as at 31.03.2024 and 31.03.2023 — ₹ in Crore

	Investments in India as on 31/03/2024			Investments in India as on 31/03/2023		
	Government Securities	Shares	Total Investment in India	Government Securities	Shares	Total Investment in India
Held To Maturity	171.91	5.52	177.43	286.27	5.52	291.79
Available For Sale	367.52	0.00	367.52	297.58	0.00	297.58
Total Investments	539.43	5.52	544.95	583.85	5.52	589.37

(b) Movement of Provisions for Investment Depreciation and Investment Fluctuation Reserve — ₹ in Crore

Particulars	Current year	Previous year
i) Movement of provisions held towards depreciation on investments		
a) Opening balance	**16.47**	**13.44**
b) Add: Provisions made during the year	**0**	**3.03**
c) Less: Write off / write back of excess provisions during the year	**0**	**0**
d) Closing balance	**16.47**	**16.47**
ii) Movement of Investment Fluctuation Reserve		
a) Opening balance	**16.44**	**11.42**
b) Add: Amount transferred during the year	**0.41**	**5.02**
c) Less: Drawdown	**0**	**0**
d) Closing balance	**16.85**	**16.44**
iii) Closing balance in IFR as a percentage of closing balance of investments13 in AFS and HFT/Current category	**4.58%**	**5.52%**

(c) Sale and transfers to/from HTM category: Where the value of sales and transfers of securities to/from HTM category exceeds 5 per cent of the book value of investments held in HTM category at the beginning of the year, banks shall disclose the market value of the investments held in the HTM category. The excess of book value over market value for which provision is not made shall also be disclosed - **NIL**

(d) Non-SLR investment portfolio : i) Non-performing non-SLR Investments - **NIL**

ii) Issuer composition of non-SLR investments — Amount in Crores

Sr. No.	Issuer	Amount		Extent of Private Placement		Extent of 'Below Investment Grade' Securities		Extent of 'Unrated' Securities		Extent of 'Unlisted' Securities	
-1	-2	-3		-4		-5		-6		-7	
		Current year	Previous Year	Current year	Previous Year	Current year	Previous Year	Current year	Previous Year	Current year	Previous Year
a)	PSUs										
b)	FIs										
c)	Banks			**5.52**	**5.52**						
d)	Private Corporates										
e)	Subsidiaries/ Joint Ventures										
f)	Others										
g)	Provision held towards depreciation										
	Total *			**5.52**	**5.52**						

4. Asset quality: a) Classification of advances and provisions held — ₹ in Crore

Particulars	Standard	Non-Performing				Total
	Total Standard Advances	Sub- standard	Doubtful	Loss	Total Non-Performing Advances	
Gross Standard Advances and NPAs						
Opening Balance	500.77	46.78	47.03	0.84	94.65	595.42
Add: Additions during the year						
Less: Reductions during the year*						
Closing balance	**623.49**	**6.28**	**35.34**	**9.57**	**51.19**	**674.68**
*Reductions in Gross NPAs due to:						
Upgradation						
Recoveries (excluding recoveries from upgraded accounts)						
Write-offs						
Provisions (excluding Floating Provisions but including BDDR)						
Opening balance of provisions held	4.90	28.83	47.03	0.84	76.70	81.60
Add: Fresh provisions made during the year						
Less: Excess provision reversed/ Write-off loans						
Closing balance of provisions held	**4.90**	**28.83**	**47.03**	**2.77**	**78.63**	**83.53**
Net NPAs						
Opening Balance		17.95	0.00	0.00	17.95	
Add: Fresh additions during the year						
Less: Reductions during the year						
Closing Balance		**0.00**	**0.00**	**0.00**	**0.00**	**0.00**

Ratios (in per cent)	Current Year	Previous Year
Gross NPA to Gross Advances	7.59%	15.90%
Net NPA to Net Advances	0.00%	3.46%
Provision coverage ratio	153.60%	81.04%

b) Sector-wise Advances and Gross NPAs — ₹ in Crore

Sr. No.	Sector*	Current Year			Previous Year		
		Outstanding Total Advances	Gross NPAs	Percentage of Gross NPAs to Total Advances in that Sector	Outstanding Total Advances	Gross NPA	Percentage of Gross NPAs to Total Advances in that Sector
i)	**Priority Sector**						
a)	Agriculture and allied activities	0.32	0.00	0.00%	0.53	0.00	0.00%
b)	Advances to industries sector eligible as priority sector lending	194.11	15.32	7.89%	191.06	38.26	20.03%
c)	Services	22.07	4.41	19.98%	23.66	1.69	7.14%
d)	Other Loans including Personal loans	85.87	5.91	6.88%	74.56	16.63	22.30%
	Subtotal (i)	**302.37**	**25.64**	**8.48%**	**289.81**	**56.58**	**19.52%**
ii)	**Non-priority Sector**						
a)	Agriculture and allied activities	0.03	0.00	0.00%	0.01	0.00	0.00%
b)	Industry	89.96	4.52	5.02%	84.81	5.44	6.41%
c)	Services	15.69	0.00	0.00%	16.81	0.39	0.00%
d)	Other Loans including Personal loans	266.62	21.03	7.89%	203.98	32.24	15.81%
	Subtotal (i)	**372.30**	**25.55**	**6.86%**	**305.61**	**38.07**	**12.46%**
	Total (i+ii)	**674.67**	**51.19**	**7.59%**	**595.42**	**94.65**	**15.90%**

d) Particulars of resolution and restructuring

ii) **Details of accounts subjected to restructuring - NIL**

e) Divergence in asset classification and provisioning — ₹ in Crore

Sr.	Particulars	Amount
1	Gross NPAs as on March 31, 2023 as reported by the bank	41.84
2	Gross NPAs as on March 31, 2023 as assessed by Reserve Bank of India	94.65
3	Divergence in Gross NPAs (2-1)	52.81
4	Net NPAs as on March 31, 2023 as reported by the bank	0.00
5	Net NPAs as on March 31, 2023 as assessed by Reserve Bank of India	17.95
6	Divergence in Net NPAs (5-4)	17.95
7	Provisions for NPAs as on March 31, 2023 as reported by the bank	76.70
8	Provisions for NPAs as on March 31, 2023 as assessed by Reserve Bank of India	76.70
9	Divergence in provisioning (8-7)	0.00
10	Reported Profit before Provisions and Contingencies for the year ended March 31, 2023	21.47
11	Reported Net Profit after Tax (PAT) for the year ended March 31, 2023	11.24
12	Adjusted (notional) Net Profit after Tax (PAT) for the year ended March 31, 2023 after considering the divergence in provisioning	7.45

f) Disclosure of transfer of loan exposures – **Nil**

g) Fraud accounts - **Nil**

h) Disclosure under Resolution Framework for COVID-19-related Stress. Format for disclosures to be made as on March 31,2024 — ₹ in Crore

Type	Exposure to accounts classified as Standard consequent to implementation of resolution plan- Position as at the end of the previous year (A)	Of (A), aggregate debt that slipped into NPA during the yeat	Of (A) amount paid by the borrowers during the year	Exposure to accounts classfied as standard consequent to implementation of resolution plan- Position as at the end of this year
Personal Loans	0.00	0.00	0.00	0.00
Corporate persons*	0.00	0.00	0.00	0.00
Of which MSMEs	49.28	0.00	20.17	29.11
Others	186.54	6.29	45.76	134.49
Total	**235.82**	**6.29**	**65.93**	**163.60**

5. Exposures: a) Exposure to real estate Sector — ₹ in Crore

Category	Current year	Previous Year
a) Residential Mortgages –		
Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.		
b) Commercial Real Estate –		
Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non fund based (NFB) limits	65.86	56.80
Total Exposure to Real Estate Sector	**65.86**	**56.80**

b) Exposure to capital market –**NIL**

c) Unsecured advances - — ₹ in Crore

Particulars	Current Year	Previous Year
Total unsecured advances of the bank	1.20	1.40

d) Factoring exposures : **NIL**

6. Concentration of deposits, advances and NPAs: a) Concentration of deposits — ₹ in Crore

Particulars	Current Year	Previous Year
Total deposits of the twenty largest depositors	121.14	135.71
Percentage of deposits of twenty largest depositors to total deposits of the bank	10.22%	11.86%

b) **Concentration of advances** — ₹ in Crore

Particulars	Current Year	Previous Year
Total advances to the twenty largest borrowers	163.79	164.18
Percentage of advances to twenty largest borrowers to total advances of the bank	24.28%	27.57%

c) Concentration of exposures — ₹ in Crore

Particulars	Current Year	Previous Year
Total exposure to the twenty largest borrowers/customers	240	240
Percentage of exposures to the twenty largest borrowers/ customers to the total exposure of the bank on borrowers/customers	1.48%	1.62%

d) Concentration of NPAs — ₹ in Crore

Particulars	Current Year	Previous Year
Total advances to the top twenty NPA accounts	50.23	75.75
Percentage of advances to the twenty largest NPA accounts to total Gross NPAs.	98.09%	80.03%

7. Transfers to Depositor Education and Awareness Fund (DEA Fund) — ₹ in Crore

Particulars	Current year	Previous year
Opening balance of amounts transferred to DEA Fund	2.40	1.74
Add: Amounts transferred to DEA Fund during the year	0.42	0.69
Less: Amounts reimbursed by DEA Fund towards claims	0.07	0.03
Closing balance of amounts transferred to DEA Fund	**2.75**	**2.40**

8. Disclosure of complaints:

a) Summary information on complaints received by the bank from customers and from the offices of Banking Ombudsman (OBOs)

Sr. No		Particulars	Current year	Previous year
		Complaints received by the bank from its customers		
1		Number of complaints pending at beginning of the year	0	0
2		Number of complaints received during the year	0	0
3		Number of complaints disposed during the year	0	0
	3.1	Of which, number of complaints rejected by the bank	-	-
4		Number of complaints pending at the end of the year	0	0
		Maintainable complaints received by the bank from OBOs		
5		Number of maintainable complaints received by the bank from OBOs	2	4
	5.1.	Of 5, number of complaints resolved in favour of the bank by OBOs	2	4
	5.2	Of 5, number of complaints resolved through conciliation/mediation/advisories issued by OBOs	0	0
	5.3	Of 5, number of complaints resolved after passing of Awards by OBOs against the bank	0	0
6		Number of Awards unimplemented within the stipulated time (other than those appealed)	0	0

Note: Maintainable complaints refer to complaints on the grounds specifically mentioned in the Integrated Ombudsman Scheme,2021 and covered within the ambit of the Scheme.

b) Top five grounds of complaints received by the bank from customers

Grounds of complaints, (i.e. complaints relating to)	Number of complaints pending at the beginning of the year	Number of complaints received during the year	% increase/ decrease in the number of complaints received over the previous year	Number of complaints pending at the end of the year	Of 5, number of complaints pending beyond 30 days
1	2	3	4	5	6
			Current Year		
Ground - 1	0	78	23.81%	1	1
Ground - 2					
Ground - 3					
Ground - 4					
Ground - 5					
Others	0	1	-75.00%	0	0
Total	**0**	**79**	**19.40%**	**1**	**1**
			Previous Year		
Ground - 1	0	63	16.67%	0	0
Ground - 2					
Ground - 3					
Ground - 4					
Ground - 5					
Others	0	4	30.00%	0	0
Total	**0**	**67**	**21.82%**	**0**	**0**

9. Disclosure of penalties imposed by the Reserve Bank of India

Penalties imposed by the Reserve Bank of India under the provisions of the (i) Banking Regulation Act, 1949 and (ii) Payment and Settlement Systems Act, 2007 shall be disclosed in the 'Notes to Accounts' to the balance sheet in the concerned bank's next Annual Report. Banks shall make appropriate disclosures on the nature of the breach, number of instances of default and the quantum of penalty imposed. – **NIL**

10. Other Disclosures : a) Business ratios — ₹ in Crore

Particular	Current Year	Previous Year
i) Interest Income as a percentage to Working Funds	7.89%	7.79%
ii) Non-interest income as a percentage to Working Funds	0.43%	0.54%
iii) Cost of Deposits	6.48%	6.93%
iv) Net Interest Margin	2.60%	2.13%
v) Operating Profit as a percentage to Working Funds	1.59%	1.51%
vi) Return on Assets	1.60%	1.02%
vii) Business (deposits plus advances) per employee	23.24	31.63
viii) Profit per employee	0.28	0.19

b) Bancassurance business — ₹ in Crore

Particular	Current Year	Previous Year
Insurance Commission	**0.01**	**0.02**

c) Marketing and distribution – **NIL**

d) Disclosures regarding Priority Sector Lending Certificates (PSLCs)

During the year, Bank has purchased PSLC through HDFC Bank Ltd., in PSLC-SMALL AND MARGINAL FARMERS (PSLCSM) scheme for Weaker Section Sub target and the details are as below. — ₹ in Crore

Deal Reference No	Date of Purchase	Face Value	Premium Amount
PSLCP/2023/1948	10.01.2024	**45.00**	**0.23**
PSLCP/2023/2003	13.02.2024	**20.00**	**0.11**
PSLCP/2023/2015	15.02.2024	**60.00**	**0.34**
PSLCP/2023/2023	20.02.2024	**15.00**	**0.09**
	Total :	**140.00**	**0.77**

e) Provisions and contingencies — ₹ in Crore

Provision debited to Profit and Loss Account	Current Year	Previous Year
i) Provisions for NPI	**2.21**	**2.21**
ii) Provision towards NPA	**1.85**	**1.00**
iii) Provision made towards Income tax	**5.96**	**3.82**
v) Provision for Investment Depreciation Reserve	**0.00**	**3.03**
vi) Provision for IT Asset	**0.25**	**0.20**
Total	**10.27**	**10.26**

f) Payment of DICGC Insurance Premium — ₹ in Crore

Sl No	Particulars	Current Year	Previous Year
i)	Payment of DICGC Insurance Premium	1.37	1.44
ii)	Arrears in payment of DICGC premium	0.00	0.00

g) Disclosure of facilities granted to directors and their relatives

Bank has not provided any fund or non-fund (guarantees, letters of credit, etc.) facilities to the Bank directors, their relatives, companies or firms in which they are interested except Loan against FD's.

h) Disclosure in amortisation of expenditure on account of enhancement in family pension of employees of banks. – **NIL**

ಸಹಿ/- (ಎಸ್.ಭಾಗ್ಯ) ಮುಖ್ಯಕಾರ್ಯನಿರ್ವಹಣಾಧಿಕಾರಿ	ಸಹಿ/- (ರಾಜಗೋಪಾಲ್ ಹೆಗ್ಡೆ) ವೃತ್ತಿಪರ ನಿರ್ದೇಶಕರು	ಸಹಿ/- (ಡಾ. ಉಮಾ .ಆರ್) ಉಪಾಧ್ಯಕ್ಷರು	ಸಹಿ/- (ಹೆಚ್.ಸಿ.ಗೋಪಾಲ್) ಅಧ್ಯಕ್ಷರು

ದೃಢೀಕರಣ ಪತ್ರ

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು, ಇದರ 2023-2024 ನೇ ಸಾಲಿನ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿರುತ್ತೇವೆ. ನಮ್ಮ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ ಅಗತ್ಯವಾದ ಎಲ್ಲಾ ಮಾಹಿತಿ ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತೇವೆ. ಅವು ತೃಪ್ತಿಕರವಾಗಿರುತ್ತವೆ. ನಮ್ಮ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ಹಾಗು ಲಾಭ ನಷ್ಟ ತ:ಖ್ತೆಯು ದಿನಾಂಕ: 31-03-2024 ಕ್ಕೆ ನಮ್ಮ ಪ್ರತ್ಯೇಕ ಸ್ಥಿತಿಯನ್ನು ವರದಿಯಲ್ಲಿನ ಅಂಶಗಳಗೊಳಪಟ್ಟು, ಬ್ಯಾಂಕಿನ ನಿಜವಾದ ಆರ್ಥಿಕ ಕರಾರುವಾಕ್ಕಾಗಿ ತೋರಿಸುತ್ತದೆಯೆಂದು ದೃಢೀಕರಿಸುತ್ತೇವೆ.

Date: 21.05.2024
Place: Bengaluru

ಮೆ. ಬಾಬು ಅಂಡ್ ಬಡತ್, ಸನ್ನದು ಲೆಕ್ಕಪರಿಶೋಧಕರು
ಸಂಸ್ಥೆಯ ನೋಂದಣಿ ಸಂಖ್ಯೆ:321009E
ಸಹಿ/- (ಸಿಎ ಚಂದ್ರಬಾಬು.ಕೆ) ಪಾಲುದಾರರು
ಸದಸ್ಯತ್ವ ಸಂಖ್ಯೆ: 029130
UDIN:24029130BKEDJP8286

ಕರಾವಳಿ ಅಡಿಕೆ ಕೃಷಿಗೆ ‘ದೋಟಿ ಗ್ಯಾಂಗ್’ ಆಸರೆ

ತೆಂಗಿನ ಮರ ಏರಲು ಕ್ಲೈಂಬಿಂಗ್ ಗೇರ್ ಉಪಕರಣದೊಂದಿಗೆ ಸಿದ್ಧವಾಗಿರುವ ಜಾರ್ಖಂಡ್‌ನ ಕಾರ್ಮಿಕರು

ಫ್ಲ್ಯಾಪ್ ಮೊದಲ ಪುಟದಿಂದ...

ಎಲ್ಲವೂ ಸರಿಯಾಗಿ ನಡೆದಿದೆ ಎನ್ನುವಾಗಲೇ ಸುಮಾರು ಐದು ವರ್ಷಗಳ ಹಿಂದೆ ಅವರು ಮರದಿಂದ ಜಾರಿ ಬಿದ್ದರು. ಕೈಗೆ ಪೆಟ್ಟಾಯಿತು. ಅಡಿಕೆ- ತೆಂಗು ಮರ ಹತ್ತಿ ಕೆಲಸ ಮಾಡುವುದು ಕಷ್ಟಕರವಾಯಿತು. ಬೇರೆ ಕೂಲಿ ಮಾಡಲಾರಂಭಿಸಿದರು. ದೋಟಿ ಬಂದ ಮೇಲೆ ಅವರು ಪಿಂಗಾರ ತಂಡದ ಸದಸ್ಯರಾಗಿ, ಮತ್ತೆ ತಮ್ಮ ಅಚ್ಚುಮೆಚ್ಚಿನ ಈ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

‘ಮರ ಹತ್ತಿ ಕೆಲಸ ಮಾಡುವ ಸಾಂಪ್ರದಾಯಿಕ ವಿಧಾನ ಬಹಳ ಶ್ರಮದಾಯಕ- ಅಪಾಯಕಾರಿ ಕೆಲಸ. ನಮ್ಮೂರಲ್ಲಿ ಈಗ ಸಾಂಪ್ರದಾಯಿಕವಾಗಿ ಮರ ಹತ್ತಿ ಕೆಲಸ ಮಾಡುವವರು ಮೂವರು ಮಾತ್ರ ಇದ್ದಾರೆ. ಹೊಸಬರು ಮರಹತ್ತುವ ಕೆಲಸಕ್ಕೆ ಬರುವುದಿಲ್ಲ. ನಮ್ಮೂರಲ್ಲಿ ಒಬ್ಬರು ಮರದಲ್ಲಿ ಕೆಲಸ ಮಾಡುವಾಗ ಬಿದ್ದು ಸೊಂಟ ಮುರಿದುಕೊಂಡು ಈಗ ಮಲಗಿದ ಸ್ಥಿತಿಯಲ್ಲೇ ಇದ್ದಾರೆ. ದೋಟಿ ಬಳಸಿ ಮಾಡುವ ಕೆಲಸದಲ್ಲಿ ಅಪಾಯ ಇಲ್ಲ. ತೋಟದಲ್ಲಿ ನೆರಳಿನಲ್ಲಿ ಮಾಡುವ ಕೆಲಸ ಇದು. ಬಿಸಿಲಿನ ಬೇಗೆ ಇರಲ್ಲ. ವಾರದ ರಜೆ ಸೇರಿ ರಜೆ ಸೌಲಭ್ಯವೂ ಉಂಟು. ವೇತನ-ಇನ್ಸೆಂಟಿವ್ ಸೇರಿ ತಿಂಗಳಿಗೆ ಕನಿಷ್ಠವೆಂದರೂ ₹25 ಸಾವಿರ ವೇತನ ಬರುತ್ತದೆ’ ಎಂದು ಆನಂದ ಖುಷಿಯಿಂದಲೇ ಹೇಳಿದರು.

‘ದೋಟಿಯಿಂದ ಕೆಲಸ ಮಾಡುವುದು ಕಾರ್ಮಿಕರ ಪಾಲಿಗೆ ಸುರಕ್ಷಿತ. ಸಿಂಪಡಣೆ, ಕೊಯ್ಲಿಗೆ ಮರವನ್ನು ಹತ್ತಲೇ ಬೇಕಾಗಿತ್ತು. ಮಣೆ ಮೇಲೆ ಕುಳಿತು ಸಿಂಪಡಣೆ ಮಾಡಬೇಕಿತ್ತು. ಒಂದು ಮರ ಹತ್ತಿ, ಹತ್ತಾರು ಮರಗಳಿಗೆ ಸಿಂಪಡಣೆ ಸಾಧ್ಯವಿದ್ದರೂ ಅರ್ಧ ಗಂಟೆ ಅಲ್ಲಿ ಕುಳಿತುಕೊಳ್ಳಲು ಕಷ್ಟವಾಗುತ್ತಿತ್ತು. ಮಳೆ ಬಂದರೆ ಮರ ಪಾಚಿಕಟ್ಟಿಕೊಂಡು ಜಾರುತ್ತಿತ್ತು. ಮೇಲೆ ಹತ್ತಲು ಆಗುತ್ತಿರಲಿಲ್ಲ. ಆದರೆ, ದೋಟಿ ಬಳಕೆಯಲ್ಲಿ ಮರ ಹತ್ತುವ ಪ್ರಮೇಯವೇ ಇಲ್ಲ. ಮಳೆ ಬಂದು ಹೋದ ನಂತರ ಸ್ವಲ್ಪ ಹೊತ್ತಿನಲ್ಲಿ ಗೊನೆ ಒಣಗಿದರೆ ಸಾಕು. ದೋಟಿ ಬಳಸಿ ಸಿಂಪಡಣೆ ಮಾಡಬಹುದು. ಕೊಯ್ಲು ಮಾಡುವಾಗ ಕತ್ತಿಯನ್ನು ಈ ದೋಟಿಗೆ ಫಿಕ್ಸ್ ಮಾಡಿರುತ್ತೇವೆ. ಇನ್ನೊಬ್ಬರು ರಿಂಗ್ ನೆಟ್‌ನಲ್ಲಿ (ನಾಲ್ಕರಿಂದ ಐದು ಅಡಿಯ ಹ್ಯಾಂಡಲ್ ಹಾಗೂ ಒಂದರಿಂದ ಒಂದೂವರೆ ಮೀಟರ್ ವ್ಯಾಸದ ರಿಂಗ್‌ಗೆ ನೆಟ್ ಹಾಕಲಾಗಿರುತ್ತದೆ) ಗೊನೆಯನ್ನು ಹಿಡಿಯುತ್ತೇವೆ. ನೆಲಕ್ಕೆ ಬಿದ್ದು ಹರಡಿಕೊಳ್ಳುವ ತಾಪತ್ರೆಯ ಇಲ್ಲ’ ಎನ್ನುತ್ತಾರೆ ಕಾರ್ಮಿಕ ಆನಂದ.

‘ನೆಲದ ಮೇಲೆ ನಿಂತುಕೊಂಡೇ ಈ ಕಾರ್ಮಿಕರು ಕೆಲಸ ಮಾಡುತ್ತಾರೆ. ಸಿಂಪಡಣೆಗೆ ಒಬ್ಬರು ದೋಟಿ ಹಿಡಿದುಕೊಂಡರೆ, ಇನ್ನೊಬ್ಬರು ಆಪರೇಟರ್ ಅಗತ್ಯಕ್ಕೆ ತಕ್ಕಷ್ಟು ಮದ್ದು ಮಾತ್ರ ಬಿಡುತ್ತಾರೆ. ಹೀಗಾಗಿ ಮದ್ದು ಹಾಳಾಗುವುದಿಲ್ಲ. ಒಂದೇ ಪಂಪ್‌ಸೆಟ್ ಬಳಸಿ ನಾಲ್ಕೈದು ದೋಟಿಯಿಂದ ಸಿಂಪಡಣೆ ಮಾಡಬಹುದು. ಮದ್ದಿನ ಬ್ಯಾರೆ-ಲ್‌ಗಳನ್ನು ಆಚೀಚೆ ಒಯ್ಯುವ ತೊಂದರೆಯೂ ಇಲ್ಲ. ಜೆಟ್ ಸ್ಪ್ರೇಯಲ್ಲಿ ಒಂದು ಎಕರೆ ಅಡಿಕೆಗೆ ಸಿಂಪಡಣೆಗೆ 3 ಬ್ಯಾರೇಲ್‌ನಷ್ಟು ಮದ್ದಿನ ಮಿಶ್ರಣ ಬೇಕಾದರೆ, ದೋಟಿ ಬಳಸಿ ಸಿಂಪಡಣೆಗೆ ಒಂದು ಬ್ಯಾರೆಲ್ ಮದ್ದು ಸಾಕು’ ಎನ್ನುತ್ತಾರೆ ಪ್ರಗತಿಪರ ರೈತರಾದ ಸುರೇಶ್ ಬಲ್ನಾಡು.

‘ದೋಟಿಗೆ ಕತ್ತಿಯನ್ನು ಕಟ್ಟಿ ಅದರ ಸಹಾಯದಿಂದ ಒಬ್ಬ ಕಾರ್ಮಿಕ ಅಡಿಕೆ ಮರಗಳಿಂದ ಹಣ್ಣಾಗಿದ್ದ ಅಡಿಕೆ ಗೊನೆಗಳನ್ನು ಕೀಳುತ್ತಾರೆ. ಇನ್ನೊಬ್ಬರು ದೊಡ್ಡ ಜಾಳಿಗೆಯಲ್ಲಿ ಆ ಗೊನೆಗಳನ್ನು ಹಿಡಿದುಕೊಳ್ಳುತ್ತಾರೆ. ಐದು ಗೊನೆಗಳು ಜಾಳಿಗೆ ಸೇರುತ್ತಿದ್ದಂತೆ ಅವುಗಳನ್ನು ನೆಲಕ್ಕೆ ಹಾಕುತ್ತ ಮುಂದೆ ಸಾಗುತ್ತೇವೆ. ಎಂಟು ಜನರ ದೋಟಿ ತಂಡ ದಿನಕ್ಕೆ 2 ಸಾವಿರ ಅಡಿಕೆ ಮರಗಳಿಗೆ ಔಷಧಿ ಸಿಂಪಡಣೆ ಮಾಡುಬಹುದು. 1500ರಿಂದ 1600 ಅಡಿಕೆ ಗೊನೆಗಳನ್ನು ಕೊಯ್ಲು ಮಾಡುತ್ತೇವೆ. ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ಕೆಲಸ. ಸಣ್ಣ ತೋಟ ಇದ್ದರೆ ಅಲ್ಲಿಯ ಕೆಲಸ ಮುಗಿಸಿ ಇನ್ನೊಂದು ತೋಟಕ್ಕೆ ತೆರಳುತ್ತೇವೆ’ ಎಂದು ಪದ್ಮನಾಭ ಹೇಳುತ್ತಾರೆ.

ಈ ತಂಡದಲ್ಲಿ ಜಾರ್ಖಂಡ್‌ನ ಕಾರ್ಮಿಕರೇ ಹೆಚ್ಚಾಗಿದ್ದಾರೆ. ಜಾರ್ಖಂಡ್ ಲಾತೆಹಾರ್‌ನ ಸುನೇಶ್ವರ್ ಕಿಸಾನ್, ಅಮೃತ ಭಗತ್ ಹಾಗೂ ಸುಧೀರ್ ಕಿಸಾನ್, ‘ನಮ್ಮೂರಲ್ಲಿ ಧಾನ್ಯ, ತರಕಾರಿ ಕೃಷಿಯಲ್ಲಿ ಕೂಲಿ ಮಾಡುತ್ತಿದ್ದೆವು. ಅಡಿಕೆ ಕೃಷಿ ಕೆಲಸ ನಮಗೆ ಹೊಸತು. ಇಲ್ಲಿ ಬಂದು ಕೆಲವೇ ದಿನಗಳಲ್ಲಿ ಈ ಕೆಲಸ ಕಲಿತು ಮಾಡುತ್ತಿದ್ದೇವೆ. ಇದೇನು ನಮಗೆ ಭಾರ ಅನಿಸುತ್ತಿಲ್ಲ’ ಎನ್ನುತ್ತ ಕೆಲಸದಲ್ಲಿ ಮಗ್ನರಾದರು.

‘ಮರ ಹತ್ತುವ ತಾಪತ್ರಯ ಇಲ್ಲ; ಹೀಗಾಗಿ ಈ ಕೆಲಸ ಸಲೀಸಾಗಿದೆ’ ಎಂದು ದನಿಗೂಡಿಸಿದರು ಸ್ಥಳೀಯ ಯುವ ಕಾರ್ಮಿಕ ಗೋಪಾಲಕೃಷ್ಣ.

ತೆಂಗು ಕೃಷಿಗೂ ಅತಿಥಿ ಕಾರ್ಮಿಕರ ಸೇವೆ: ತೆಂಗಿನ ಮರಗಳನ್ನು ಹತ್ತಿ ತೆಂಗು ಕೀಳುವ ಕೆಲಸವೂ ಬಹಳ ಸವಾಲಿನದ್ದು. ಮರ ಹತ್ತಲು ಉಪಕರಣ ಬಂದಿದ್ದರೂ, ಕೆಲಸಗಾರರದ್ದೇ ಸಮಸ್ಯೆ. ಇದಕ್ಕೆ ಪರಿಹಾರ ಎಂಬಂತೆ ತೆಂಗು ತೋಟಗಳ ನಿರ್ವಹಣೆ ಮತ್ತು ಕೊಯ್ಲಿಗೆ ಕಾರ್ಮಿಕರನ್ನು ಪೂರೈಸುವ ಕೆಲಸಕ್ಕೆ ಕೇರಳದಲ್ಲಿ ಸಾಂಸ್ಥಿಕ ರೂಪ ನೀಡಿದ್ದು ‘ಹಲೋ ನಾರಿಯಲ್’ ಸಂಸ್ಥೆ. ನಿವೃತ್ತ ಸೈನಿಕ ಪಿ. ಮೋಹನದಾಸ್ ಅವರು ಸ್ಥಾಪಿಸಿರುವ, ತಿರುವನಂತಪುರಂನಲ್ಲಿ ಕೇಂದ್ರ ಕಚೇರಿ ಹೊಂದಿರುವ ಈ ಸಂಸ್ಥೆ, ಕರ್ನಾಟಕಕ್ಕೂ ಸೇವೆ ವಿಸ್ತರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಬಳಿಯ ಮುರ ಗ್ರಾಮದ ಧರಿತ್ರಿ ಸೌಹಾರ್ದ ಸಹಕಾರಿ ನಿಯಮಿತ ಮಧ್ಯವರ್ತಿಯಾಗಿ ‘ಹಲೋ ನಾರಿಯಲ್’ ಸಂಸ್ಥೆಯ ಸೇವೆ ತಮ್ಮ ಭಾಗದ ರೈತರಿಗೂ ಸಿಗುವಂತೆ ಮಾಡಿದೆ. ‘ಧರಿತ್ರಿ’ಯ ಅಧ್ಯಕ್ಷ ವಸಂತ ಗೌಡ ಅವರ ಆಸಕ್ತಿಯ ಫಲವಾಗಿ, ಮುರ ಸುತ್ತಲಿನ ತೆಂಗುಬೆಳೆಗಾರರಿಗೆ ಈ ‘ಅತಿಥಿ ಕಾರ್ಮಿಕರ’ ಸೇವೆ ಲಭಿಸುತ್ತಿದೆ. ‘ನಮ್ಮ ಸಂಘಕ್ಕೆ ಜೋಡಣೆಯಾಗಿರುವ ತೆಂಗು ಕೊಯ್ಲು ಮಾಡುವ ನಾಲ್ವರು ಕಾರ್ಮಿಕರು ಇದ್ದಾರೆ. ತೆಂಗು ಕೊಯ್ಲಿಗೆ ಒಂದು ತಿಂಗಳ ಮುಂಗಡ ಬುಕ್ಕಿಂಗ್ ಇದ್ದು, ಬೇಡಿಕೆ ಸಾಕಷ್ಟಿದೆ. ಅಡಿಕೆ ದೋಟಿಯ ಎಂಟು ಜನ ಕಾರ್ಮಿಕರ ತಂಡವನ್ನು ನಮ್ಮ ಸಂಘದಿಂದಲೇ ಕಟ್ಟಿದ್ದೇವೆ. ಇನ್ನೊಂದು ತಂಡವನ್ನು ತಯಾರು ಮಾಡುತ್ತಿದ್ದೇವೆ’ ಎಂದು ಧರಿತ್ರಿ ಸಂಘದ ಸಿಬ್ಬಂದಿ ವಸಂತ ಗೌಡ ಹೇಳಿದರು.

‘ಆರು ತಿಂಗಳಿನಿಂದ ನಾವು ಈ ಸೇವೆ ನೀಡುತ್ತಿದ್ದು, ಈ ವರೆಗೆ 260 ರೈತರ 15,266 ತೆಂಗಿನ ಮರಗಳಲ್ಲಿ ಕೊಯ್ಲು ಮಾಡಿದ್ದೇವೆ. ಅದರಿಂದ ₹3.38 ಲಕ್ಷ ವಹಿವಾಟು ನಡೆದಿದೆ. 120 ರೈತರ ತೋಟಗಳ 55,513 ಅಡಿಕೆ ಮರಗಳಿಗೆ ಮದ್ದು ಸಿಂಪಡಣೆ/ಗೊನೆ ಕೊಯ್ಲು ಮಾಡಿದ್ದು, ಅದರಿಂದ ₹4.57 ಲಕ್ಷ ವಹಿವಾಟು ಆಗಿದೆ’ ಎಂಬುದು ಅವರ ವಿವರಣೆ.

ಕ್ಲೈಂಬಿಂಗ್ ಗೇರ್ ಉಪಕರಣದೊಂದಿಗೆ ತೆಂಗಿನ ಮರ ಏರುತ್ತಿರುವ ಜಾರ್ಖಂಡ್‌ನ ಕಾರ್ಮಿಕರು

ಹಲೋ ನಾರಿಯಲ್ ಸಂಸ್ಥೆಯ ಕಾರ್ಮಿಕರು ಮಾಡುವ ಕೆಲಸಕ್ಕೆ ‘ಧರಿತ್ರಿ’ ಸಂಸ್ಥೆಗೆ ಮರಗಳ ಲೆಕ್ಕದಲ್ಲಿ ಕಮಿಷನ್ (ಒಂದು ಮರಕ್ಕೆ ₹5) ದೊರೆಯುತ್ತದೆ. ಧರಿತ್ರಿಯ ಮೂಲ ಕೆಲಸ ಹಣಕಾಸು ವ್ಯವಹಾರ. ಅದರೊಟ್ಟಿಗೆ ಕಾರ್ಮಿಕರನ್ನು ಪೂರೈಸುವ ಸೇವಾ ವಲಯಕ್ಕೂ ಈ ಸಂಘ ಕಾಲಿಟ್ಟಿದೆ.

‘ಒಂದು ತೆಂಗಿನ ಮರದಿಂದ ತೆಂಗು ಕೊಯ್ಲಿಗೆ ₹50 ದರ ನಿಗದಿ ಮಾಡಿದ್ದು, ಒಬ್ಬ ಕಾರ್ಮಿಕ ಕನಿಷ್ಠ ಎಂದರೂ ನಿತ್ಯ 50 ಮರದಿಂದ ಕೊಯ್ಲು ಮಾಡುತ್ತಾರೆ’ ಎನ್ನುತ್ತಾರೆ ಈ ಸಂಘದವರು.

ತೆಂಗು ಕೊಯ್ಲು ಮತ್ತು ತೆಂಗಿನ ಗಿಡಗಳ ನಿರ್ವಹಣೆಗೆ ವೃತ್ತಿಪರ ಕಾರ್ಮಿಕರ ಗುಂಪನ್ನು ಹೊಂದಿರುವುದು ಹಲೋ ನಾರಿಯಲ್ ಸಂಸ್ಥೆಯ ಹೆಗ್ಗಳಿಕೆ. ರೈತರಿಗೆ ಅನುಕೂಲ ಕಲ್ಪಿಸುವುದು ಒಂದೆಡೆಯಾದರೆ, ಕಾರ್ಮಿಕರ ಕೆಲಸ ಸರಳಗೊಳಿಸಿ, ಅವರ ಸ್ವಾವಲಂಬನೆಗೆ ನೆರವಾಗುವುದು ಇನ್ನೊಂದು ಉದ್ದೇಶ ಎನ್ನುತ್ತಾರೆ ಈ ಸಂಸ್ಥೆಯವರು. ಇದರಲ್ಲಿರುವ ಬಹುಪಾಲು ಕಾರ್ಮಿಕರು ಉತ್ತರ ಭಾರತದವರು.

ಕಾಸರಗೋಡಿನಲ್ಲಿ ಚೆಂಗಾಡಿ ಕೂಟಂ (ಸ್ನೇಹಿತರ ಕೂಟ) ಹೊಸ ಮಾದರಿಯನ್ನು ಪರಿಚಯಿಸಿದೆ. ಇದಕ್ಕೆ ಯಾವುದೇ ಕೇಂದ್ರೀಕೃತ ನಿರ್ವಹಣಾ ವ್ಯವಸ್ಥೆ, ಕಚೇರಿ ಅಥವಾ ಸಿಬ್ಬಂದಿ ಇಲ್ಲ. ಈ ಕೂಟದ ಸದಸ್ಯರು ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ಮಾಡಿಕೊಂಡಿದ್ದಾರೆ. ರೈತರಿಂದ ಬರುವ ಬೇಡಿಕೆಗೆ ತಕ್ಕಂತೆ ಕಾರ್ಮಿಕರು ತಾವೇ ಕೆಲಸ ಹಂಚಿಕೊಂಡು ಅಲ್ಲಿಗೆ ಹೋಗುತ್ತಾರೆ.

ಮಹಿಳಾ ಕಾರ್ಮಿಕರೂ ಸೇರಿ ಸುಮಾರು 300 ಜನ ಕಾರ್ಮಿಕರು ಈ ಕೂಟದಲ್ಲಿ ಇದ್ದಾರೆ. ಇವರೆಲ್ಲರೂ ಕೆಲಸದ ಸಮಯದಲ್ಲಿ ಸಮವಸ್ತ್ರ ಧರಿಸುತ್ತಾರೆ. ಅಗತ್ಯ ಉಪಕರಣ, ತೆಂಗಿನ ಮರ ಹತ್ತಲು ‘ಕ್ಲೈಂಬರ್ ಗೇರ್ ’ ಸಹಿತ ಬರುತ್ತಾರೆ. ನಿತ್ಯವೂ 8 ಸಾವಿರದಿಂದ 10 ಸಾವಿರ ತೆಂಗಿನ ಮರಗಳಿಂದ ಕಾಯಿಕೀಳುವ ಸಾಮರ್ಥ್ಯ-ವನ್ನು ಈ ತಂಡ ಹೊಂದಿದೆ. ‘ವರ್ಷಕ್ಕೆ ಸರಾಸರಿ 2.40 ಲಕ್ಷ ತೆಂಗಿನ ಮರಗಳಿಂದ ಕೊಯ್ಲು ಮಾಡುತ್ತೇವೆ. ಅಷ್ಟು ದೊಡ್ಡ ಸಂಪರ್ಕ ಜಾಲ ನಮ್ಮದು. ನಮ್ಮವರು ನಿತ್ಯ ತಲಾ ₹1500ರಿಂದ ₹2 ಸಾವಿರವರೆಗೆ ಆದಾಯ ಗಳಿಸುತ್ತಿದ್ದಾರೆ’ ಎನ್ನುತ್ತಾರೆ ಈ ಕೂಟದವರು.

ಮಣಿ ಕುಟ್ಟಿಕೋಲ್ ಈ ಕೂಟದ ಸ್ಥಾಪಕ. ಸ್ನೇಹಿತರಾದ ವಿಜಯನ್, ರಾಜೇಶ್ ಮತ್ತು ಸುಕುಮಾರಂ ಅವರೊಂದಿಗೆ ತೆಂಗಿನಕಾಯಿ ಕೊಯ್ಲುಗಾರರನ್ನು ಸಂಘಟಿಸಿ, ಗುಂಪು ರಚಿಸಿಕೊಂಡಿದ್ದಾರೆ. ಸುಮಾರು ನಾಲ್ಕು ವರ್ಷದಿಂದ ಈ ಕೂಟ ಸೇವೆ ಸಲ್ಲಿಸುತ್ತಿದೆ. ಸೊಸೈಟಿಗಳ ನೋಂದಣಿ ಕಾಯ್ದೆ ಅಡಿಯಲ್ಲಿ ‘ಚೆಂಗಾಡಿ ಕೂಟಂ’ ಅನ್ನು ನೋಂದಾಯಿಸಿದ್ದಾರೆ. ಸಂಘವು ಈಗ 10 ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮಿತಿಗಳನ್ನು ಹೊಂದಿದೆ. ಪ್ರತಿ ಸಮಿತಿ ಪ್ರತ್ಯೇಕ ವಾಟ್ಸ್‌ಆ್ಯಪ್ ಗ್ರೂಪ್ ಹೊಂದಿವೆ.

ಬೆಳಿಗ್ಗೆ 7 ಗಂಟೆಯ ಹೊತ್ತಿಗೆ ಅವರು ತೆಂಗಿನ ತೋಟಗಳಲ್ಲಿರುತ್ತಾರೆ ಮತ್ತು ಸಾಮಾನ್ಯವಾಗಿ ಸುಮಾರು 11 ಗಂಟೆಯೊಳಗೆ ಕೆಲಸ ಮುಗಿಸುತ್ತಾರೆ. ಒಬ್ಬ ಅನುಭವಿ ಕೊಯ್ಲುಗಾರನು ಒಂದು ಗಂಟೆಯಲ್ಲಿ 10 ಮರಗಳಿಂದ ತೆಂಗಿನಕಾಯಿ ಕೊಯ್ಲು ಮಾಡಬಹುದು. ಗ್ರಾಹಕರು ಕರೆ ಮಾಡಿದಾಗ, ಕಟಾವು ಮಾಡುವವರು ದೂರ, ಮರಗಳ ಸಂಖ್ಯೆ, ಕೆಲಸ ಯಾವಾಗ ಮುಗಿಯಬೇಕು ಇತ್ಯಾದಿ ವಿವರಗಳನ್ನು ಕೇಳುತ್ತಾರೆ. ಕರೆ ಸ್ವೀಕರಿಸುವವರು ಸ್ವಂತವಾಗಿ ಕೆಲಸ ನಿರ್ವಹಿಸ ಬಹುದಾದರೆ, ಅವರು ದಿನಾಂಕಗಳನ್ನು ನೀಡುತ್ತಾರೆ. ಹೆಚ್ಚಿನ ಸಿಬ್ಬಂದಿ ಅಗತ್ಯವಿದ್ದರೆ, ಅದನ್ನು ವ್ಯವಸ್ಥೆಗೊಳಿಸುತ್ತಾರೆ.

ಹಲೋ ನಾರಿಯಲ್ ಎಂಬುದು ಒಂದು ಸಂಸ್ಥೆ. ಚೆಂಗಾಡಿ ಕೂಟಂ ಇದು ಸ್ಥಳೀಯ ಕಾರ್ಮಿಕರೇ ಕಟ್ಟಿಕೊಂಡ ಸಂಘಟನೆ. ಎರಡೂ ಮಾದರಿ ಅಲ್ಲಿ ಯಶಸ್ವಿಯಾಗಿವೆ.

ವಿಟ್ಲದ ಪಿಂಗಾರ ಸಂಸ್ಥೆಯವರು ಕಾರ್ಮಿಕರಿಗೆ ತಿಂಗಳಿಗೆ ಇಂತಿಷ್ಟು ಎಂದು ಸಂಬಳ ನಿಗದಿ ಮಾಡಿದ್ದಾರೆ. ಆ ಕಾರ್ಮಿಕರು ಮಾಡುವ ಕೆಲಸದ ಆಧಾರದ ಮೇಲೆ ಪ್ರೋತ್ಸಾಹಧನ ನೀಡುತ್ತಾರೆ. ಮದ್ದು ಸಿಂಪಡಿಸಲು ಪ್ರತಿ ಅಡಿಕೆ ಮರಕ್ಕೆ ₹10, ಅಡಿಕೆ ಗೊನೆ ಕೊಯ್ಲಿಗೆ ಪ್ರತಿ ಗೊನೆಗೆ ₹13 ದರ ನಿಗದಿ ಮಾಡಲಾಗಿದೆ. ಅಡಿಕೆ ಮರಕ್ಕೆ ಕರಿಮೆಣಸು ಬಳ್ಳಿ ಬೆಳೆಸಿದ್ದರೂ ಸಹ ಹೆಚ್ಚುವರಿ ದರ ವಿಧಿಸುವುದಿಲ್ಲ. ತೆಂಗು ಕೊಯ್ಲಿಗೆ ಪ್ರತಿ ಮರಕ್ಕೆ ₹50 ದರ ಪಡೆಯಲಾಗುತ್ತದೆ.

‘ಕ್ಲೈಂಬರ್ ಉಪಕರಣದ ಸಹಾಯದಿಂದ ತೆಂಗಿನ ಮರವೇರಿ ಕೆಲಸ ಮಾಡಲಾಗುತ್ತದೆ. ತೆಂಗಿನ ಮರಕ್ಕೆ ಕರಿಮೆಣಸು ಬಳ್ಳಿ ಬೆಳೆಸಿದ್ದರೆ ಆಗ ಕ್ಲೈಂಬರ್ ಬಳಕೆ ಸಾಧ್ಯವಾಗದು. ಏಣಿ ಇಟ್ಟು ಮರ ಹತ್ತಬೇಕಾಗುತ್ತದೆ. ಅದಕ್ಕೆ ಪ್ರತಿ ಮರಕ್ಕೆ ₹80 ದರ ನಿಗದಿ ಮಾಡಲಾಗಿದೆ’ ಎಂದು ಪಿಂಗಾರ ಸಂಸ್ಥೆಯ ತೆಂಗು ಕೊಯ್ಲು ತಂಡದ ವ್ಯವಸ್ಥಾಪಕ, ಇರ್ದೆ ಗ್ರಾಮದ ಪ್ರಶಾಂತ್ ಕುಮಾರ್ ಹೇಳಿದರು.

ಕಲ್ಲಡ್ಕ ಬಳಿಯ ಬೋಳುವಾರು ಗ್ರಾಮದ ಮಹಾಬಳ ರೈ ಅವರ ತೆಂಗಿನ ತೋಟದಲ್ಲಿ ತೆಂಗು ಕೊಯ್ಲು ಮಾಡುತ್ತಿದ್ದ ಈ ತಂಡದ ಜಾರ್ಖಂಡ್‌ನ ಕಾರ್ಮಿಕರಾದ ನಮಿತ್, ಬಿನೇಶ್ವರ್, ಜಿತೇಂದರ್, ಅನೂಜ್ ಹಾಗೂ ಸುರೇಶ್ ಅವರನ್ನು ಮಾತಿಗೆಳೆದಾಗ ಅವರದ್ದೂ ಅದೇ ಮಾತು... ‘ನಮಗೆ ಮೊದಲು ಈ ಕೆಲಸ ಗೊತ್ತೇ ಇರಲಿಲ್ಲ. ನಮಗೆಲ್ಲರಿಗೂ ಇದು ಹೊಸ ಅನುಭವ ಹಾಗೂ ಖುಷಿಯ ಕೆಲಸ’.

ಸಹಕಾರ ತತ್ವ ಹಾಗೂ ಯಾಂತ್ರೀಕರಣದಿಂದ ಕರಾವಳಿಯಲ್ಲಿ ಅಡಿಕೆ ಮತ್ತು ತೆಂಗು ಕೃಷಿ ಸರಳವಾಗುತ್ತಿದೆ. ಇದು ಎಲ್ಲಾ ಕಡೆಗೂ ಹರಡಬೇಕಾಗಿದೆ. ❖

ನಿಖರ ಸೇವೆ; ವೈಜ್ಞಾನಿಕ ದರ ನಿಗದಿ



ಒಂದು ದೋಟಿಗೆ ಅಂದಾಜು ₹80 ಸಾವಿರ ಬೆಲೆ ಇದೆ. ಇಷ್ಟೊಂದು ಹಣ ತೆತ್ತು ಖರೀದಿಸುವುದು ಸಣ್ಣ ರೈತರಿಗೆ ಕಷ್ಟ. ಮೇಲಾಗಿ ಅದಕ್ಕೆ ಪಳಗಿದ ಕಾರ್ಮಿಕರೂ ಬೇಕು. ಸಣ್ಣ ಮತ್ತು ಮಧ್ಯಮ ರೈತರನ್ನು ಗಮನದಲ್ಲಿ ಇಟ್ಟುಕೊಂಡು ನಾವು ಇದನ್ನು ಆರಂಭಿಸಿದೆವು. ಇಂತಹ ತಂಡ ಕಟ್ಟಲು ತರಬೇತಿ ಆಯೋಜಿಸಿ ಇದರಲ್ಲಿ ಪಾಲ್ಗೊಳ್ಳುವಂತೆ ಕಾರ್ಮಿಕರನ್ನು ಆಹ್ವಾನಿಸಿದೆವು. ನಮ್ಮ ತೋಟದಲ್ಲಿಯೇ ಒಂದು ದಿನದ ತರಬೇತಿ ನಡೆಯಿತು. 25 ಕಾರ್ಮಿಕರು ಪಾಲ್ಗೊಂಡರು. ನಮ್ಮ ಕಂಪನಿಯ ಮೂವರು ಕೆಲಸಗಾರರೂ ಇದರಲ್ಲಿ ಇದ್ದರು. ನಮ್ಮ ಪಿಂಗಾರ ಸಂಘದಿಂದ 3 ದೋಟಿ ಖರೀದಿಸಿ, ಕೆಲಸ ಆರಂಭಿಸಿದೆವು. ಈಗ 30 ದೋಟಿಗಳು, ಆರು ತಂಡಗಳು ಕಾರ್ಯನಿರ್ವಹಿಸುತ್ತಿವೆ. ಈ ವರ್ಷ ಮಳೆಗಾಲ ಮುಗಿಯುವಷ್ಟರಲ್ಲಿ 50 ದೋಟಿ ತಲುಪುವ ಗುರಿಯಿದೆ.

ಒಂದೆರಡು ತಿಂಗಳು ಹೊರತುಪಡಿಸಿ ಇಡೀ ವರ್ಷ ಕೆಲಸ ಇರುತ್ತದೆ. ಹಣ್ಣಾದ ಗೊನೆಗಳನ್ನು ಮಾತ್ರ ಕೊಯ್ಲು ಮಾಡುವುದರಿಂದ ವರ್ಷಕ್ಕೆ ನಾಲ್ಕು ಬಾರಿ ಅಡಿಕೆಯ ಕೊಯ್ಲು ಕೆಲಸ ಇರುತ್ತದೆ. ಬೇಡಿಕೆ ಹೆಚ್ಚುತ್ತಲೇ ಇದ್ದು, ವಿಟ್ಲದಿಂದ 30 ಕಿ.ಮೀ. ಸುತ್ತಳತೆಯಲ್ಲಿ ರೈತರಿಗೆ ಸೇವೆ ಒದಗಿಸುತ್ತಿದ್ದೇವೆ. ರೈತರು ಮತ್ತು ಕೆಲಸಗಾರರು ಇಬ್ಬರಿಗೂ ಮೋಸ ಆಗಬಾರದು ಎಂಬ ಕಾರಣಕ್ಕೆ ನಾವು ವೈಜ್ಞಾನಿಕವಾಗಿ ದರ ನಿಗದಿ ಮಾಡಿದ್ದೇವೆ. ಹೊಸ ವಿಧಾನದ ಮೂಲಕ ಸಿಂಪಡಣೆ ಮಾಡಿದ ಅಡಿಕೆಗೆ ಕೊಳೆ ರೋಗ ಬಂದಿಲ್ಲ. ಸಿಂಪಡಣೆ ಪರಿಣಾಮಕಾರಿಯಾಗಿದೆ ಎಂದು ರೈತರು ಹೇಳುತ್ತಿರುವುದು ನಮ್ಮ ಉಮೇದು ಹೆಚ್ಚಿಸಿದೆ.

ರಾಮಕಿಶೋರ್ ಮಂಚಿ, ಅಧ್ಯಕ್ಷ, ಪಿಂಗಾರ ತೋಟಗಾರಿಕೆ ರೈತರ ಉತ್ಪಾದಕ ಕಂಪನಿ ವಿಟ್ಲ

ಶೇ 80ರಷ್ಟು ಸಮಸ್ಯೆ ನೀಗಿದೆ



45 ವರ್ಷಗಳಿಂದ ನಾನು ಅಡಿಕೆ-ತೆಂಗು ಕೃಷಿ ಮಾಡುತ್ತಿದ್ದು, ನಾನು ಎದುರಿಸುತ್ತಿದ್ದ ಶೇ 80ರಷ್ಟು ಕಾರ್ಮಿಕ ಸಮಸ್ಯೆಯು ದೋಟಿ ಗ್ಯಾಂಗ್ ಸೇವೆಯಿಂದಾಗಿ ನೀಗಿದೆ. ಸಾಂಪ್ರದಾಯಿಕ ಪದ್ಧತಿಗಿಂತ ಈ ವ್ಯವಸ್ಥೆ ಆರ್ಥಿಕವಾಗಿ ಮಿತವ್ಯಯ. ಕೆಲಸದಲ್ಲಿ ಪರಿಪೂರ್ಣತೆ ಇದೆ. ಅಡಿಕೆಗೆ ಕೊಳೆ ರೋಗ, ಎಲೆ ಚುಕ್ಕೆ ರೋಗಕ್ಕೆ ವರ್ಷಕ್ಕೆ ನಾಲ್ಕು ಬಾರಿ ಕೀಟನಾಶಕ ಸಿಂಪಡಿಸಬೇಕು. ಸಿಂಪಡಣೆಯ ವೇಳೆ ಮದ್ದು ನೆಲಕ್ಕೆ ಬಿದ್ದು ಹಾನಿಯಾಗುವುದು ತಪ್ಪಿದ್ದು, ಮದ್ದಿನಲ್ಲಿ ಶೇ 50ರಿಂದ 60ರಷ್ಟು ಉಳಿತಾಯವಾಗುತ್ತಿದೆ. ಎಲ್ಲ ಗೊನೆಗಳಿಗೂ ಸಿಂಪಡಣೆ ಮಾಡುತ್ತಿರುವುದರಿಂದ ನನ್ನ ತೋಟದಲ್ಲಿ ಕೊಳೆರೋಗ ಮರಳಿ ಬಂದಿಲ್ಲ. ಇಂತಹ ಹೊಸ ಆವಿಷ್ಕಾರಕ್ಕೆ ರೈತರು ತೆರೆದುಕೊಂಡರೆ ಕೃಷಿ ಮತ್ತಷ್ಟು ಸಲೀಸಾಗಲು, ಯುವಕರನ್ನು ಕೃಷಿಯತ್ತ ಸೆಳೆಯಲು ಸಾಧ್ಯ.

ಸುರೇಶ ಬಲ್ನಾಡು, ಕೃಷಿಕ, ಪುತ್ತೂರು

ಕಾರ್ಮಿಕರಿಗಾಗಿ ಕಾಯುವ ತಾಪತ್ರಯ ತಪ್ಪಿದೆ

ಪಿಂಗಾರ ಸಂಸ್ಥೆಯ ದೋಟಿ ಗ್ಯಾಂಗ್ ಸೇವೆಯಿಂದ ನಾವು ಎದುರಿಸುತ್ತಿದ್ದ ಕಾರ್ಮಿಕರ ಸಮಸ್ಯೆ ನೀಗಿದೆ. ಕಾರ್ಮಿಕರಿಗಾಗಿ ಕಾಯುತ್ತ ಕೂರಬೇಕಿಲ್ಲ. ಅವರಿಗೆ ಕರೆ ಮಾಡಿ ಹೇಳಿದರೆ ಸಾಕು. ನಾಳೆ ನಿಮ್ಮ ತೋಟಕ್ಕೆ ಬರುತ್ತೇವೆ ಎಂದು ಹಿಂದಿನ ದಿನ ಮಾಹಿತಿ ನೀಡುತ್ತಾರೆ. ಹೇಳಿದ ದಿನ ಎಲ್ಲ ಉಪಕರಣಗಳೊಂದಿಗೆ ಬಂದು ಕೆಲಸ ಮಾಡುತ್ತಾರೆ. ರೈತರು ಮದ್ದು ತಯಾರಿಸಿಕೊಡಬೇಕು ಮತ್ತು ಕಾರ್ಮಿಕರಿಗೆ ಊಟದ ವ್ಯವಸ್ಥೆ ಮಾಡಬೇಕು ಅಷ್ಟೇ.

ಕೆ.ವಿಶ್ವನಾಥ ಭಟ್ಟ, ಕೃಷಿಕರು, ಕುರಿಯ, ಪುತ್ತೂರು

ಸಾಂಸ್ಥಿಕ ರೂಪದ ಸೇವೆ ರೈತರಿಗೆ ವರದಾನ



ಸಾಂಪ್ರದಾಯಿಕ ವಿಧಾನದಲ್ಲಿ ಕಾರ್ಮಿಕರು ಅಡಿಕೆ ಮರ ಹತ್ತುವುದು-ಇಳಿಯುವುದು ಅನಿವಾರ್ಯವಾಗಿತ್ತು. ಅವರ ಬಹಳಷ್ಟು ಶ್ರಮ ಇದಕ್ಕೇ ವ್ಯಯವಾಗುತ್ತಿತ್ತು. ದೋಟಿ ಬಳಕೆಯಿಂದಾಗಿ ಈ ತಾಪತ್ರಯ ತಪ್ಪಿದ್ದು, ಕಾರ್ಮಿಕರ ಪ್ರೊಡಕ್ಟಿವಿಟಿ ಹೆಚ್ಚಿದೆ. ಸಾಂಸ್ಥಿಕ ರೂಪದ ಇಂತಹ ‘ಕಾರ್ಮಿಕರ ಪೂರೈಕೆ’ಯ ಸೇವೆ ಅಡಿಕೆ-ತೆಂಗು ಬೆಳೆಯುವ ಸಣ್ಣ-ಮಧ್ಯಮ ರೈತರಿಗೆ ವರದಾನ. ರೈತ ಉತ್ಪಾದಕ ಕಂಪನಿಗಳು (FPO) ರೈತರಿಗೆ ಇಂತಹ ಸೇವೆ ಒದಗಿಸಲು ಮುಂದಾಗಬೇಕು.

ಸಾಂಪ್ರದಾಯಿಕ ವಿಧಾನದಲ್ಲಿ ಅಡಿಕೆ ಕೊಯ್ಲು ಮಾಡಿದರೆ ಎಲ್ಲ ಅಡಿಕೆಯನ್ನು ನೆಲಕ್ಕೆ ಎಸೆಯಲಾಗುತ್ತದೆ. ಅದನ್ನು ಹೆಕ್ಕಲು ಬಹಳಷ್ಟು ಖರ್ಚು ಮಾಡಬೇಕಾಗುತ್ತದೆ. ಒಬ್ಬ ಕಾರ್ಮಿಕ ದೋಟಿ ಬಳಸಿ ಕೊಯ್ಲು ಮಾಡಿದರೆ, ಇನ್ನೊಬ್ಬ ಕಾರ್ಮಿಕ ಜಾಳಿಗೆಯ ಉಪಕರ-ಣದಲ್ಲಿ ಅದನ್ನು ಸಂಗ್ರಹಿಸುತ್ತಾನೆ. ಹೀಗಾಗಿ ಅಡಿಕೆ ಹೆಕ್ಕುವ ಶ್ರಮ ಉಳಿಯುತ್ತದೆ. ಒಂದೇ ದಿನದಲ್ಲಿ ಕೆಲಸ ಮುಗಿಯುತ್ತದೆ. ಹೀಗಾಗಿ ಸಿಂಪಡಣೆ ಮತ್ತು ಕೊಯ್ಲು ಖರ್ಚಿನ ಲೆಕ್ಕ ಹಾಕಿದರೆ ಸಾಂಪ್ರದಾಯಿ-ಕವಿಧಾನಕ್ಕಿಂತ ಈ ವಿಧಾನದಲ್ಲಿ ರೈತರಿಗೆ ಕನಿಷ್ಠ ಶೇ 50ರಷ್ಟು ಉಳಿತಾಯವಾಗುತ್ತದೆ.

ತೋಟದಲ್ಲಿ ಕೆಲಸ ಮಾಡುವಾಗ ಆಕಸ್ಮಿಕವಾಗಿ ದೋಟಿ ವಿದ್ಯುತ್ ತಂತಿಗೆ ತಾಗಿದರೂ ಅದು ಕರಗಿ ಹೋಗುತ್ತದೆ. ಅದರ ಮೂಲಕ ವಿದ್ಯುತ್ ಸ್ಪರ್ಶವಾಗಿ ಕಾರ್ಮಿಕರಿಗೆ ಅಪಾಯ ಮಾಡುವುದಿಲ್ಲ.

ಶ್ರೀಪಡ್ರೆ, ಅಡಿಕೆ ಕೃಷಿ ತಜ್ಞ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 23-6-1999

● **ಪ.ಬಂಗಾಳ ರೈಲು ನಿಲ್ದಾಣದಲ್ಲಿ ಬಾಂಬ್ ಸ್ಫೋಟಕ್ಕೆ 10 ಬಲಿ**

ಕಲ್ಕತ್ತ, ಜೂನ್ 22 (ಯುಎನ್‌ಐ, ಪಿಟಿಐ)– ನ್ಯೂ ಜಲಪೈಗುರಿ ರೈಲು ನಿಲ್ದಾಣದಲ್ಲಿ ಇಂದು ಮಧ್ಯಾಹ್ನ ಸಂಭವಿಸಿದ ಶಕ್ತಿಯುತ ಬಾಂಬ್ ಸ್ಫೋಟದಲ್ಲಿ ಕಾರ್ಗಿಲ್‌ಗೆ ತೆರಳುತ್ತಿದ್ದ ಇಬ್ಬರು ಸೈನಿಕರೂ ಸೇರಿ 10 ಮಂದಿ ಬಲಿಯಾಗಿ, ಕನಿಷ್ಠ 80 ಮಂದಿ ಗಾಯಗೊಂಡಿದ್ದಾರೆ.

2 ಫ್ಲಾಟ್‌ಫಾರಂಗಳ ಮಧ್ಯೆ ಸಂಭವಿಸಿದ ಶಬ್ದ ಒಂದು ಕಿ. ಮೀ. ವರೆಗೆ ಕೇಳಿಸಿತು. ಸ್ಫೋಟಕ್ಕೆ ದೆಹಲಿಗೆ ತೆರಳುತ್ತಿದ್ದ ಮಹಾನಂದ ಎಕ್ಸ್‌ಪ್ರೆಸ್ ರೈಲುಗಾಡಿ ಗುರಿಯಾಗಿದೆ ಎಂದು ಕಟಿಹಾರ್‌ನ ವಿಭಾಗೀಯ ರೈಲ್ವೆ ಮ್ಯಾನೇಜರ್ ಸೋಮನಾಥ ಮುಖರ್ಜಿ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 23-6-1974

● **ಎರಡು ವರ್ಷ ವೇತನ ಸ್ತಂಭನ ಪಿ.ಎಫ್ ವಾಪಸಾತಿಗೂ ತಡೆ**

ನವದೆಹಲಿ, ಜೂನ್ 22– ಹದಿನೆಂಟು ತಿಂಗಳಿನಿಂದ ಎರಡು ವರ್ಷಗಳವರೆಗೆ ವೇತನ ಸ್ತಂಭನ ಜಾರಿಗೆ ತರುವ ವಿಷಯವನ್ನು ಕೇಂದ್ರ ಸರ್ಕಾರ ತೀವ್ರವಾಗಿ ಪರಿಶೀಲಿ-ಸುತ್ತಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನೌಕರರು ಹಾಗೂ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಕೈಗಾರಿಕೆಗಳಲ್ಲಿನ ನೌಕರರ ವೇತನವನ್ನು ಒಂದೂವರೆ ವರ್ಷದಿಂದ ಎರಡು ವರ್ಷದವರೆಗೆ ಏರಿಸದಂತೆ ಹಾಗೂ ನೌಕರರಿಗೆ 2 ವರ್ಷ ತಮ್ಮ ಪ್ರಾವಿಡೆಂಟ್ ಫಂಡ್‌ನಿಂದ ಹಣ ವಾಪಸು ಪಡೆಯಲು ಅವಕಾಶ ನೀಡಬಾರದೆಂಬ ಸಲಹೆಯನ್ನೂ ಪರಿಶೀಲಿಸುತ್ತಿದೆ ಎಂದು ತಿಳಿದುಬಂದಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜೂನ್ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದ್ವಿತೀಯ ಗಂ. 27-27 ನಕ್ಷತ್ರ: ಪೂರ್ವಾಷಾಢ ಗಂ. 17-04 ಯೋಗ: ಬ್ರಹ್ಮ ಗಂ. 14-26 ಕರಣ: ತೈತಿಲ ಗಂ. 16-23, ಮಿಥುನ ಮಾಸದ ನೇ 09 ದಿನ, ಮಳೆನಕ್ಷತ್ರ: ಆರ್ದ್ರಾ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-09 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 17 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 3, 11

ಮೇಷ: ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಕೆಲಸದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿ. ಊರಿನಲ್ಲಿ ನಡೆಯುವ ಸುಗಮ ಸಂಗೀತದಲ್ಲಿ ಭಾಗವಹಿಸುವಿರಿ.

ವೃಷಭ: ಬಹುಜನರ ಅಭಿಪ್ರಾಯವನ್ನು ಕೇಳಿ ಆರಂಭಿಸಲು ಹೊರಟ ಕೆಲಸದಲ್ಲಿ ವಿಭಿನ್ನ ಅಭಿಪ್ರಾಯದಿಂದಾಗಿ ಗೊಂದಲಕ್ಕೆ ಒಳಗಾಗುವಿರಿ. ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವವೂ ಹೆಚ್ಚುವುದು.

ಮಿಥುನ: ಜೀವನದ ಹಳೆಯ ನೆನಪುಗಳನ್ನು ಮರೆತು ಭವಿಷ್ಯದತ್ತ ಗಮನಹರಿಸಿ. ಕಾರ್ಮಿಕರ ಅಸಹಕಾರದಿಂದ ಗೃಹ ನಿರ್ಮಾಣ ಕಾರ್ಯ ವಿಳಂಬವಾಗುತ್ತದೆ. ಉತ್ತಮ ಆಹಾರವನ್ನು ಸವಿಯುವಿರಿ.

ಕರ್ಕಾಟಕ: ಮುಖ್ಯವಿಷಯವನ್ನು ಮಾತನಾಡಲು ಮರೆತುದರಿಂದ ದಿನಚರಿಯಲ್ಲಿ ವಿಳಂಬ ಅನುಭವಿಸುವಂತೆ ಆಗುವುದು. ದೂಳಿನಿಂದಾಗಿ ಕಣ್ಣಿನ ಸಮಸ್ಯೆ ಉಂಟಾಗಬಹುದು.

ಸಿಂಹ: ಗುರುವಿನ ಸಾನ್ನಿಧ್ಯ ಹಾಗೂ ನಿಶ್ಚಲವಾದ ಭಕ್ತಿಯು ಮನಶ್ಶಾಂತಿ ತಂದುಕೊಡುವುದು. ವಾತ್ಸಲ್ಯ ಹಾಗೂ ಪ್ರೀತಿಯಿಂದ ಕುಟುಂಬದವರ ಮನಸ್ಸನ್ನು ಗೆಲ್ಲುವಿರಿ. ನಟನಾ ವೃತ್ತಿಯವರಿಗೆ ಸಂಪತ್ತು ಹರಿದು ಬರಲಿದೆ.

ಕನ್ಯಾ: ಕೈಯಲ್ಲಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಖಾಲಿ ಮಾಡಿಕೊಳ್ಳುವುದು ಸರಿಯಲ್ಲ. ಮಾತು ಅತಿರೇಕ ತಲುಪದಂತೆ ಎಚ್ಚರ ವಹಿಸುವಿರಿ. ಸದ್ಗುರು ದತ್ತಾತ್ರೇಯರ ಆರಾಧನೆಯಿಂದ ಜ್ಞಾನ ಸಂಪಾದಿಸಿಕೊಳ್ಳಿರಿ.

ತುಲಾ: ಮನೆಯ ಹತ್ತಿರದಲ್ಲಿ ಅತಿ ಜನಸಂಖ್ಯೆ ಸೇರುವ ಕಾರ್ಯಕ್ರಮವು ಶಾಂತ ಚಿತ್ತಕ್ಕೆ ಭಂಗ ತರುವುದು. ಉದ್ಯಮಿಗಳಿಗೆ ಕಾರ್ಮಿಕರ ಕೊರತೆ ಕಾಣಲಿದೆ. ಕಂಕಣ ಭಾಗ್ಯ ಕೂಡಿಬಂದಾಗ ವಿನಾಕಾರಣ ತಳ್ಳಿಹಾಕುವುದು ತರವಲ್ಲ.

ವೃಶ್ಚಿಕ: ತಾಂತ್ರಿಕ ವಿದ್ಯಾರ್ಥಿಗಳಿಗೆ ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪೆ ಬೇಕಾಗುವುದು. ದೈನಂದಿನ ಆಗುಹೋಗಿನ ಬಗ್ಗೆ ಹೆಚ್ಚಿನ ಗಮನಹರಿಸಿ. ಪ್ರಾಪಂಚಿಕ ಬದುಕಿನ ಬಗ್ಗೆ ತಿಳಿದುಕೊಳ್ಳಿ.

ಧನು: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯ ವ್ಯವಹಾರ-ಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡಬೇಕಾದ ಸಂದರ್ಭ ಬರುವುದು.

ಮಕರ: ಯಾವ ವಿಷಯದ ಬಗ್ಗೆಯೇ ಆದರೂ ಆಳವಾದ ಯೋಚನೆ ಬೇಡ. ಉದ್ಯಮದ ವಿಚಾರದಲ್ಲಿ ಹಿತಶತ್ರುಗಳ ಭಯ ಕಾಡುತ್ತದೆ. ಐಷಾರಾಮಿ ಜೀವನದ ಬಗ್ಗೆ ಹೇವರಿಕೆ ಹುಟ್ಟುವುದು.

ಕುಂಭ: ಬಹುವಾಗಿ ಬೇಕಾದ ವ್ಯಕ್ತಿಗಳ ಅನುಪಸ್ಥಿತಿಯಿಂದಾಗಿ ಮಾಡುವ ಎಲ್ಲಾ ಕೆಲಸಗಳಲ್ಲೂ ಸಣ್ಣಪುಟ್ಟ ಗಡಿಬಿಡಿಗಳುಂಟಾಗುವುದು. ಸ್ಥಿರವಾಗಿ ನಡೆಯುತ್ತಿದ್ದ ಉದ್ಯೋಗದಲ್ಲಿ ಅಭದ್ರತೆ ಕಾಡಬಹುದು.

ಮೀನ: ಗಣಪತಿಗೆ ಸಂಬಂಧಿಸಿದಂತೆ ಹರಕೆಯ ರೂಪದಲ್ಲಿರುವ ಅಥವಾ ಬಹಳ ದಿನಗಳಿಂದ ಅಂದುಕೊಂಡಿದ್ದ ದೇವರ ಕೆಲಸಗಳನ್ನು ಮುಗಿಸುವ ಪ್ರಯತ್ನಮಾಡಿ. ಅಧಿಕಾರದ ಜಂಜಾಟದಿಂದ ಪಾರಾಗುವ ಸಾಧ್ಯತೆ ಇದೆ.

ಪದಬಂಧ 5720

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಗಳ ಒಡೆಯ (4)
3.ಗಾಳಿಪಟದ ಕೆಳಗೆ ಸಮತೋಲನಕ್ಕಾಗಿ ಕಟ್ಟುವ ಕುಚ್ಚು (4)
5.ರಾಮನ ಮಗ ಹಿಡಿದಿರುವ ಉಪ್ಪು (3)
7.ಅಂಕಣದಲ್ಲಿರುವ ಸಂಖ್ಯೆ (2)
8.ಶರಣ ಹಿಡಿದಿರುವ ಬಾಣ (2)
10.ದೇವನೊಲಿದರೆ ಕೊರಡು ಹೀಗೆ ಚಿಗುರೀತು (3)
11.ಕಟ ಕಟ ಸದ್ದು ಮಾಡುವ ರಥ (3)
13.ರಭಸವಾಗಿ ಚಲ್ಲಿದ ದ್ರವ (2)
15.ಏಳು ದಿನಗಳ ಅವಧಿ (2)
16.ಜೈನರ ದೇವಾಲಯ (3)
18.ಕಲೆಯೊಳಡಗಿರುವ ಆಹ್ವಾನ (4)
19.ತಟಕ್ಕನೆ ತೋರಿದ ಮೋಸಗಾರಿಕೆ (4)

ಮೇಲಿಂದ ಕೆಳಕ್ಕೆ
1.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
2.ತಿರುಮಲದಲ್ಲಿರುವ ಎಳ್ಳು (2)
3.ಬಾದಾರಾಯಣ ಕಾಲದ ಅಂಬು (2)
4.ಈತ ಬಲು ಕೋಪಿಷ್ಠ (3)
6.ವನದಲ್ಲಿ ನೀಡಿರುವ ವಾಗ್ದಾನ (3)
7.ಕಾರನ್ನೇರಿ ನೀಡಿದ ಸಮ್ಮತಿ (4)
9.ಬೆಲೆಯುಳ್ಳ ಮಣಿಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ದೇವಾಲಯದ ಗೋಪುರದ ತುದಿ (3)
14.ನೆಮ್ಮದಿ ಹೀಗೆ ಬಂದಿದೆ (4)
15.ವಾದ್ಯವನ್ನು ನುಡಿಸುವಾತ (3)
16.ಅಬಲೆ ಬೀಸಿರುವ ಗಾಳ (2)
17.ದಿಟ್ಟತನದಿಂದ ನುಡಿದಿರುವ ಸತ್ಯ (2)



5719ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ನುಡಿಗಟ್ಟು 6.ನಾರಿಕೇಳ
7.ಪರಾಗ 9.ಮಂಡೂಕ
10.ಮರ್ಮಭೇದಕ
11.ನಿಧನ 12.ರಿಕಾಪು
14.ಕುತೂಹಲ 16.ಪಿತಾಮಹಿ

ಮೇಲಿಂದ ಕೆಳಕ್ಕೆ:
1.ಅನುಲೇಪ 2.ಹೊಟ್ಟು
3.ಯಿನಾ 4.ನಳಪಾಕ
8.ಗಮನ 9.ಮಂಕರಿ
11.ನಿರಂಕುಶ 13.ಪುರೋಹಿತ
15.ಲತ್ತೆ 16.ಪಿಕ

ಸುಡೊಕು 6105

		7		6			1	2
	8		5		2	3		
6		2		4		7		8
	7				9			
5		9		1			3	7
	6		7					4
2		3	8		4			
		6		2				9
8	1		6		7	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6104 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದುಬೈನಲ್ಲಿ ಕುಟುಂಬ ಸ್ನೇಹಿ ತಾಣಗಳು

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಮ್ಯೂಸಿಯಂ ಆಫ್ ದಿ ಫ್ಯೂಚರ್

ಮ್ಯೂಸಿಯಂ ಆಫ್ ದಿ ಫ್ಯೂಚರ್ ಶೇಖ್ ಜಾಯೆದ್ ರಸ್ತೆಯಲ್ಲಿದೆ. ಈ ಸಂಸ್ಥೆಯು ಪ್ರವಾಸಿಗರಿಗೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಭವಿಷ್ಯದ ಒಳನೋಟವನ್ನು ಕಟ್ಟಿಕೊಡುತ್ತದೆ. ನಾವೀನ್ಯ ಮತ್ತು ಪ್ರಗತಿಗೆ ಮೀಸಲಾದ ಅತ್ಯಾಧುನಿಕ ಸಂಸ್ಥೆಗಳಲ್ಲಿ ಇದು ಒಂದಾಗಿದೆ. ದುಬೈ ಫ್ಯೂಚರ್ ಫೌಂಡೇಶನ್‌ನಿಂದ ಇದನ್ನು ಸ್ಥಾಪಿಸಲಾಗಿದೆ.

ದುಬೈನ ಹೃದಯ ಭಾಗದಲ್ಲಿರುವ ಈ ಮ್ಯೂಸಿಯಂ ನವೀನ ಆವಿಷ್ಕಾರಕ್ಕೆ ಹಿಡಿದ ಕನ್ನಡಿ. ಇಲ್ಲಿನ ವಾಸ್ತುಶಿಲ್ಪವು ನೋಡುಗರಲ್ಲಿ ಬೆರಗು ಮೂಡಿಸುತ್ತದೆ. ಮುಂಬರುವ ದಶಕಗಳಲ್ಲಿ ಸಮಾಜವು ಹೇಗೆ ವಿಕಸನಗೊಳ್ಳಬಹುದು ಎಂಬುದರ ಸ್ಥೂಲ ಚಿತ್ರಣವನ್ನು ಕಟ್ಟಿಕೊಡುತ್ತದೆ. ಕೃತಕ ಬುದ್ಧಿಮತ್ತೆ ಮತ್ತು ಸುಸ್ಥಿರ ಜೀವನದ ದರ್ಶಕವಾಗಿದೆ. ಭವಿಷ್ಯದಲ್ಲಿ ಭೂಮಂಡಲದ ಮೇಲೆ ಏನಾಗಬಹುದು ಎಂಬುದರ ಕುರಿತಾದ ಕುತೂಹಲವನ್ನು ತನ್ನ ಒಡಲಲ್ಲಿ ಅಡಗಿಸಿಟ್ಟುಕೊಂಡಿದೆ.

ವೆಬ್‌ಸೈಟ್: www.museumofthefuture.ae



ಡೆಸಾರ್ಟ್ ಸಫಾರಿ

ಅರೇಬಿಯನ್ ಮರುಭೂಮಿಯಿಂದ ಉದಯಿಸುವ ಸೂರ್ಯನ ಮೊದಲ ಕಿರಣಗಳಿಗೆ ಸಾಕ್ಷಿಯಾಗಬೇಕಿದ್ದರೆ ನೀವು ಡೆಸಾರ್ಟ್ ಸಫಾರಿಗೆ ಹೋಗಲೇ ಬೇಕು. ಅಲ್ಲಿನ ವೈಭವವು ಮೋಡಿ ಮಾಡುವುದರಲ್ಲಿ ಸಂಶಯವಿಲ್ಲ.

ನೀವು ತಂಗಿರುವ ಹೋಟೆಲ್‌ನಿಂದಲೇ ಸಫಾರಿಗೆ ಕರೆದೊಯ್ಯುವ ವ್ಯವಸ್ಥೆಯೂ ಇದೆ. ಸಫಾರಿ ವಾಹನದಲ್ಲಿ ಕೇವಲ ನಾಲ್ಕು ಜನರಷ್ಟೇ ಕುಳಿತುಕೊಳ್ಳಬಹುದು. ಜೊತೆಗೆ, ಪರಿಣತ ಮಾರ್ಗದರ್ಶಕ ಹಾಗೂ ಅನುಭವಿ ಚಾಲಕ ಕೂಡ ಜೊತೆಗಿರುತ್ತಾರೆ. ಅಲ್ಲಿನ ಮರಳಿನ ದಿಬ್ಬಗಳ ನಡುವಿನ ಮೋಜಿನ ಪಯಣವು ರೋಮಾಂಚನ ಅನುಭವವನ್ನು ಕಟ್ಟಿಕೊಡುತ್ತದೆ. ಕುಟುಂಬದೊಟ್ಟಿಗೆ ಸಾಹಸಮಯ ಕ್ಷಣಗಳಿಗೆ ಈ ಸಫಾರಿ ಸಾಕ್ಷಿಯಾಗಲಿದೆ. ಮರುಭೂಮಿಯಲ್ಲಿ ಹುದುಗಿರುವ ಭವ್ಯತೆಯು ಅನಾವರಣಗೊಳ್ಳಲಿದೆ. ಅಲ್ಲಿನ ಸ್ಥಳೀಯ ವನ್ಯಜೀವಿಗಳ ಅನ್ವೇಷಣೆಯನ್ನೂ ಮಾಡಬಹುದು.

ಮಕ್ಕಳು ಮತ್ತು ವಯಸ್ಕರಿಗೆ ಒಂದೇ ರೀತಿಯ ರೋಮಾಂಚನಕಾರಿಯಾದ ಅನುಭವ ನೀಡುತ್ತದೆ. ಇದಾದ ಬಳಿಕ ಡೆಸಾರ್ಟ್ ಕ್ಯಾಂಪ್‌ಗೆ ಭೇಟಿ ನೀಡಬಹುದು. ಅಲ್ಲಿ ಒಂಟೆ ಸವಾರಿ, ಫಾಲ್ಕನ್‌ಗಳ ಪ್ರದರ್ಶನವಿದೆ. ಮೆಹಂದಿ ಪ್ರಿಯರಿಗೂ ಅಲ್ಲಿ ಹಬ್ಬದ ಸಡಗರ ಉಂಟು. ಅಲ್ಲಿಯೇ ಸ್ಯಾಂಡ್‌ಬೋರ್ಡಿಂಗ್ ಮಾಡಬಹುದು. ಈ ಅದ್ಭುತ ನೆನಪುಗಳನ್ನು ಕ್ಯಾಮೆರಾದಲ್ಲಿಯೂ ಸೆರೆಹಿಡಿಯಬಹುದು.

ವೆಬ್‌ಸೈಟ್: www.desertsafaridubai.com

ದುಬೈ ಅಕ್ವೇರಿಯಂ

ನೀವು ಕುಟುಂಬ ಸಮೇತರಾಗಿ ದುಬೈ ಪ್ರವಾಸಕ್ಕೆ ತೆರಳಿದರೆ ಭೇಟಿ ನೀಡಲೇ ಬೇಕಾದ ಪ್ರಮುಖ ಸ್ಥಳಗಳ ಪೈಕಿ ದುಬೈ ಅಕ್ವೇರಿಯಂ ಹಾಗೂ ನೀರೊಳಗಿನ ಪ್ರಾಣಿ ಸಂಗ್ರಹಾಲಯವೂ ಒಂದಾಗಿದೆ. 140ಕ್ಕೂ ಹೆಚ್ಚು ತಳಿಯ ಜಲಚರಗಳು ಇಲ್ಲಿವೆ. 10 ದಶಲಕ್ಷ ಲೀಟರ್‌ನಷ್ಟು ನೀರಿನ ಸಂಗ್ರಹವಿದ್ದು, 33 ಸಾವಿರ ಜಲಚರಗಳಿಗೆ ಆವಾಸವಾಗಿದೆ. ಸ್ಯಾಂಡ್ ಟೈಗರ್ ಶಾರ್ಕ್‌ಗಳ ದೊಡ್ಡ ಸಂಗ್ರಹವೇ ಇಲ್ಲಿದೆ.

ವೆಬ್‌ಸೈಟ್: www.thedubaiaquarium.com

ದಿ ಗ್ರೀನ್ ಪ್ಲಾನೆಟ್

ದಿ ಗ್ರೀನ್ ಪ್ಲಾನೆಟ್ ದುಬೈನಲ್ಲಿ 3,000ಕ್ಕೂ ಹೆಚ್ಚು ಸಸ್ಯಗಳು, ಪ್ರಾಣಿಗಳು ಮತ್ತು ಪಕ್ಷಿಗಳಿಗೆ ನೆಲೆಯಾಗಿದೆ. ಪ್ರಕೃತಿ ಮತ್ತು ಪರಿಸರ ವಿಜ್ಞಾನವನ್ನು ಒಟ್ಟುಗೂಡಿಸುವ ಪರಿಕಲ್ಪನೆ ಇಲ್ಲಿ ಜೀವ ತಳೆದಿದೆ. ಕಾಡಿನ ಸೂಕ್ಷ್ಮ ಪದರಗಳು, ಪ್ರತಿಯೊಂದರಲ್ಲೂ ವಾಸಿಸುವ ವಿವಿಧ ಸಸ್ಯಗಳು ಮತ್ತು ಪ್ರಾಣಿಗಳನ್ನು ಇಲ್ಲಿ ಮರುಸೃಷ್ಟಿಸಲಾಗಿದೆ. ನೋಡುಗರಿಗೆ ರೋಮಾಂಚನ ಅನುಭವ ನೀಡುವುದು ನಿಶ್ಚಿತ.

ವೆಬ್‌ಸೈಟ್: www.thegreenplanetdubai.com

ದುಬೈ ಗಾರ್ಡನ್‌ಗ್ಲೋ

ದುಬೈ ಇಡೀ ವಿಶ್ವದಲ್ಲಿಯೇ ಭವ್ಯತೆಗೆ ಹೆಸರುವಾಸಿಯಾಗಿದೆ. ಅಲ್ಲಿನ ಥೀಮ್ ಪಾರ್ಕ್‌ಗಳು ಫ್ಯಾಂಟಸಿ ಹಾಗೂ ಸಾಹಸಮಯ ಜಗತ್ತಿನ ಅನುಭವ ನೀಡುತ್ತವೆ. ಅವುಗಳಲ್ಲಿ ದುಬೈ ಗಾರ್ಡನ್ ಗ್ಲೋ ಕೂಡ ಒಂದಾಗಿದೆ. ಒಂಬತ್ತು ವರ್ಷಗಳ ಹಿಂದೆ ಇದು ಸ್ಥಾಪನೆಯಾಯಿತು. ಈ ಅನನ್ಯ ಮನರಂಜನಾ ಉದ್ಯಾನವು ಎಲ್ಲಾ ವಯೋಮಾನದ ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಈ ಗಾರ್ಡನ್ ಗ್ಲೋ ವಿಶೇಷ ಎಡುಟೈನ ವಲಯವನ್ನು ಹೊಂದಿದ್ದು, ಮಕ್ಕಳು ಪರಸ್ಪರ ವಿನೋದವನ್ನು ಹೊಂದಬಹುದು.

ಆಹಾರ ಪ್ರಿಯರಿಗೂ ಇಷ್ಟದ ತಾಣ. ಇಲ್ಲಿ ದೊಡ್ಡ ಆಹಾರ ಮಂಟಪವಿದ್ದು, ವಿಶ್ವದಾದ್ಯಂತ ಇರುವ ರುಚಿಕರ ಆಹಾರ ಪದಾರ್ಥಗಳು ಇಲ್ಲಿ ದೊರೆಯುತ್ತವೆ.

ಐಸ್ ಪಾರ್ಕ್, ಡೈನೋಸಾರ್ ಪಾರ್ಕ್, ಗ್ಲೋ ಪಾರ್ಕ್, ಮ್ಯಾಜಿಕಲ್ ನೈಟ್ಸ್, ಕಲರ್ ಫುಲ್ ವರ್ಲ್ಡ್, ಹ್ಯಾಪಿನೆಸ್ ಸ್ಟ್ರೀಟ್, ಮೈ ದುಬೈ, ಸೀ ವರ್ಲ್ಡ್ ಮತ್ತು ಹ್ಯಾಪಿ ಫಾರೆಸ್ಟ್ ಇಲ್ಲಿನ ಪ್ರಮುಖ ಆಕರ್ಷಣೆಗಳಾಗಿವೆ. ಅಂದಹಾಗೆ ಇದು ನಗರದ ಹೃದಯಭಾಗದಲ್ಲಿ ಇದೆ. ಅಲ್ ಜಫಲಿಯಾ ಮೆಟ್ರೊ ನಿಲ್ದಾಣ, ಟ್ಯಾಕ್ಸಿ ಅಥವಾ ಖಾಸಗಿ ಬಾಡಿಗೆ ವಾಹನಗಳ ಮೂಲಕ ಪ್ರವೇಶಿಸಬಹುದು. ಸಂಜೆಯ ಹೊತ್ತಿನಲ್ಲಿ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತದೆ.

ವೆಬ್‌ಸೈಟ್: www.dubaigardenglow.com

ಸ್ಕೀ ದುಬೈ

ಇದು ಎಮಿರೇಟ್ಸ್ ಮಾಲ್‌ನ ಒಳಗಿದೆ. ಅಲ್ಲಿನ ಹವೆಯಿಂದ ತಪ್ಪಿಸಿಕೊಳ್ಳಲು ಆಹ್ಲಾದಕರ ಅನುಭವವನ್ನು ನೀಡುತ್ತದೆ. ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಲ್ಲಿ ಒಂದಾಗಿದೆ.

ಹಿಮದಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ಸ್ಕೀಯಿಂಗ್, ಟೊಬೊಗ್ಯಾನಿಂಗ್ ಮತ್ತು ಸ್ನೋ ಬೋರ್ಡಿಂಗ್ ಸೇರಿದಂತೆ ಹಲವು ಸಾಹಸಮಯ ಚಟುವಟಿಕೆಗಳಲ್ಲಿ ತೊಡಗಬಹುದಾಗಿದೆ. ಇಲ್ಲಿ ಪೆಂಗ್ವಿನ್‌ಗಳನ್ನು ವೀಕ್ಷಿಸಿ, ಅವುಗಳ ಮೈದಡವಿ ಆನಂದಿಸಬಹುದು. ಟ್ವಿನ್ ಟ್ರ್ಯಾಕ್ ಬಾಬ್ಸ್‌ಲೆಡ್‌ನಲ್ಲಿ ಸವಾರಿ ಮಾಡುವುದೇ ಮನಸ್ಸಿಗೆ ಆನಂದ. ಇಲ್ಲಿ ನಿರ್ಮಿಸಿರುವ ಹಿಮದ ಗುಹೆಗಳನ್ನು ಹೊಕ್ಕಿ ಜಿಪ್-ಲೈನ್ ಅನ್ನು ಝೂಮ್ ಮಾಡಿ ಸವಾರಿ ಮಾಡುವುದು ರೋಚಕ ಅನುಭವವನ್ನು ನೀಡುತ್ತದೆ.

ವೆಬ್‌ಸೈಟ್: www.skidxb.com/en-ae/ski-dubai

ಆಯಾ ಯೂನಿವರ್ಸ್

ಆಯಾ ಯೂನಿವರ್ಸ್ ಡಬ್ಲ್ಯುಎಫ್‌ಐ ಸಿಟಿ ಮಾಲ್‌ನಲ್ಲಿದೆ. ಆಕರ್ಷಕವಾದ ಬೆಳಕು ಮತ್ತು ಧ್ವನಿ ಪಾರ್ಕ್ ಇಲ್ಲಿದೆ. ಸಮ್ಮೋಹನಗೊಳಿಸುವ 12 ವಲಯಗಳಿವೆ. ಪ್ರತಿಯೊಂದು ವಲಯವು ಕುತೂಹಲಕಾರಿ ಕಥನಗಳನ್ನು ಹೇಳುತ್ತವೆ.

ವೆಬ್‌ಸೈಟ್: www.aya-universe.com

ಐಎಂಜಿ ವರ್ಲ್ಡ್ಸ್ ಆಫ್ ಅಡ್ವೆಂಚರ್

ಐಎಂಜಿ ವರ್ಲ್ಡ್ಸ್ ಆಫ್ ಅಡ್ವೆಂಚರ್ ಜಗತ್ತಿನ ಅತ್ಯುತ್ತಮ ಹಾಗೂ ಅತಿದೊಡ್ಡ ಒಳಾಂಗಣ ಥೀಮ್ ಪಾರ್ಕ್ ಆಗಿದೆ. ಎಲ್ಲಾ ವಯೋಮಾನದವರಿಗೆ ಮನರಂಜನೆ ನೀಡುವ ತಾಣವೂ ಹೌದು. ಇಲ್ಲಿ ಒಟ್ಟು ಆರು ವಲಯಗಳಿವೆ. ಪ್ರತಿಯೊಂದು ಕಾರ್ಟೂನ್ ಹಾಗೂ ಸೂಪರ್‌ಹೀರೊ ಥೀಮ್‌ನಡಿ ನಿರ್ಮಾಣಗೊಂಡಿವೆ.

ಈ ಪೈಕಿ ಎರಡು ವಲಯಗಳು ಜಾಗತಿಕ ಬ್ರ್ಯಾಂಡ್‌ಗಳಾದ ಕಾರ್ಟೂನ್ ನೆಟ್‌ವರ್ಕ್ ಮತ್ತು ಮಾರ್ವೆಲ್ ಅನ್ನು ಪ್ರತಿನಿಧಿಸುತ್ತವೆ. ಸ್ಪೈಡರ್‌ಮನ್ ಹಾಗೂ ಡಾ.ಅಕ್ಟೋಪಸ್ ಸಾಹಸಮಯ ದೃಶ್ಯಗಳನ್ನು ಕಣ್ತುಂಬಿಕೊಳ್ಳಬಹುದು. ಮೈ ಜುಮ್ಮೆನ್ನಿಸುವ ಅಡ್ವೆಂಚರ್ ಮಾಡಬಹುದು.

ಭೂಮಂಡಲದಲ್ಲಿ ಡೈನೋಸಾರ್‌ಗಳು ಸಂಚರಿಸುವುದನ್ನು ನೋಡಲು ಅಥವಾ ಜಗತ್ತನ್ನು ಉಳಿಸಲು ಸಮಯಕ್ಕೆ ಸರಿಯಾಗಿ ಐರನ್‌ಮನ್ ಆಗಿ ಪರಿವರ್ತನೆಗೊಳ್ಳಲು ಇಲ್ಲಿಗೆ ಭೇಟಿ ನೀಡಬೇಕಿದೆ.

ವೆಬ್‌ಸೈಟ್: www.imgworlds.com

ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನಕ್ಕೆ ಚಾಲನೆ

‘ಶಾಲೆಗಳಲ್ಲಿ ಯೋಗ ಶಿಕ್ಷಣ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯದ ಎಲ್ಲ ಶಾಲೆಗಳಲ್ಲಿ ಮತ್ತೆ ಯೋಗ ಶಿಕ್ಷಣ ಜಾರಿ ಜೊತೆಗೆ ಯೋಗ ಶಿಕ್ಷಕರ ನೇಮಕಕ್ಕೆ ಕ್ರಮ ವಹಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿನ ಕಲಾಮಂದಿರದಲ್ಲಿ ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟವು ಶನಿವಾರ ಆಯೋಜಿಸಿದ್ದ ಎರಡು ದಿನಗಳ ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಆರೋಗ್ಯ ಇಲಾಖೆ ವ್ಯಾಪ್ತಿಯ ಎಲ್ಲ ಕ್ಷೇಮ ಕೇಂದ್ರಗಳಲ್ಲಿ ಈಗಾಗಲೇ ಯೋಗ ಕಲಿಸಲಾಗುತ್ತಿದೆ. ಶಾಲೆಗಳಲ್ಲೂ ಈ ಹಿಂದೆ ಯೋಗ ಶಿಕ್ಷಣ ನೀಡಲಾಗುತ್ತಿತ್ತು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಿಂತು ಹೋಗಿದ್ದು, ಮತ್ತೆ ಆರಂಭಿಸಲಾಗುವುದು’ ಎಂದರು.

‘ಆಯುರ್ವೇದ, ಯೋಗ, ಯುನಾನಿ ಪದ್ಧತಿಗಳನ್ನು ಅಲೋಪತಿ ಜೊತೆ ಸೇರಿಸಿ ಒಂದೇ ವೈದ್ಯಕೀಯ ಪದ್ಧತಿ ಅಡಿ ತರಬೇಕೆಂಬ ಬೇಡಿಕೆಯನ್ನು ಪರಿಶೀಲಿಸಲಾಗುವುದು. ಆದರೆ, ಆಯುರ್ವೇದ ವೈದ್ಯರು ಅಲೋಪತಿ ಚಿಕಿತ್ಸೆ ನೀಡಲು ಸರ್ಕಾರ ಅನುಮತಿ ನೀಡಲಾಗದು’ ಎಂದು ತಿಳಿಸಿದರು.

‘ಯೋಗವು ಧರ್ಮವನ್ನು ಮೀರಿದ ಪದ್ಧತಿ. ಅಧ್ಯಾತ್ಮಿಕ ಅಭ್ಯಾಸಕ್ಕೆ ಇರುವ ವೈಜ್ಞಾನಿಕ ಪದ್ಧತಿ. ಅದೊಂದು ಮಾನಸಿಕ, ದೈಹಿಕ ಆರೋಗ್ಯ ಹೆಚ್ಚಿಸುವ ಶ್ರೇಷ್ಠ ಅಭ್ಯಾಸ. ವ್ಯಕ್ತಿತ್ವ ಪರಿಪೂರ್ಣಗೊಳಿಸುವ ಮಾಧ್ಯಮ. ಯೋಗಪಟುಗಳು ಶರೀರದ ಮೇಲೆ ಹೊಂದುವ ನಿಯಂತ್ರಣ ಅದ್ಭುತ’ ಎಂದು ವಿವರಿಸಿದರು.

‘ಪ್ರಸ್ತುತ ಜನರಲ್ಲಿ ಖಿನ್ನತೆ ಹೆಚ್ಚಿದ್ದು, ಅದರಿಂದ ಹೊರ ಬರಲು ಯೋಗ ತರಬೇತಿ ಬೇಕಿದೆ. ಈ ವರ್ಷ ಸರ್ಕಾರವು ಯೋಗೋತ್ಸವ ಹೆಸರಲ್ಲಿ ಕಳೆದ ಹತ್ತು ದಿನದಲ್ಲಿ ಆರು ಲಕ್ಷ ಜನರಿಗೆ ಯೋಗ ತರಬೇತಿ ನೀಡಿದೆ’ ಎಂದು ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ರಮಣೀಕರ್ ಯೋಗ ತಂಡದ ವಿದ್ಯಾರ್ಥಿಗಳು ಪ್ರದರ್ಶನ ನೀಡಿದರು —ಪ್ರಜಾವಾಣಿ ಚಿತ್ರ

‘ಚನ್ನಪಟ್ಟಣಕ್ಕೆ ಅಭ್ಯರ್ಥಿ ಆಯ್ಕೆ: ಹೈಕಮಾಂಡ್ ಕ್ರಮ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಚನ್ನಪಟ್ಟಣ ಉಪ ಚುನಾವಣೆಗೆ ಪಕ್ಷದ ಅಭ್ಯರ್ಥಿ ವಿಚಾರದಲ್ಲಿ ಪಕ್ಷ ತೀರ್ಮಾನ ಕೈಗೊಳ್ಳುತ್ತದೆ. ನಾನೇ ಅಭ್ಯರ್ಥಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿಲ್ಲ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ಉಪ ಚುನಾವಣೆ ನಡೆಯಲಿರುವ ಮೂರು ಕ್ಷೇತ್ರಗಳಿಗೆ ಪಕ್ಷವು ಉಸ್ತುವಾರಿಗಳನ್ನು ನೇಮಿಸಿದೆ. ಚನ್ನಪಟ್ಟಣ ಕ್ಷೇತ್ರದಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯ ಸಮಿತಿಯು ಸಭೆ ನಡೆಸಿ ಟಿಕೆಟ್ ಆಕಾಂಕ್ಷಿಗಳ ವಿವರಗಳನ್ನು ಕೆಪಿಸಿಸಿಗೆ ಸಲ್ಲಿಸಲಿದೆ. ನಂತರವಷ್ಟೇ ಅಭ್ಯರ್ಥಿಗಳ ಆಯ್ಕೆ ಆಗಲಿದೆ’ ಎಂದರು.

ಎಲ್ ಆ್ಯಂಡ್ ಟಿ ಕಂಪನಿ ವಿರುದ್ಧ ಕೋರ್ಟ್‌ಗೆ ಮೊರೆ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ರಾಜ್ಯದಲ್ಲಿ ರಸ್ತೆ, ಕುಡಿಯುವ ನೀರು, ನೀರಾವರಿ ಯೋಜನೆಗಳ ಗುತ್ತಿಗೆ ಪಡೆದ ಎಲ್ ಆ್ಯಂಡ್ ಟಿ ಕಂಪನಿಯವರು ಸಮರ್ಪಕವಾಗಿ ಕಾಮಗಾರಿಗಳನ್ನು ನಿರ್ವಹಿಸದೆ ರಾಜ್ಯದ ಮರ್ಯಾದೆ ತೆಗೆಯುತ್ತಿದ್ದಾರೆ. ಹೀಗಾಗಿ ನ್ಯಾಯಾಲಯದ ಕಟಕಟೆಗೆ ತಂದು ನಿಲ್ಲಿಸಿ ಕಂಪನಿಯ ಕಾರ್ಯವೈಖರಿ ಯನ್ನು ಪ್ರಶ್ನಿಸಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದರು.

ನಗರದಲ್ಲಿ ಶನಿವಾರ ನಡೆದ ಮುಂಗಾರು ಬಿತ್ತನೆ ಸಿದ್ಧತೆ ಮತ್ತು ಪ್ರವಾಹ ನಿಯಂತ್ರಣ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಎಲ್ ಆ್ಯಂಡ್ ಟಿ ಹೆಸರಿಗೆ ಮಾತ್ರವೇ ದೊಡ್ಡ ಕಂಪನಿ. ರಾಜ್ಯ ಸರ್ಕಾರದಿಂದ ವಹಿಸಿಕೊಂಡ ಯೋಜನೆಗಳ ಕಾಮಗಾರಿಗಳನ್ನು ಕಾಲ ಮಿತಿಯಲ್ಲಿ ಪೂರ್ಣಗೊಳಿಸುತ್ತಿಲ್ಲ. ಹಣಕೊಟ್ಟು, ಗುತ್ತಿಗೆದಾರರು ಇದ್ದರೂ ಜನರಿಂದ ಬೈಯಿಸಿಕೊಳ್ಳುವುದು ತಪ್ಪುತ್ತಿಲ್ಲ’ ಎಂದರು.

ಪ್ರಿಯಾಂಕ್

‘ಇವರೆಲ್ಲ ಬರಿ ಮಾತಿಗೆ ಬಗ್ಗುವುದಿಲ್ಲ. ಕೆಳ ಹಂತದ ಎಂಜಿನಿಯರ್‌ಗಳನ್ನು ಬೈದರೆ ಪ್ರಯೋಜನವಿಲ್ಲ. ಎಲ್ಲ ಯೋಜನೆಗಳನ್ನು ಕಸಿದುಕೊಂಡು ರಾಜ್ಯದಲ್ಲಿ ಒಂದು ಕೆಲಸವನ್ನೂ ಸರಿಯಾಗಿ ಮಾಡಲು ಬಿಡುವುದಿಲ್ಲ. ಕೆಲವು ಅಧಿಕಾರಿಗಳು ಸರ್ಕಾರದ ಅನ್ನ ತಿಂದು ಗುತ್ತಿಗೆದಾರರ ಪರ ವಕಾಲತ್ತು ವಹಿಸುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಕಂಪನಿ ವಿರುದ್ಧ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳುವ ಬಗ್ಗೆಯೂ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ಇದಕ್ಕೂ ಮುನ್ನ ಸುದ್ದಿಗಾರರಿಗೆ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದರು.

‘ರಾಜ್ಯದಲ್ಲಿ ಸುಮಾರು 20 ಸಾವಿರ ಶುದ್ಧ ಕುಡಿಯುವ ನೀರಿನ (ಆರ್‌ಒ) ಘಟಕಗಳಿವೆ. ಶಾಸಕರ, ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ, ದಾನಿಗಳು ಕೊಟ್ಟ ಅನುದಾನದಲ್ಲಿ ನಿರ್ಮಾಣ ಮಾಡಲಾಗಿದೆ. ಸರಿಯಾಗಿ ನಿರ್ವಹಣೆ ಮಾಡದೆ ಬಳಕೆಗೆ ಯೋಗ್ಯವಾಗಿಲ್ಲ. ಹೀಗಾಗಿ, ಆರ್‌ಒ ಘಟಕಗಳ ನಿರ್ವಹಣೆಗಾಗಿ ನೀಲನಕ್ಷೆ ತಯಾರಿಸಲಾಗುವುದು’ ಎಂದು ಸಭೆಯಲ್ಲಿ ಸಚಿವರು ಪ್ರಸ್ತಾಪಿಸಿದರು.

ಅತ್ಯಾಚಾರವೆಸಗಿ ಬಾಲಕಿ ಕೊಲೆಗೆ ಯತ್ನ

ಲಿಂಗಸುಗೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ 17 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಮಾಡಿ ಕೊಲೆಗೆ ಯತ್ನಿಸಿರುವ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದ ಹೊರವಲಯದಲ್ಲಿ ಶುಕ್ರವಾರ ಬಹಿರ್ದೆಸೆಗೆ ಹೋಗಿದ್ದ ಬಾಲಕಿ ಮೇಲೆ ಬೇರೆ ಗ್ರಾಮದ ಬಸವರಾಜ ದ್ಯಾವಪ್ಪ (25) ಅತ್ಯಾಚಾರ ಎಸಗಿದ್ದಾನೆ. ಬಳಿಕ ಬಾಲಕಿ ಮೇಲೆ ಕಲ್ಲಿನಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸುತ್ತಿರುವಾಗ ಆಕೆಯ ಚೀರಾಟ ಕೇಳಿ ಸ್ಥಳೀಯರು ಸ್ಥಳಕ್ಕೆ ಬಂದಿದ್ದಾರೆ. ಬಾಲಕಿಯನ್ನು ರಕ್ಷಿಸಿ ಆರೋಪಿಯನ್ನು ಹಿಡಿದು ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ ಎಂದು ತಿಳಿದುಬಂದಿದೆ. ಬಾಲಕಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಪೊಲೀಸ್ ಇನ್‌ಸ್ಪೆಕ್ಟರ್ ಪುಂಡಲಿಕ್ ಪಟತ್ತರ್ ವೈದ್ಯಕೀಯ ಪರೀಕ್ಷೆಯ ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಹುಲಸೂರ (ಬೀದರ್ ಜಿಲ್ಲೆ): ಭಾಲ್ಕಿ ತಾಲ್ಲೂಕಿನಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಭೀಮಾ ನರಸಿಂಗ ಸೂರ್ಯವಂಶಿ (60) ಎಂಬಾತನನ್ನು ಪೊಲೀಸರು ಬಂಧಿಸಿದ್ದು, ಮೆಹಕರ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ.

ಆರೋಪಿ ಬಾಲಕಿಯ ಮನೆಯವರಿಗೆ ಪರಿಚಿತನಾಗಿದ್ದ. ಆಗಾಗ ಆಕೆಯ ಮನೆಗೆ ಬರುತ್ತಿದ್ದ ಆತ, ಆಕೆಯನ್ನು ಅತ್ಯಾಚಾರ ಮಾಡಿದ್ದಾನೆ. ಬಾಲಕಿ ಗರ್ಭಿಣಿಯಾದ ನಂತರ ಈ ವಿಷಯ ಮನೆಯವರಿಗೆ ಗೊತ್ತಾಗಿದೆ. ಬಾಲಕಿ ತಾಯಿ ಪೊಲೀಸರಿಗೆ ದೂರು ನೀಡಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪಿಎಸ್‌ಐ ಮಾಣಿಕಪ್ಪ ಹಲಮಡಗಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಆಂಧ್ರದಲ್ಲೂ ಕನ್ನಡ ಮಕ್ಕಳ ಶಿಕ್ಷಣಕ್ಕೆ ಕುತ್ತು’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮಹಾರಾಷ್ಟ್ರದ ಕನ್ನಡ ಶಾಲೆಗಳಲ್ಲಿ ಮರಾಠಿ ಶಿಕ್ಷಕರನ್ನು ನೇಮಿಸಿ, ಅನ್ಯಾಯ ಮಾಡಲಾಗಿದೆ. ಆಂಧ್ರ ಪ್ರದೇಶದಲ್ಲೂ ಕನ್ನಡ ಭಾಷೆ ಮತ್ತು ಕಲಿಕೆಗೆ ಕೊಡಲಿ ಪೆಟ್ಟು ನೀಡುವಂತಹ ಶಿಕ್ಷಣ ನೀತಿ ಅನುಸರಿಸಲು ಆರಂಭಿಸಲಾಗಿದೆ. ಈ ಎರಡೂ ರಾಜ್ಯಗಳಲ್ಲಿನ ಕನ್ನಡ ಮಕ್ಕಳ ಶಿಕ್ಷಣದ ಬಗ್ಗೆ ಸರ್ಕಾರ ಗಮನ ಕೊಡಬೇಕು’ ಎಂದು ಆಗ್ರಹಿಸಿ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಅಶೋಕ ಚಂದರಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಸಾರವಾಗಿ ಆಂಧ್ರ ಪ್ರದೇಶದ 1,000 ಮಾಧ್ಯಮಿಕ ಶಾಲೆಗಳಲ್ಲಿ ಸಿಬಿಎಸ್‌ಸಿ ಪಠ್ಯಕ್ರಮ ಅನುಷ್ಠಾನಗೊಳಿಸಲು ಅಲ್ಲಿಯ ಸರ್ಕಾರ ನಿರ್ಧರಿಸಿದೆ. ಈ ಪಠ್ಯಕ್ರಮದ ಅನ್ವಯ ಮೊಲನೆಯ ವಿಷಯವನ್ನಾಗಿ ಇಂಗ್ಲಿಷ್ ಮತ್ತು ಸಾಹಿತ್ಯ, ಎರಡನೇ ವಿಷಯವಾಗಿ ತೆಲುಗು, ಮೂರನೇ ವಿಷಯವನ್ನಾಗಿ ಗಣಿತ, ನಾಲ್ಕನೇ ವಿಷಯವನ್ನಾಗಿ ವಿಜ್ಞಾನ, ಐದನೇ ವಿಷಯವನ್ನಾಗಿ ಸಮಾಜವಿಜ್ಞಾನ, ಆರನೇ ವಿಷಯವನ್ನಾಗಿ ಮಾಹಿತಿ ತಂತ್ರಜ್ಞಾನ ಅಥವಾ ಕೃತಕ ಬುದ್ಧಿಮತ್ತೆ ವಿಷಯ ಆಯ್ಕೆ ಮಾಡಿಕೊಳ್ಳಬಹುದು. ಈ ಪಠ್ಯಕ್ರಮದ ಪ್ರಕಾರ ಕನ್ನಡ ಮಕ್ಕಳು ಕನ್ನಡ ಆಯ್ಕೆ ಮಾಡಿಕೊಳ್ಳುವ ಅವಕಾಶವೇ ಇಲ್ಲ’ ಎಂದು ಅವರು ತಿಳಿಸಿದ್ದಾರೆ.

‘ಕರ್ನೂಲ್ ಜಿಲ್ಲೆಯ ಹೊಳಗುಂದ ಜಿಲ್ಲಾ ಪರಿಷತ್ ಪ್ರೌಢಶಾಲೆ, ದೊಡ್ಡ ಹರಿವಾಣದ ಜಿಲ್ಲಾ ಪರಿಷತ್ ಪೌಢಶಾಲೆ, ಕೌತಾಳಂ ಜಿಲ್ಲಾ ಪರಿಷತ್ ಪ್ರೌಢಶಾಲೆ ಹಾಗೂ ಬದನಹಾಳು ಜಿಲ್ಲಾ ಪರಿಷತ್ ಪ್ರೌಢಶಾಲೆಗಳಲ್ಲಿ ಕನ್ನಡಿಗರ ಮಕ್ಕಳು ಅನಿವಾರ್ಯವಾಗಿ ಇಂಗ್ಲಿಷ್ ಅಥವಾ ತೆಲುಗು ಮಾಧ್ಯಮದಲ್ಲಿ ಕಲಿಯಬೇಕಾಗಿದೆ. ಈವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳಿಗೆ, ಆಂಧ್ರ ಸರ್ಕಾರದ ಆದೇಶ ಕೊಡಲಿ ಪೆಟ್ಟು ಹಾಕಿದೆ. ಭಾಷಾ ಅಲ್ಪಸಂಖ್ಯಾತರಾದ ಕನ್ನಡಿಗರು ಸರ್ಕಾರದ ಆದೇಶದ ವಿರುದ್ಧ ಆಂದೋಲನ ನಡೆಸಿದರೂ ಪ್ರಯೋಜನವಾಗಿಲ್ಲ’ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

‘ಕರ್ನಾಟದಲ್ಲಿರುವ ತೆಲುಗು ಭಾಷಾ ಅಲ್ಪಸಂಖ್ಯಾತರಿಗೆ ಇಲ್ಲಿನ ಸರ್ಕಾರ ಸಾಕಷ್ಟು ಶೈಕ್ಷಣಿಕ ಸೌಲಭ್ಯ ಒದಗಿಸಿದೆ. ಆದರೆ, ಆಂಧ್ರ ಸರ್ಕಾರದ ಕ್ರಮ ಖಂಡನೀಯ’ ಎಂದು ತಿಳಿಸಿದ್ದಾರೆ.

ಪತ್ರಕ್ಕೆ ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಮುಖಂಡರಾದ ಶಿವಪ್ಪ ಶಮರಂತ, ಎಂ.ಜಿ. ಮಕಾನದಾರ, ರಮೇಶ ಸೊಂಟಕ್ಕಿ, ಶಂಕರ ಬಾಗೇವಾಡಿ, ಮಲ್ಲಪ್ಪ ಅಕ್ಷರದ, ಸಲೀಮ ಖತೀಬ, ಸಾಗರ ಬೋರಗಲ್ಲ, ರಾಜು ಕುಸೋಜಿ, ಸುಮಾ ಪಾಟೀಲ, ಜಿನೇಶ ಅಪ್ಪನ್ನವರ, ರಜತ ಅಂಕಲೆ ಸಹಿ ಮಾಡಿದ್ದಾರೆ.

ಕೆಸರಲ್ಲಿ ಸಿಲುಕಿ, ವಿದ್ಯುತ್ ಕಂಬ ಸ್ಪರ್ಶಿಸಿದ್ದರಿಂದ ಸಂಭವಿಸಿದ ಅವಘಡಗಳು

ಪ್ರತ್ಯೇಕ ಘಟನೆ: ಎರಡು ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶನಿವಾರ ನಡೆದ ಪ್ರತ್ಯೇಕ ಘಟನೆಗಳಲ್ಲಿ ಎರಡು ಕಾಡಾನೆಗಳು ಆಕಸ್ಮಿಕವಾಗಿ ಮೃತಪಟ್ಟಿವೆ.

ವಿರಾಜಪೇಟೆ ತಾಲ್ಲೂಕಿನ ಅಮ್ಮತ್ತಿ ಸಮೀಪದ ಕಣ್ಣಂಗಾಲ ಗ್ರಾಮದ ಹಚ್ಚಿನಾಡು ಎಂಬಲ್ಲಿ ಕೆರೆಗೆ ಬಿದ್ದ 18 ವರ್ಷದ ಗಂಡಾನೆ ಕೆಸರಲ್ಲಿ ಸಿಲುಕಿ ಮೃತಪಟ್ಟಿದೆ. ಅಧಿಕಾರಿಗಳು ಜೆಸಿಬಿ ಮೂಲಕ ಕಳೇಬರವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ.

ಗೋಣಿಕೊಪ್ಪಲುವಿನ ಅರ್ವತ್ತೊಕ್ಲು ಗ್ರಾಮದ ಸಮೀಪದ ಕಾಫಿ ತೋಟದಲ್ಲಿ 13 ವರ್ಷದ ಗಂಡಾನೆ ಕಬ್ಬಿಣದ ವಿದ್ಯುತ್ ಕಂಬ ಸ್ಪರ್ಶಿಸಿ, ವಿದ್ಯುತ್ ಆಘಾತಕ್ಕೆ ಒಳಗಾಗಿ ಮೃತಪಟ್ಟಿದೆ. ಕೆಲ ದಿನಗಳ ಹಿಂದೆಯಷ್ಟೇ ಸುಂಟಿಕೊಪ್ಪ ವ್ಯಾಪ್ತಿಯಲ್ಲೂ ಇದೇ ರೀತಿ ಕಬ್ಬಿಣದ ವಿದ್ಯುತ್ ಕಂಬ ಸ್ಪರ್ಶಿಸಿ ಕಾಡಾನೆಯೊಂದು ಮೃತಪಟ್ಟಿತ್ತು.

ಗೋಣಿಕೊಪ್ಪಲು ಸಮೀಪ ಕಾಫಿತೋಟದಲ್ಲಿ ವಿದ್ಯುತ್ ಕಂಬ ಸ್ಪರ್ಶಿಸಿ ಮೃತಪಟ್ಟ ಕಾಡಾನೆ

ಹುಲಿ, ಚಿರತೆ ಸಾವು

ಹನೂರು (ಚಾಮರಾಜನಗರ ಜಿಲ್ಲೆ): ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಕೊಳ್ಳೇಗಾಲ ವನ್ಯಜೀವಿ ವಲಯದ ಗುಂಡಾಲ್ ಶಾಖೆಯ ಲೊಕ್ಕನಹಳ್ಳಿ ಪಶ್ಚಿಮ ಗಸ್ತಿನ ಬರಳ್ಳ ಅರಣ್ಯ ಪ್ರದೇಶದಲ್ಲಿ 5ರಿಂದ 6 ವರ್ಷ ಪ್ರಾಯದ ಹೆಣ್ಣು ಹುಲಿಯ ಕಳೇಬರ ಪತ್ತೆಯಾಗಿದೆ.

ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ತಿರುಗುವಾಗ ಹುಲಿಯ ಕಳೇಬರ ಪತ್ತೆಯಾಗಿದ್ದು, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಎಸ್‌ಒಪಿಯ ಅನುಸಾರ ಮರಣೋತ್ತರ ಪರೀಕ್ಷೆ ನಡೆಸಿ ವಿಲೇವಾರಿ ಮಾಡಲಾಗಿದೆ.

‘ಚರ್ಮ ಸಹಿತ ಎಲ್ಲ ಅಂಗಾಂಗಳೂ ಇದ್ದು, ಹುಲಿಯ ಸಾವು ಸ್ವಾಭಾವಿಕ ಎಂದು ವನ್ಯಜೀವಿ ತಜ್ಞ ವೈದ್ಯರು ದೃಢಪಡಿಸಿದ್ದಾರೆ’ ಎಂದು ಅಧಿಕಾರಿಗಳು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಚಿರತೆ ಸಾವು: ಗುಂಡ್ಲುಪೇಟೆ ತಾಲ್ಲೂಕಿನ ನೇನೆಕಟ್ಟೆ ಗ್ರಾಮದ ಹೊರವಲಯದ ಜಮೀನಿನಲ್ಲಿ ಚಿರತೆ ಕಳೇಬರ ಪತ್ತೆಯಾಗಿದೆ. ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮಹಾನಗರ ಪಾಲಿಕೆ, ವಿಜಯಪುರ

ಸಂ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ–/2024–25

ದಿನಾಂಕ:20.06.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಮಹಾನಗರ ಪಾಲಿಕೆಯ ಅನುದಾನದಲ್ಲಿ 04 ಕಾಮಗಾರಿಗಳು, ಸನ್ 2023–24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಶೇ. 24.10, ಶೇ. 7.25 ಹಾಗೂ ಶೇ. 5ರ ಯೋಜನೆಯಲ್ಲಿ 01 ಕಾಮಗಾರಿ ಮತ್ತು ಸ್ವಚ್ಛ ಭಾರತ ಮಿಷನ್ (ನಗರ) 2.0 ರ ಅನುದಾನದಲ್ಲಿ 01 ಕಾಮಗಾರಿ ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.

ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 05–07–2024

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/53/ಕೆಎಸ್‌ಎಂಸಿಎ/2024–25

PROPERTY CORNER ಕ್ಲಾಸಿಫೈಡ್ಸ್

ನಿಮ್ಮ ಕನಸಿನ ಮನೆ ಸದೃಢ ಹಾಗೂ ದೀರ್ಘ ಬಾಳಿಕೆ ಬರಲು, ಕಟ್ಟಡಕ್ಕೆ ಬಳಸಿ

ಮೌಂಟೋ ಬ್ರಿಕ್ಸ್

ನಮ್ಮಲ್ಲಿ 9X4X3 ಮತ್ತು 9X6X6 wire cut red bricks ದೊರೆಯುತ್ತವೆ. ನಮ್ಮ ಇಟ್ಟಿಗೆ ಬಳಸಿದರೆ ಪ್ಲಾಸ್ಟರ್‌ನ ಅವಶ್ಯಕತೆ ಇಲ್ಲದಿರುವುದರಿಂದ ಸಾಕಷ್ಟು ಮರಳು ಮತ್ತು ಸಿಮೆಂಟ್ ಉಳಿಯುತ್ತದೆ. ನಮ್ಮ ಇಟ್ಟಿಗೆ Wire Cut ಹಾಗೂ Kiln Tech. ನಲ್ಲಿ 900 ಡಿಗ್ರಿವರೆಗೆ ಸುಡುವುದರಿಂದ ಪ್ರತಿಯೊಂದು ಇಟ್ಟಿಗೆ ಸಂಪೂರ್ಣವಾಗಿ ಸುಟ್ಟಿರುತ್ತದೆ. ಅಕಸ್ಮಾತಾಗಿ ನಿರೀಕ್ಷೆಗೂ ಮೀರಿ ಮಳೆ ಬಂದು ನಿಮ್ಮ ಮನೆ 10 ರಿಂದ 15 ದಿನಗಳ ವರೆಗೆ ನೀರಲ್ಲಿದ್ದರು ನಮ್ಮ ಇಟ್ಟಿಗೆ ಕರಗುವುದಿಲ್ಲ. ಇದರಿಂದ ನಿಮ್ಮ ಮನೆಗೆ ಯಾವುದೇ ಹಾನಿಯಾಗುವುದಿಲ್ಲ. ನೀವು ಬೇಕಾದರೆ ಇಟ್ಟಿಗೆ ತರಿಸಿ Bucket ನಲ್ಲಿ ಇಟ್ಟು ಪರೀಕ್ಷೆ ಮಾಡಿ ನೋಡಿ. ಈಗಾಗಲೇ ನಮ್ಮ ಇಟ್ಟಿಗೆಗಳನ್ನು ಬಳಸಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ 500ಕ್ಕೂ ಹೆಚ್ಚು ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ನೀವು ಯಾವ ಸ್ಥಳದಲ್ಲಿ ಮನೆ ಕಟ್ಟಲು ಬಯಸುವಿರೋ ಆ ಸ್ಥಳಗಳಲ್ಲಿ ಈಗಾಗಲೇ ನಮ್ಮ ಇಟ್ಟಿಗೆ ಬಳಸಿ ಮನೆ ಕಟ್ಟಿಸಿರುವವರ Phone Number ಕೊಡಲಾಗುವುದು. ನಿಮಗೆ ಇಟ್ಟಿಗೆ Sample ಬೇಕಾದಲ್ಲಿ Parcel ಮುಖಾಂತರ ಕಳುಹಿಸುತ್ತೇವೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

MOUNTO Bricks Pvt Ltd

ಮೌಂಟೋ ಬ್ರಿಕ್ಸ್ ಪ್ರೈವೇಟ್ ಲಿಮಿಟೆಡ್

ವಿಳಾಸ: ನಂ. 11/1, ಜಿಂದಾಲ್ ಹತ್ತಿರ, ಬನ್ನಿಹಟ್ಟಿ ತಾರಾನಗರ, ಸಂಡೂರು (ತಾ), ಬಳ್ಳಾರಿ (ಜಿ), ಕರ್ನಾಟಕ – 583 119.

ಸಂಪರ್ಕಿಸಿ: 7022000804, 7892943478

WANTED BDA SITES

BSK 5th & 6th STAGE ANJANAPURA VISHVESHWARAIAH LAYOUT KEMPE GOWDA ARKAVATHY JP NAGAR 8th & 9th PHASE HSR JAYNAGARA BTM 4TH STAGE

GENUINE SELLERS ONLY. NRI BUYER'S DIRECT REGISTRATION WITHIN 15 DAYS

SURYA PROPERTIES:-

9880659555

9916759939

ಯಲಹಂಕ

Behind BMS College

DC CONVERSION LAYOUT

E KHATA

Land Mark: SHELL PETROL BUNK OPP BMS College ಹಿಂಭಾಗ

30 x 30 ನಿವೇಶನಗಳು @ 44 ಲಕ್ಷಗಳು

30 x 40 ನಿವೇಶನಗಳು @ 58 ಲಕ್ಷಗಳು

Attached to BEL LAYOUT

ವಿದ್ಯಾರಣ್ಯಪುರ

GKVK Back Gate, Attur Layout

BBMP KHATA

Land Mark:
- DMart ನಿಂದ ನಿಮಿಷ
- 1.5km from Vidyaranyapura Busstop
- 2Mins Walking Distance to GKVK Busstop

20 x 30 ನಿವೇಶನಗಳು @ 28 ಲಕ್ಷಗಳು

30 x 40 ನಿವೇಶನಗಳು @ 56 ಲಕ್ಷಗಳು

E KHATA

ಯಲಹಂಕ ಬಾಗಲೂರು

SEZ Road, Vidya Nagar Cross, Venkateswara Engg. College

DC CONVERSION LAYOUT

UPCOMING BBMP LIMITS

30 x 35 ನಿವೇಶನಗಳು @ 39.90 ಲಕ್ಷಗಳು

30 x 40 ನಿವೇಶನಗಳು @ 45 ಲಕ್ಷಗಳು

ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank

9880 149 159 | 9731 555 000

RERA No.PRM/KA/RERA/1251/310/PR/190506/002548

RAJESHWARI AASHIRVAD your dreams! our go

RERA & BMRDA APPROVED Site

ಉತ್ತಮವಾದ ಸೈಟಿನ ಮೇಲೆ ಇನ್ವೆಸ್ಟ್ ಮಾಡಿ

Site for Sale

ನಮ್ಮ ಕುಟುಂಬ ರಾಜೇಶ್ವರಿ ಆಶೀರ್ವಾದ್ ಸಂಸ್ಥೆಯ ಹೊಸ ಲೇಔಟ್ ಗೆ ಭೇಟಿ ನೀಡಿ ಅತ್ಯುತ್ತಮ ನಿವೇಶನವನ್ನು ಖರೀದಿ ಮಾಡಿದ್ದೇವೆ...

ಸುಸಜ್ಜಿತವಾಗಿ, ಅಭಿವೃದ್ಧಿಯಾಗಿ, ಅನುಮೋದನೆ ಅದ

ವಸತಿ ನಿವೇಶನಗಳು

ಕೆಂಗೇರಿಯಿಂದ

ಕೆಲವೇ ನಿಮಿಷದ ಪ್ರಯಾಣ

BMRDA APPROVED

ಮೈಸೂರು ರಸ್ತೆ

ದೊಡ್ಡ ಆಲದಮರದ ಬಳಿ

ಲೇಔಟ್ ವಿಶೇಷತೆಗಳು :

- ಸೈಟುಗಳು ನೋಂದಣಿಗೆ ಸಿದ್ಧವಾಗಿದೆ
- ನಿವೇಶನಗಳು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
- ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
- ಲೇಔಟ್ ಅಭಿವೃದ್ಧಿಯಾಗಿ ಆಕರ್ಷಕವಾಗಿದೆ
- ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ
- ಅತ್ಯುತ್ತಮ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ

ಸೈಟು ವೀಕ್ಷಣೆ ಮಾಡಲು ಉಚಿತ ಪಿಕಪ್, ಡ್ರಾಪ್ ಮತ್ತು ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ: 63 99 88 99 11

Site Sizes 30x40, 30x50

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

FURNISHED OFFICE SPACE FOR SALE

Ideal For Co-Working Offices

100% Vaasthu Compliant

JP Nagar 1st Phase,

Just 0.5 Kms to Metro

- 5 Cabins & 30-40 Work stations
- Conference room, Projector etc..
- Exclusive MD's Cabin
- ACs, UPS, Wifi etc
- 20x3 ft Advt board facing the Road
- Locker facility for staff
- Attractive working website

1700 Sqft of Area, Rent Rs. 60,000/- PM

Investment for Business Take Over

Rs. 15.00 Lakhs Negotiable

Call: 99804 19950

REAL ESTATE SELLING

Sites

Arkavathi Layout

BDA-SITE FOR Sale Arkavathi Layout 15th Block 40x60, Jakkur Sriramapura 5500sqft For Sale Call:7676900174 6363496142

BDA ARKAVATHY layout. 40×60. Near Manyatha Tech Park Owner Contact No. 9663005859/ 9731594565

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage,BDA Sites Buying/Selling, 50x80,40x60,30x40, 20x30,Genuine Buyers/Sellers: 9513332646, 9902764626

2400 SFT BDA Site for Sale in Banashankari 6th Stage 4th`B`Block Bangalore Rs.1.92 Crore.`Contact: 9341226696. (Brokers Excuse)

30X40 CORNER Varahasandra Layout Hemmigepura Ward 198 Conversion B Katha Opposite Kadalekai Parishe 3800/- 7899452398

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

BDA 30X40 N/F site sale Banashankari 5th stage near Vasantha Vallabha Temple,No brokers. Contact:7899747576

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

BANASHANKARI 6TH Stage, 4th 'T' Block, 30x40 site for sale. Contact:- 9844006666.

Basaweshwaranagar

SITE SALE 1600 SQFT A KHATHA RS 1 CRORE 80 LAKHS ONLY CLEAR TITLES: 9035883017

Jakkur

SITE FOR Sale 40x60 Site No. 13, Jakkur, Venkateshpura, Rate 6500/- per sqft. (Negotiable) Mob. No:- 9448277755.

Jayanagar

JAYANAGAR 4TH Block, 40x60, South Facing Near BSNL Office 36000/- Genuine Buyers Contact:9845600007

J P Nagar

JP-NAGAR 3RD Near Mini Forest, Sites/ House Corner 30x55, 55x62, 30x45, 40x60, 40x45, 50x80, 60x90, 45x72 Corner Commercial Complex: 9739995042

Kengeri

SITE FOR Sale Kengeri Kodipalya 30×40 westfacing BBMP 'B' Katha, Bank loan available, Price 65,00,000; Contact: 9035699974

SITE FOR Sale 41x30 N/F, 'E' Katha near SMV Layout, Kengeri. Rs. 5200/- sft fixed. Call. 9620598510.

Kanakapura Road

DC CONVERSION, 30x48 e-khata, all amenities. North Face, Buildings Surrounded, Nelguli Village, 500 mtrs. Kanakapura Road. 9343751639

BDA APPROVED BCC Layout, 30x40, 40x60, 9000/- Banashankari 6th Stage, 50x80, 80" Road.19000/- 9845704509

Kempegowda Layout

NADAPRABHU KEMPEGOWDA Layout 9th block 'D' Sector 82x65 South West Corner Commercial site sale. ₹.6500/-.sqft. Contact:9686469799

KEMPEGOWDA LAYOUT BDA Site, 50×80 Double Road 1st block K Sector Near Peripheral Ring Road Commercial: 7899570235

BDA KEMPEGOWDA layout. 50×80. 300 Feet Road Commercial Site, Owner. Contact. No. 9663005859/ 7899570235

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

Ombr Layout

OMBR LAYOUT Excellent location East Facing 30x40 BDA SITE Price Rs 19,000/ Sft Call: 98451-84220

Nagarabhavi

"NAGARBHAVI ANNAPOORNESHWARI- NAGAR 30x43-North, 40x60-East facing, Vishveshwaraiah 30x40, good location, Genuine buyer`feel free Contact: 7259675150"

"NAGARABHAVI NEAR BDA Complex 30x45 North BDA Site, 40x60 West 40`feet Road, Full White. 9448432633"

BDA SITE Sale Nagarabavi 12th Block, Near Nammura Thindi, West Facing 40ft Road 30x42 Owner: 9844009086/ 9343368313

DC CONVERTED SITE SALE 50X80 EAST FACING BBMP A KATHA NEAR ULLAL RTO: 6366232222/ 6366242222

Nelamangala

JC REAL ESTATE NNT Layout, BGS College, Pillhalli, Baktanapalya, Arasinakunte Commercial Sites, Residential Sites Buy /Sale. Chandu 8546975878 Jagruth 9980457779

NELAMANGALA NEAR BGS Medical College Arasinakunte, KALPATARU Layout, NDA 'A' Katha East 3270 Sft: 9353348309/ 9448735404

"30X50 SOUTH- FACING site for sale @ Nelamangala Rashi developers close to D-Mart Tumkur highway. 9845268611"

Sadashiva Nagar

SADASHIVANAGAR 'MAGNIFICENT LOCATION' 40*60 WEST FACING SITE FOR SALE. FOR MORE INFORMATION CALL NS 9900001973

Sanjaynagar

RMV BHOOPASANDRA BDA Site 29'x57' East 40' Road besides Central Excise, Off Chawla Road Rs. 3.30 Crore Call 9980555558

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vishweshwariah Layout

"SALE 30X40 East facing BDA Site 40`feet Road 5th Block Vishveshwaraiah Layout. 9845500019/ 7019314962"

"30X40 WEST facing BDA site Sale 40`feet Road Vishveshwaraiah Layout 7th Block. 9845500019/ 7019314962"

AVAILABLE BDA Sites 40X60, 30X40 Vishweshwaraiah Layout 1st Block, 2nd Block 40ft Road Good Location: 9844603127

"VISHVESHWARAIAH LAYOUT 6th Block Opp.KLE Law College 50x80 North 80`feet Road, 100%`Vastu Site. 9448432633"

"30X40 RESIDENTIAL BDA SITES SALE 6TH BLOCK VISHVESHWARAIAH LAYOUT, 30X50 RAILWAY LAYOUT [NEAR RTO]- 9845143579"

OPEN VILLA plot 15mx24m NF for Sale at SMV Layout BDA Block4, Near Sai Vidya Chetan school. Rs 3.25 cr, nego, Contact 9912204000

50X80 WEST FACING Prime Location site Sale VISHVESHWARAIAH Layout 8th Block, Direct Owner Meeting Call.9591013777

Mandya

40X60 MANDYA Muda Site No 2703 Sale, Nagamangala Road 1st Petrol Bunk Rs. 3100/- 9731652042

House

BTM Layout

SALE BDA BTM Stage MICO Layout Independent House 30×50 best for future development investment, 3.70CR; +918660563308.

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore-560079. Clear Titles & 'A' Katha, Rs.5.10 Crores (slightly negotiable). Party going out of station. Immediate Registration. 9845765559/ 9845043282

HOUSE FOR sale 40x60 west, Ground and first floor, Good location, Near Pavithra paradise. 9845527196.

Basavanagudi

SALE 20X40 BDA Site with 3000Sft Building with Carparking. Rental income. Near Gandhi Bazar. 9845743555

Girinagar

40X60 OLD House for Sale, East Facing at Girinagar, full Cheque Payment. Contact: 9880270482

New BEL Road

SALE EXQUISITE 3br/3baths house 40x60 AGS Layout New BEL Road Contact 9901678035 No agents

Jakkur

SAMPIGEHALLI ARKAVATHI Layout 3rd Block 40X60 N/F, G+3 With Lift Prime Location. 4Cr, 9986356467

J P Nagar

SALE BRAND New House JP.NAGAR 9th Phase 40x60 Royal Park Residency 1st Phase 5BHK Modern Interiors Rs.4.5 Crores Negotiable. 'SHIVU' 9880004149

Nagarabhavi

30X40 WEST Facing site, North facing Door 4BHK DUPLEX HOUSE Sale in VidhanasoudhLayout Call.9591013777

R T Nagar

OLD HOUSE SALE G+1, 6 Houses, Receiving Rent 36,000. Size:22x62 West Facing A.K.Ashram Road (Behind Kabir Ashram) RT.Nagar, Bangalore 12000`Per.Sft Negotiable. Call: 8970159998 7730218999.

R.T.NAGAR HMT Layout 40X60 5-BHK Duplex House, Lift, N/W Corner Teak, Italian Marble 4- Carparking 9845378269/ 7829203369

Agricultural Land

South

PLOT FOR sale 5 acre near kanva dam road, channapatna contact 9448978383

Commercial Building

Banashankari

NF 9000 sft commercial Building (5 Flr) on site measuring 2650sq ft @Bank Colony- BSK 1st Stg for Sale. Brokers Excuse. 9880599012/9632190465

Commerical

Jayanagar

JAYANAGAR 4TH T block 42x120 commercial East, West and South Road, old building 36,000/- Suraj Realtors: 9845232711

Farm House/ Land/ Resorts

Out-Station

SALE: MARALAVADI Fully Developed FARM HOUSE 10 Acres on 60 Feet Road. Coconut, Sandalwood, Areca Trees, etc. 1.3 Crores/ Acre Negotiable. SHIVU- 9880004149.

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9902604714

Villas/Bunglows

Mysore

FOR SALE A beautiful residential bungalow in excess of 40 squares in Vijayanagar 1st Stage, Mysore. Price 12.5 Cr No brokers Contact 97409 07835

RENTAL PROPERTIES

Accommodation Available

Commercial

RICHMOND ROAD- Office space Fully- furnished with AC Car Park Available for Rent Contact Rao: 9845652204

AVAILABLE FOR RENT AT MYSORE: Fully furnished air conditioned 5200 sft in prime location Mysore. Suitable for Edu-Tech /software/other corporate offices. contact: 9019521981/ 9739720411

FOR RENT

PRIME COMMERCIAL

INDUSTRIAL BUILDING 35380 sqft. Builtup Area, Basement, Ground + Four Floors (400mts from Metro Outer Ring Road Highway) in Yeshwanthpur. Contact : 9916622610

COMMERCIAL SPACE for RENT 1200 sqft (Ground /First) on 9th Cross Malleshwaram, Prime Location. Contact 9844067297 (10am to 7pm)

5 ACRES Commercial Land Available for Rent in Bidadi on Bangalore Mysore Road Interested: 9972181837

Flats

MALLESWARAM (EIGHTH Main) 2 BHK Flat, 1000sft, First floor. North facing Rent 30000/-. 9845243757

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

INDUSTRIAL SHED/GODOWN for rent in Harohalli Industrial Area 3rd phase, 11,000 Sft, Contact : 9108982314

RENT: INDUSTRIAL shed @ KIADB Harohalli Phase-2, Built 2000 in 22000 sqft, 8HP, Phone: 9972299585

House

WHEELER'S ROAD Extn:- Luxurious house 2 BHK Ground Floor attached Dining. East Facing 30,000/-. 8217332018

RENT 3-BHK Ground Floor North Jayanagar 5th Block Near Metro Carpark 55000/- Veg only Call:9886673794 6364580004

BUILDERS ESSENTIAL

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Vijayanagar

WANTED 35X50 or 40X60 Site (North Facing) in Vijay Nagar, MC Layout, Immediate Settlement. 9845048051

BUILDING FOR SALE

Price: 1.25 Crore (Negotiable)

30x40 BMRDA approved Site, North facing Houses, 1BHK-3 Houses, 2BHK-1 House.

Build-up area: ground +2 floor, 3300 Sqft. with parking facility.

Location: Upakar Spring Fields Layout, Neraluru, near Chandapura.

Property is only 200 meters from the NH-844. Hosur Highway to Half km. Dharmapuri New Highway (80% completed),15 minutes to Electronic City, 4 kms to Bommasandra Metro Station.

Call: 95913 51111, 93419 06876

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

MATRIMONIAL

Matrimonial Bureaus

MANGALASUTRA FOUNDATION, GLOBAL BRAHMINS FOUNDATION

54th STATE LEVEL MEGA BRAHMINS MATRIMONY MEET & Sri SRINIVASA KALYANOTSAV On 29-6-24 & 30-6-24

Venue: Kalpavruksha Sri Raghavendra Swamy Matta, Purnapragna Layout, Bangalore

Contact: 94494 25536 82178 76335

Brides Wanted

Tamil

BRIDE WANTED

Good looking Graduate B.E. M.Tech, Software Engineer, High: 5'.6" Age: 37 year, Caste: S.C (ADH), Working for MNC Company Caste No Bar

Contact: 8296811336

Muslim

MUSLIM BOY 1994 Born Masters Engineer is USA (California) resident of R T Nagar is looking for a suitable match (080-69075204)

MUSLIM Boy 1990 Born 5'10' MBBS MD Doctor parents also doctor is looking for a Educated and doctor girl (080-69075204)

MORE Classifieds Ads on Subsequent Pages

Grooms Wanted

Punjabi

PUNJABI/HINDU, 29, 165 cms, B.Design, working as a Senior Experience Consultant (USA based MNC), currently based in Bangalore. Parents seeks professionally educated Groom from well settled Punjabi/Hindu family. WhatsApp 8779533962.

PERSONAL

Change of Name

TABREZ KHAN #10/126/59/2, WARD-14, Viratnagar, Bommanahalli, Bengaluru-68, have changed my name to MOHAMMED TABREZ Vide affidavit dated- 22/06/2024

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

ಕಟ್ಟಿಗೇನಹಳ್ಳಿ ಭೂಕಬಳಿಕೆ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕು ಜಾಲ ಹೋಬಳಿಯ ಕಟ್ಟಿಗೇನಹಳ್ಳಿ ಗ್ರಾಮದ ಸರ್ವೆ ನಂಬರ್ 28ರಲ್ಲಿ 13 ಎಕರೆ 07 ಗುಂಟೆ ಸರ್ಕಾರಿ ಜಮೀನು ಕಬಳಿಸಲು ಯತ್ನಿಸಿದ ಆರೋಪದ ಮೇಲೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಯಲಹಂಕ ಪೊಲೀಸ್ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಿಸಲಾಗಿದೆ.

ಹಿಂದೆ ಈ ಜಮೀನನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದರು. ಒತ್ತುವರಿ ತೆರವು ಮಾಡಿ ಸರ್ಕಾರದ ಸ್ವಾಧೀನಕ್ಕೆ ಪಡೆಯಲಾಗಿತ್ತು. ಅಲ್ಲಿ ಕಾಂಪೌಂಡ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಕಾಮಗಾರಿ ನಡೆಯುತ್ತಿದೆ.

‘ಶುಕ್ರವಾರ ಕೆಆರ್‌ಐಡಿಎಲ್ ಎಂಜಿನಿಯರ್ ಚಂದ್ರಶೇಖರ್ ಅವರ ಮೊಬೈಲ್‌ಗೆ ಕರೆಮಾಡಿದ್ದ ಅಪರಿಚಿತರು ಬೆದರಿಕೆ ಹಾಕಿದ್ದರು. ತಡರಾತ್ರಿ 40ರಿಂದ 45 ಮಂದಿ ಸ್ಥಳಕ್ಕೆ ಬಂದು ನಿರ್ಮಾಣ ಹಂತದ ಕಾಂಪೌಂಡ್ ಧ್ವಂಸಗೊಳಿಸಿದ್ದಾರೆ’ ಎಂದು ಯಲಹಂಕ ತಹಶೀಲ್ದಾರ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

‘ಕೆಲವು ಭ್ರಷ್ಟ ಅಧಿಕಾರಿಗಳು ಸೇರಿಕೊಂಡು ಖಾಸಗಿ ವ್ಯಕ್ತಿಗಳಿಗೆ ಈ ಜಮೀನಿನ ಖಾತೆ ಮಾಡಿಕೊಟ್ಟಿದ್ದರು. ಒತ್ತುವರಿ ತೆರವುಗೊಳಿಸಿ, 18 ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಈಗ ಕಾಂಪೌಂಡ್ ಧ್ವಂಸಗೊಳಿಸಿ, ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾರೆ. ಸರ್ಕಾರ ಜಮೀನು ರಕ್ಷಣೆ ವಿಷಯದಲ್ಲಿ ಯಾವುದೇ ಪ್ರಭಾವಕ್ಕೂ ಮಣಿಯುವುದಿಲ್ಲ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ರಕ್ಷಾ ಫೌಂಡೇಷನ್ ವತಿಯಿಂದ 2 ಲಕ್ಷ ನೋಟ್ ಬುಕ್‌ಗಳ ವಿತರಣೆ

‘ಜ್ಞಾನವಿದ್ದವರೇ ಶ್ರೀಮಂತರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ. ಜ್ಞಾನ ಯಾರಲ್ಲಿ ಇರುತ್ತದೆಯೋ ಅವರೇ ಶ್ರೀಮಂತರು. ಶಿಕ್ಷಣದಿಂದ ಮಾತ್ರ ಶಕ್ತಿ ಬರುತ್ತದೆ’ ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಕರ್ನಾಟಕದ ವಿವಿಧ ಶಾಲೆಗಳ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ರಕ್ಷಾ ಫೌಂಡೇಷನ್ ವತಿಯಿಂದ 2 ಲಕ್ಷ ನೋಟ್ ಬುಕ್‌ಗಳನ್ನು ವಿತರಿಸಿದ ಸಮಾರಂಭದಲ್ಲಿ ಶನಿವಾರ ಅವರು ಮಾತನಾಡಿದರು.

ಸರ್ಕಾರಿ ಶಾಲೆಯ ಮಕ್ಕಳು ಹೆಚ್ಚು ಪ್ರತಿಭಾವಂತರಾಗಿದ್ದು, ಅವರಿಗೆ ಸರಿಯಾದ ಪ್ರೋತ್ಸಾಹ ದೊರಕಿದರೆ ಸಾಧಕರಾಗಿ ಬೆಳೆಯುತ್ತಾರೆ. ರಕ್ಷಾ ಫೌಂಡೇಷನ್‌ನಂಥ ಸಂಸ್ಥೆಗಳು ಈ ರೀತಿಯ ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತಿವೆ ಎಂದು ಹೇಳಿದರು.

‘ಈ ಜಗದಲ್ಲಿ ಅನಾಥರು ಯಾರೂ ಇಲ್ಲ. ದೇವರು ಎಲ್ಲರನ್ನೂ ಕಾಪಾಡುತ್ತಾನೆ’ ಎಂದು ಹೇಳಿದ ನಟ ಕಿಚ್ಚ ಸುದೀಪ್, ‘ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಪೊಲೀಸ್ ಸೇವೆಗೆ ಸೇರುತ್ತಿರುವುದು ಶ್ಲಾಘನಾರ್ಹ’ ಎಂದರು.

ಜಯನಗರದಲ್ಲಿ ರಕ್ಷಾ ಫೌಂಡೇಷನ್ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ನೋಟ್ ಬುಕ್ ವಿತರಣಾ ಕಾರ್ಯಕ್ರಮದಲ್ಲಿ ನಟ ಸುದೀಪ್, ಶಾಸಕ ಸತೀಶ್ ರೆಡ್ಡಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಶಾಸಕ ಸಿ.ಕೆ. ರಾಮಮೂರ್ತಿ, ಮಾಜಿ ಮೇಯರ್ ಎಸ್‌.ಕೆ.ನಟರಾಜ್ ಭಾಗವಹಿಸಿದ್ದರು

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ90ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ರಕ್ಷಾ ಫೌಂಡೇಷನ್ ವತಿಯಿಂದ ನಗದು ಪುರಸ್ಕಾರ ನೀಡಲಾಯಿತು. ಪ್ರತಿಭಾವಂತರನ್ನು ಸನ್ಮಾನಿಸಲಾಯಿತು. ಅನಾಥಾಶ್ರಮದ ಇಬ್ಬರು ವಿದ್ಯಾರ್ಥಿಗಳನ್ನು ದತ್ತು ಸ್ವೀಕಾರ ಮಾಡಲಾಯಿತು. ಸಾರ್ವಜನಿಕರಿಗಾಗಿ ಆಂಬುಲೆನ್ಸ್ ಲೋಕಾರ್ಪಣೆ ಮಾಡಲಾಯಿತು. ರಕ್ಷಾ ಫೌಂಡೇಷನ್ 12 ವರ್ಷಗಳಿಂದ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸುತ್ತಿದೆ ಎಂದು ಸಂಘಟಕರು ವಿವರಿಸಿದರು.

ಸಂಸದ ತೇಜಸ್ವಿಸೂರ್ಯ, ಶಾಸಕರಾದ ಸಿ.ಕೆ.ರಾಮಮೂರ್ತಿ, ಉದಯ್ ಗರುಡಾಚಾರ್, ಸತೀಶ್ ರೆಡ್ಡಿ, ಮಾಜಿ ಮೇಯರ್ ಎಸ್‌.ಕೆ. ನಟರಾಜ್, ಬಿಬಿಎಂಪಿ ಮಾಜಿ ಸದಸ್ಯರಾದ ನಾಗರತ್ನ ರಾಮಮೂರ್ತಿ, ಸೋಮಶೇಖರ್, ಲಕ್ಷ್ಮೀನಟರಾಜ್, ಮಾಲತಿ ಸೋಮಶೇಖರ್, ದೀಪಿಕಾ ಎಲ್. ಮಂಜುನಾಥ ರೆಡ್ಡಿ ಭಾಗವಹಿಸಿದ್ದರು.

ಪಿಯು ಪರೀಕ್ಷೆ ಪ್ರಯಾಣ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ–3ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ನೀಡಲಾಗಿದೆ.

ಜೂನ್ 24ರಿಂದ ಜುಲೈ 5ರವರೆಗೆ ಪರೀಕ್ಷೆ ನಡೆಯುವ ದಿನಗಳಂದು ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರಗಳನ್ನು ತೋರಿಸಿ ಪ್ರಯಾಣಿಸಬಹುದು.

ಕೆಎಸ್‌ಆರ್‌ಟಿಸಿಯ ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ, ಬಿಎಂಟಿಸಿಯ ಸಾಮಾನ್ಯ ಸೇವಾ ಬಸ್‌ಗಳಲ್ಲಿ ಈ ಸೌಲಭ್ಯ ಕಲ್ಪಿಸಲಾಗಿದೆ.

ಯೋಗ ಪ್ರದರ್ಶನ

ಕೋಡಿಪಾಳ್ಯದ ವಿಶ್ವವೆಂಕಟೇಶ್ವರ ಅಂತರರಾಷ್ಟ್ರೀಯ ಶಾಲೆಯಲ್ಲಿ ವಿಶ್ವಯೋಗ ಮತ್ತು ವಿಶ್ವ ಸಂಗೀತ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಮಕ್ಕಳು ಯೋಗ ಪ್ರದರ್ಶನ ನೀಡಿದರು

ಗರ್ಡರ್ ಬದಲಾವಣೆಗಾಗಿ ರೈಲು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಟ್ಟೂರು–ಸಂಪಿಗೆ ರಸ್ತೆ ರೈಲು ನಿಲ್ದಾಣಗಳ ನಡುವೆ ಇರುವ ಲೆವೆಲ್ ಕ್ರಾಸಿಂಗ್‌ನಲ್ಲಿ ಹಳಿಯಲ್ಲಿ ಗರ್ಡರ್ ಅಳವಡಿಸುವ ಮತ್ತು ತೆಗೆಯುವ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜೂನ್ 27ರಿಂದ ಜುಲೈ 4ರವರೆಗೆ 8 ರೈಲುಗಳನ್ನು ರದ್ದುಪಡಿಸಲಾಗಿದೆ. ಕೆಲವನ್ನು ಭಾಗಶಃ ರದ್ದು ಮಾಡಲಾಗಿದ್ದು, ಇನ್ನು ಕೆಲವು ರೈಲುಗಳ ಮಾರ್ಗ ಬದಲಾಯಿಸಲಾಗಿದೆ.

ತುಮಕೂರು–ಚಾಮರಾಜನಗರ, ಚಾಮರಾಜನಗರ –ಮೈಸೂರು, ಚಾಮರಾಜನಗರ– ಯಶವಂತಪುರ, ಯಶವಂತಪುರ–ಚಾಮರಾಜನಗರ, ತುಮಕೂರು–ಕೆಎಸ್‌ಆರ್ ಬೆಂಗಳೂರು, ಕೆಎಸ್‌ಆರ್ ಬೆಂಗಳೂರು–ತುಮಕೂರು, ಯಶವಂತಪುರ –ಶಿವಮೊಗ್ಗ, ಶಿವಮೊಗ್ಗ– ಯಶವಂತಪುರ ರೈಲುಗಳನ್ನು ಈ ಅವಧಿಯಲ್ಲಿ ರದ್ದು ಮಾಡಲಾಗಿದೆ.

ಕೆಎಸ್‌ಆರ್ ಬೆಂಗಳೂರು– ತುಮಕೂರು–ಕೆಎಸ್‌ಆರ್ ಬೆಂಗಳೂರು ರೈಲುಗಳನ್ನು ಹಿರೇಹಳ್ಳಿ–ತುಮಕೂರು ನಡುವೆ ಭಾಗಶಃ ರದ್ದುಗೊಳಿಸಲಾಗಿದೆ. ತಾಳಗುಪ್ಪ–ಕೆಎಸ್‌ಆರ್ ಬೆಂಗಳೂರು ರೈಲು, ಕೆಎಸ್‌ಆರ್ ಬೆಂಗಳೂರು–ಧಾರವಾಡ–ಕೆಎಸ್‌ಆರ್ ಬೆಂಗಳೂರು ರೈಲುಗಳು ಅರಸೀಕರೆ–ಬೆಂಗಳೂರು ನಡುವೆ ಭಾಗಶಃ ರದ್ದು ಮಾಡಲಾಗಿದೆ.

ವಾಸ್ಕೊ ಡ ಗಾಮ–ಯಶವಂತಪುರ ರೈಲು, ಮೈಸೂರು– ವಾರಾಣಸಿ, ಯಶವಂತಪುರ–ಜೈಪುರ, ಮೈಸೂರು–ಬೆಳಗಾವಿ ರೈಲುಗಳು ಅರಸಿಕೆರೆ, ಹಾಸನ, ನೆಲಮಂಗಲ ಮೂಲಕ ಯಶವಂತಪುರಕ್ಕೆ ಬರಲಿವೆ. ಮೈಸೂರು –ಉದಯಪುರ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ನೆಲಮಂಗಲ, ಹಾಸನ, ಅರಸಿಕೆರೆ, ದಾವಣಗೆರೆಗೆ ತೆರಳಲಿದೆ.

ಯಶವಂತಪುರ –ಎಚ್. ನಿಜಾಮುದ್ದೀನ್, ಕೆಎಸ್‌ಆರ್ ಬೆಂಗಳೂರು–ತಾಳಗುಪ್ಪ, ಬೆಳಗಾವಿ–ಮೈಸೂರು, ಚಾಮರಾಜನಗರ–ತುಮಕೂರು, ಯಶವಂತಪುರ–ವಾಸ್ಕೊ ಡ ಗಾಮ, ತುಮಕೂರು–ಶಿವಮೊಗ್ಗ ರೈಲುಗಳ ಸಮಯವನ್ನು ಮರುನಿಗದಿ ಮಾಡಲಾಗಿದೆ. ಈ ರೈಲುಗಳು ತಡವಾಗಿ ಚಲಿಸಲಿವೆ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಅಧಿಕಾರಿ ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

ಕಾಣೆಯಾಗಿದ್ದ ಬಿಎಂಟಿಸಿ ಚಾಲಕ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ತಾಲ್ಲೂಕಿನ ಬಂಡಾರ ಹಳ್ಳಿ ಗ್ರಾಮದ ಮನೆಯಿಂದ ಶುಕ್ರವಾರ ಸಂಜೆ ಹೊರ ಹೋಗಿದ್ದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ (ಬಿಎಂಟಿಸಿ) ಚಾಲಕ ಹಾಗೂ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದ ಬಿ.ಎಂ.ಆನಂದ್ (45) ಎಂಬುವರು ಶನಿವಾರ ಶವವಾಗಿ ಪತ್ತೆಯಾಗಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 75ರ ದೇವರಾಯ ಸಮುದ್ರ ಟೋಲ್ ಸಮೀಪ ಆನಂದ್ ಅವರ ಶವ ಪತ್ತೆಯಾಗಿದೆ. ಬೆಂಗಳೂರಿನ ಇಂದಿರಾನಗರದ ಬಿಎಂಟಿಸಿ ಡಿಪೊದಲ್ಲಿ ಕೆಲಸ ಮಾಡುತ್ತಿದ್ದ ಆನಂದ್, ರಜೆ ಇದ್ದ ಕಾರಣ ಮುಳಬಾಗಿಲು ತಾಲ್ಲೂಕಿನ ಬಂಡಾರಹಳ್ಳಿ ಗ್ರಾಮಕ್ಕೆ ಬಂದಿದ್ದರು.

ಶುಕ್ರವಾರ ಸಂಜೆ ಮನೆಯಿಂದ ಹೊರ ಹೋಗಿದ್ದ ಅವರು ಎಷ್ಟೇ ಹೊತ್ತಾದರೂ ಮನೆಗೆ ಮರಳದ ಕಾರಣ ಅವರ ಪತ್ನಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ತಮ್ಮ ಪತಿ ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿರಬಹುದು ಎಂದು ಮೃತರ ಪತ್ನಿ ಶಂಕಿಸಿದ್ದಾರೆ. ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೌರಕಾರ್ಮಿಕರಿಗೆ ಸುರಕ್ಷಾ ಸಾಮಗ್ರಿ ವಿತರಣೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸಮೀಪದ ಬಾಗಲಗುಂಟೆಯ ಬಿಬಿಎಂಪಿ ಕಚೇರಿ ಅವರಣದಲ್ಲಿ ಯುನೈಟೆಡ್ ವೇ ಬೆಂಗಳೂರು ಸ್ವಯಂ ಸೇವಾ ಸಂಸ್ಥೆ ವತಿಯಿಂದ ಸಿಎಸ್‌ಆರ್ ಅನುದಾನದಡಿಯಲ್ಲಿ ಪೌರಕಾರ್ಮಿಕರಿಗೆ ಪೊರಕೆ, ಕೈಗವಸು, ರಿಫ್ಲೆಕ್ಟರ್ ಜಾಕೆಟ್, ರೈನ್ ಕೋಟ್, ಕ್ಯಾಪ್, ಪ್ಲಾಸ್ಟಿಕ್ ಬಾಂಡ್ಲಿಗಳನ್ನು ವಿತರಿಸಲಾಯಿತು.

ಸಾಮಗ್ರಿ ವಿತರಿಸಿದ ಬಿಬಿಎಂಪಿ ದಾಸರಹಳ್ಳಿ ವಲಯ ಹೆಚ್ಚುವರಿ ಆಯುಕ್ತ ಬಾಲಶೇಖರ್ ಮಾತನಾಡಿ, ‘ಈ ಸಂಸ್ಥೆಯವರು ಇಂಗು ಗುಂಡಿ ಮಾಡುವುದು, ಸರ್ಕಾರಿ ಶಾಲೆಗಳಿಗೆ ಬಣ್ಣ ಹೊಡೆಯುವುದು, ಬಡ ಜನರಿಗೆ ಸಹಾಯ ನೀಡುವುದು ಮುಂತಾದ ಮಾದರಿ ಕೆಲಸಗಳನ್ನು ಮಾಡುತ್ತಿದ್ದಾರೆ’ ಎಂದು ಶ್ಲಾಘಿಸಿದರು.

ಯುನೈಟೆಡ್ ವೇ ಬೆಂಗಳೂರು ವತಿಯಿಂದ ಪೌರಕಾರ್ಮಿಕರಿಗೆ ಸಾಮಗ್ರಿ ವಿತರಿಸಲಾಯಿತು

ಬಿಬಿಎಂಪಿ ಮುಖ್ಯ ಎಂಜಿನಿಯರ್ ರವಿ, ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕ ಹನುಮಂತ ನಾಯ್ಕ, ತೋಟಗಾರಿಕೆಯ ಶಿವಲಿಂಗೇಗೌಡ, ಘನತ್ಯಾಜ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಯೋಗೇಶ್, ಲೀಡ್ ಎನ್‌ವೈರ್ನ್‌ಮೆಂಟ್ ಪ್ರಾಜೆಕ್ಟ್‌ನ ಕೆ.ರಾಧಾಕೃಷ್ಣ, ಪ್ರದೀಪ್, ಯುನೈಟೆಡ್ ವೇ ಬೆಂಗಳೂರು ಉಪಾಧ್ಯಕ್ಷ ವೆಂಕಟ ಸುಧಾಕರ್ ಭಾಗವಹಿಸಿದ್ದರು.

ಸತ್ಯ ಭಾರತಿ ವಿದ್ಯಾಲಯ ಆಶ್ರಮ ಶಾಲೆಗೆ ಅರ್ಜಿ ಆಹ್ವಾನ

ಬೆಂಗಳೂರು: ಶ್ರೀ ಸತ್ಯ ಸಾಯಿ ಮಹಿಳಾ ಚಾರಿಟಬಲ್ ಟ್ರಸ್ಟ್‌ನ ‘ಸತ್ಯ ಭಾರತಿ ವಿದ್ಯಾಲಯ’ ಆಶ್ರಮ ಶಾಲೆಗೆ ಅರ್ಜಿ ಆಹ್ವಾನಿಸಲಾಗಿದೆ.

ಬಡ, ಅಶಕ್ತ ಮಕ್ಕಳು ಹಾಗೂ ನಿರಾಶ್ರಿತ ತಾಯಿ ಮತ್ತು ಮಕ್ಕಳು ಅರ್ಜಿ ಸಲ್ಲಿಸಬಹುದು. ಆಯ್ಕೆಯಾದ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು 1ರಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸದ ವ್ಯವಸ್ಥೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಶ್ರೀಸತ್ಯ ಸಾಯಿ ಮಹಿಳಾ ಚಾರಿಟಬಲ್ ಟ್ರಸ್ಟ್, ನಂ. 13, ಚಳ್ಳಘಟ್ಟ, ಏಕದಂತ ಬಡಾವಣೆ, ಕೆಂಗೇರಿ ಹೋಬಳಿ, ಬೆಂಗಳೂರು–560060. ಮಾಹಿತಿಗೆ: 74110 49247, 98445 40380.

ರಾಜ್ಯ ಪೊಲೀಸ್ ಇಲಾಖೆಯ ಕಂಪ್ಯೂಟರ್ ವಿಭಾಗದಿಂದ ಆಯೋಜನೆ

ಡೇಟಾಥಾನ್: ವಿಜೇತರಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯ ಕಂಪ್ಯೂಟರ್ ವಿಭಾಗ ಶನಿವಾರ ಆಯೋಜಿಸಿದ್ದ ‘ಡೇಟಾಥಾನ್’ ಸ್ಪರ್ಧೆಯಲ್ಲಿ ಹಲವು ರಾಜ್ಯಗಳ ತಂಡಗಳು ಪಾಲ್ಗೊಂಡು, ವಿವಿಧ ವಿಭಾಗಗಳಲ್ಲಿ ಜಯ ಗಳಿಸಿದವು.

ಪೊಲೀಸ್ ಇಲಾಖೆಯಲ್ಲಿ ಈಗಾಗಲೇ ಸಂಗ್ರಹಿಸಲಾಗಿರುವ ಅಪರಾಧ ದತ್ತಾಂಶಗಳನ್ನು ಬಳಸಿಕೊಂಡು ಮುಂದೆ ಆಗಬಹುದಾದ ಅಪರಾಧಗಳನ್ನು ಊಹಿಸುವುದು ಹಾಗೂ ಅವುಗಳು ಯಾವ ಪ್ರದೇಶದಲ್ಲಿ? ಯಾವ ಸಮಯದಲ್ಲಿ ಸಂಭವಿಸುವ ಸಾಧ್ಯತೆ ಎಂದು ಅಂದಾಜಿಸುವ ಸ್ಪರ್ಧೆಯಲ್ಲಿ ಚೆನ್ನೈನ ಸೈರನ್ ಸ್ಕ್ವಾಡ್ ಈಶ್ವರಿ ಎಂಜಿನಿಯರಿಂಗ್ ಕಾಲೇಜು ಜಯ ಗಳಿಸಿತು.

ಡೇಟಾಥಾನ್ ಸ್ಪರ್ಧೆಯಲ್ಲಿ ವಿಜೇತ ತಂಡಕ್ಕೆ ಬಹುಮಾನ ವಿತರಣೆ ಮಾಡಲಾಯಿತು

ಸಂಚಾರ ಅರಿವು ಹಾಗೂ ದಟ್ಟಣೆ ನಿರ್ವಹಣೆ ವಿಭಾಗದಲ್ಲಿ ಚೆನ್ನೈನ ಕೋಡ್ ಒನ್ ಸೇಂಟ್ ಜೋಸೆಫ್ ಕಾಲೇಜು, ಪೊಲೀಸ್ ಕಾರ್ಯಕ್ಷಮತೆ ಮತ್ತು ಸಂಪನ್ಮೂಲ ನಿರ್ವಹಣೆ ವಿಭಾಗದಲ್ಲಿ ಮುಂಬೈನ ಲುಮಿನಾ ಪಿಲ್ಲೈ ಕಾಲೇಜು ಆಫ್ ಎಂಜಿನಿಯರಿಂಗ್, ಕಾನೂನು ಜಾರಿಯಲ್ಲಿ ಡೇಟಾ ಗೋಪ್ಯತೆ ವಿಭಾಗದಲ್ಲಿ ಗಾಜಿಯಾಬಾದ್‌ನ ಶೆರಲಾಕ್ ಅಜಯ್ ಕುಮಾರ್ ಗರ್ಗ್ ಎಂಜಿನಿಯರಿಂಗ್ ಕಾಲೇಜು ಮತ್ತು ಜಿ.ಎಲ್. ಬಜಾಜ್ ಇನ್‌ಸ್ಟಿಟ್ಯೂಟ್, ಅಪಘಾತ ದತ್ತಾಂಶ ವಿಶ್ಲೇಷಣೆ ವಿಭಾಗದಲ್ಲಿ ನಾಗಾಪುರದ ಯಶ್ವಂತರಾವ್ ಚೈವಾನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಪ್ರಶಸ್ತಿ ಪಡೆದುಕೊಂಡಿವೆ. ವಿಜೇತ ತಂಡಕ್ಕೆ ₹1 ಲಕ್ಷ ನಗದು ಬಹುಮಾನ ನೀಡಲಾಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

JYOTI NIVAS College Autonomous
HOSUR ROAD, BANGALORE – 560095
Ph: 25530137
E-Mail Id: info@jyotinivas.org
Requires: Librarian
Qualification: (MLIS) Master's Degree in Library and information Science with NET/SLET qualified. Ph.D Preferred.
Apply to the principal on or before 25.06.2024

RAJAJINAGAR PARENTS' EDUCATION SOCIETY
CA-2, 5TH BLOCK, RAJAJINAGAR, BANGALORE – 560010
PHONE : 8431479346 / 080-23353594
WALK-IN-INTERVIEW on 29.06.2024 at the above address for the following posts.
Timings : 11.00 a.m. to 1.00 p.m.

RPES JNANA SARASWATI PUBLIC SCHOOL (CBSE)
Resumes may be sent to rpes.cbse@gmail.com

Subject	Qualification
Social Science	BA, B.Ed / MA, B.Ed
Computer	B.Sc (Computer) / BCA
E V S	B.Sc, B.Ed
Nursery Teacher	Graduation with NTT/MTT

RPES JNANA VIKAS HIGH SCHOOL (State Board)

Subject	Qualification
Social Science	B.A. B.Ed with 5 yrs experience
English	B.A. B.Ed with 5 yrs experience

RPES GOLDEN RAY INTERNATIONAL PUBLIC SCHOOL (CBSE) GORINABELE, NELAMANGALA

Subject	Qualification
Nursery Teacher	Graduation with NTT/MTT

President, RPES, Rajajinagar, Bangalore

EDUCATION CORNER

RAMAN POLYTECHNIC
12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
ASC - RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
RAMAN DEGREE COLLEGE
BBA CONTACT: 80500 66771 / 63609 03500 BCA
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-24501

St. Benedict's Academy Nursing College
Asirvanam, Anchepalya, Kengeri, Mysore Road, Bangalore-74
Requires Trained NURSING TUTORS
M.Sc in Psychiatric and Paediatric
Call: 9886812398
Mail your resume to: jeromeosb@gmail.com

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
STAFF REQUIREMENTS
PRINCIPAL - 10 years CBSE experience
PGT - Mathematics, Physics, English, Computer Science
TGT & PRT - All Subjects
Physical Education (Female), Primary Coordinator, Event & Marketing Manager, Computer DTP Operator & Office Executive.
Eligible candidates mail your application with updated Bio-data to : email: infoharwardints@gmail.com
Contact: 9880112833 / 9741337257

Engg/ Production Technical

ELECTRONICS- CAD Freshers/ Dropouts Resume to: jayaram.kondur@gmail.com

Accounts & Finance

ACCCOUNTS & Billing Exe. 3-4 Yrs Exp. Books Publishing co. Tally & Excel, e mail CV to hr@infobells.com

BUSINESS

Business Offers

Business For Sale

BUSINESS FOR SALE 40 year old established profitable auto parts business for sale. Contact 9448039076

General

UNEMPLOYED? WANT To Sell Provisions in your apartment complex. We provide all stocks to your doorstep at wholesale prices. SLV Super Bazzars (Dr. Swamy):- 9342247637.

BUSINESS

Business Offers

Distributors

DISTIUBUTORS WANTED ALL OVER KARNATAKA for FURNITURE. Contact by WhatsApp : 9900856033

MORE Classifieds Ads on Subsequent Pages

WANTED ENGLISH MEDIUM TRAINED GRADUATES to teach English/ EVS for Primary and Maths/ Science for High School, Computer Science Graduates. Lady Graduates interested in teaching can also apply. Age limit not above 40 years, Salary with PF & ESI facilities. Contact in Person (10.00 a.m -3.00 p.m on all working days). Secretary, Deccan Educational Society, No. 95, 3rd cross, Srirampuram, Bengaluru- 560021 (Near Sampige Theatre, Malleswaram). Mob: 6362166176 b/w 10:00 am to 5:00 pm

SVN ENGLISH High School, Thanisandra Main Road, Nagawara, Bangalore-77, (opposite Elements Mall), Requires Qualified TEACHERS Maths & Social for High School Call: 9611807494/ 080-25446756 Mail: svnschool@gmail.com

Domestic Helpers / Housekeeping

FEMALE HOUSEKEEPING Supervisor cum Staff required for Service Apartments on Infantry Road, undergraduate, aged 35 to 40 Y, handle maids, computer skills, fluent in spoken English, Kannada & Hindi, residing close to Infantry Road. Contact : +91 9845010210, Email: kanchanhomesblr@gmail.com

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

V.V.R. SCHOOL: Wanted Science Teacher for Grade 8th, 9th & 10th with minimum 2 years experience. Send Resume to Mail Id:- vvrschool2003@gmail.com/ 9901651138.

WANTED QUALIFIED lady English Teacher for Higher Primary and High School. Contact: St.Mary's High School, Basaveshwaranagar. Ph: 080-23222640

"BENGALURU NGO (Brahmi.org) run- Anjana Vidya Kendra High-School" requires Graduate Teachers in Science Math English & Hindi, Primary/DEd Good salary with Lunch & accomodation. WhatsApp: 9945013193/ 6361243095, info@brahmi.org

Wanted

WANTED COUNTER sales Persons Full time/ Part time (7am to 4 pm) with Guarantor. Contact: Gokul Dairy Farm, 20/3, 4th main Gandhinagar Bangalore-9. Timings 9 am to 10 am.

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers to handle English & Social-Studies for High School. Only English medium candidates need to apply.

WANTED LADY Teacher for Chemistry (MSc.Bed) Walkin On 24/6/2024, Between 11am--4pm. the Secretary, Srikrishna International School, Bangalore-85, Pho:2669 0799

DH Classifieds ಪ್ರಜಾವಾಣಿ
More value, more impact
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact: 9901641752 9845114560

PUBLIC NOTICE

This is to inform the general public that, my client Sri. G. K. Chetan has agreed to purchase the Schedule mentioned property from its owner **Smt. K. Tejavathi**, Wife of Late Sriramulu Naidu, Resident of No.47/48, 18th Main, 2nd Cross, Narayanagowda Layout, Tavarekere, Bangalore – 560 029. Therefore, the general public are hereby called upon to submit/ lodge their objections if any with regard to the proposed Sale Transaction within 15 days from the date of this publication with the undersigned with relevant documents. If no objections were received within the said date, my client shall proceed with the completion of the sale transaction. Any claims / objections / complaints received thereafter shall not be binding on my client.

SCHEDULE PROPERTY

All that piece and parcel of the Property New Municipal No. 1/A, Old No. 353/25, Gramatana Khatha No. 988, situated at Jaraganahalli, Uttarahalli Hobli, Bangalore South Taluk, Bangalore within the jurisdiction of BBMP, Ward No.56 – Ganesh Mandir, present BBMP Ward No.180 – Banashankari Temple Ward, Eswarinagar, 1st Main Road, BSK Second Stage, Bangalore having PID No.56/154/1A, measuring East to West on the Northern Side 60 Feet, on the Southern Side 40 Feet, Noth to South 60 Feet, totally measuring 3000 Square Feet together with multistoried residential Hostel and Commercial Building constructed thereon comprising of Ground, First, Second and Terrace Floor approximately measuring 6200 Square Feet and bounded on **East by:** Site No.3, **West by:** Road, **North by:** Vacant Land and **South by:** Property belonging to Siddadri Naidu

R. Prasanna, Advocate,
No.81/1, M. T. B. Building, 1st Floor, Begur Road, Near Baldwin School, Hongasandra, Bangalore -560 068
Phone : 8792235359, Email : prasannar_143@rediffmail.com

EDUCATION CORNER ಕ್ಲಾಸಿಫೈಡ್ಸ್

ಬಿಲ್ವ ಗಾಣದ ಮನೆ
ವಿಜಯನಗರ, ನಾಗರಬಾವಿ ಸರ್ಕಲ್, ಬೆಂಗಳೂರು
ಮರದ ಗಾಣದ ಕಡಲೇಕಾಯಿ ಎಣ್ಣೆ - 1 litre 300 Rs.
ಕಬ್ಬಿಣದ ಗಾಣದ ಕಡಲೇಕಾಯಿ ಎಣ್ಣೆ - 1 litre 240 Rs.
ಕೊಬ್ಬರಿ ಎಣ್ಣೆ - 1 litre 250 Rs.
ಸೂರ್ಯಕಾಂತಿ ಎಣ್ಣೆ - 1 litre 240 Rs.
ಹರಳೆಣ್ಣೆ - 1 litre 240 Rs.
FREE HOME DELIVERY
ನಮ್ಮಲ್ಲಿ ಎಲ್ಲಾ ರೀತಿಯ ಎಣ್ಣೆಗಳು ಹಾಗೂ ಎಲ್ಲಾ ರೀತಿಯ ಹಿಂಡಿಗಳು ದೊರೆಯುತ್ತವೆ.
ಬಿ.ರವಿ - 9731564715, ರೋಹಿತ್ - 8971981863

Specialist in
ROOF WATER PROOFING
HOME PAINTING
FLOOR CLEANING
Web : purushothamgroups.com
8792708269
9945938632

ZOR
ಮಲಮ್ ಮತ್ತು ಲೋಷನ್
ಶೀಘ್ರ ಪರಿಹಾರ
ಕಜ್ಜಿ
ತುರಿಕೆ
ಗಜಕರ್ಣ
ಮೊಡವೆಗಳು
ಶೀತ ಬಿರುಕುಗಳು
Representatives & Managers Required
For more Information Call / Whatsapp 8217312776

ಕುದುರೆ ರೇಸ್‌ಗೆ ಹೈಕೋರ್ಟ್ ತಡೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ಬಿಟಿಸಿ) ರೇಸ್ ಆಯೋಜಿಸಲು ಅನುಮತಿ ನೀಡಿದ್ದ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶಕ್ಕೆ ವಿಭಾಗೀಯ ನ್ಯಾಯಪೀಠ ಶನಿವಾರ ತಡೆ ವಿಧಿಸಿದೆ.

ಈ ಸಂಬಂಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ಪೀಠ ಪ್ರಕಟಿಸಿತು.

‘ಮೇಲ್ಮನವಿ ಇತ್ಯರ್ಥವಾಗುವ ತನಕ ಬಿಟಿಸಿ ಯಾವುದೇ ಆನ್ ಕೋರ್ಸ್ (ಬೆಂಗಳೂರಿನಲ್ಲಿ ರೇಸ್) ಅಥವಾ ಆಫ್ ಕೋರ್ಸ್ (ಬೆಂಗಳೂರು ಹೊರತುಪಡಿಸಿದ ನಗರಗಳಲ್ಲಿ) ಪಂದ್ಯಾವಳಿ ನಡೆಸುವಂತಿಲ್ಲ’ ಎಂದು ನಿರ್ಬಂಧ ವಿಧಿಸಿ ಆದೇಶಿಸಿತು.

ಶನಿವಾರ (ಜೂನ್ 21) ಮಧ್ಯಾಹ್ನ 1.30 ರಿಂದ ಆರಂಭವಾಗಬೇಕಿದ್ದ ರೇಸ್ ಇದರಿಂದಾಗಿ ಅಮಾನತುಗೊಂಡಂತಾಗಿದೆ.

ದ್ವಿತೀಯ ಪಿಯುಸಿ 3ನೇ ಪರೀಕ್ಷೆ 24ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ– 3ನೇ ವಾರ್ಷಿಕ ಪರೀಕ್ಷೆಯು ಇದೇ 24ರಿಂದ ಜುಲೈ 5ರವರೆಗೆ ನಡೆಯಲಿದೆ. 248 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 75,995 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ವಾರ್ಷಿಕ ಮೂರು ಪರೀಕ್ಷಾ ಪದ್ಧತಿ ಅನುಸಾರ ಮೊದಲ ಎರಡು ಪರೀಕ್ಷೆಗಳನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳಿಗೆ ಉತ್ತೀರ್ಣರಾಗಲು ಮತ್ತು ಫಲಿತಾಂಶ ಉತ್ತಮಪಡಿಸಿಕೊಳ್ಳಲು ಮೂರನೇ ಅವಕಾಶ ಇದಾಗಿದೆ.

ಕಲಾ ವಿಭಾಗದಲ್ಲಿ 30,811, ವಿಜ್ಞಾನ 19,783, ವಾಣಿಜ್ಯ ವಿಭಾಗದಲ್ಲಿ 25,401 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಪರೀಕ್ಷೆಗಳು ನಡೆಯಲಿದೆ. ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ತಿಳಿಸಿದೆ.

ಪಿಜಿಸಿಇಟಿ: ಶುಲ್ಕ ಪಾವತಿಗೆ 24 ಕೊನೆ ದಿನ

ಬೆಂಗಳೂರು: 2024-25ನೇ ಶೈಕ್ಷಣಿಕ ಸಾಲಿನ ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿ ಮತ್ತು ಪರೀಕ್ಷಾ ಕೇಂದ್ರಗಳನ್ನು ನಮೂದಿಸಲು, ಮಾಹಿತಿ ತಿದ್ದುಪಡಿಗೆ ಜೂನ್ 24ರ ಸಂಜೆ 6 ಗಂಟೆಯವರೆಗೆ ಅವಕಾಶ ನೀಡಲಾಗಿದೆ.

‘ಈ ಪ್ರಕ್ರಿಯೆಗಳನ್ನು ನಿರ್ವಹಿಸಲು ಪೋರ್ಟಲ್ ತೆರೆಯಲಾಗಿದೆ. ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸದ ಅಭ್ಯರ್ಥಿಗಳ ಪಟ್ಟಿಯನ್ನು ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ’ ಎಂದು ಕೆಇಎ ಪ್ರಕಟಿಸಿದೆ.

ದರ್ಶನ್ ವಿಚಾರಣಾಧೀನ ಕೈದಿ 6106 ● ಗಲಾಟೆ ಸಾಧ್ಯತೆ– ಪ್ರತ್ಯೇಕ ಬ್ಯಾರಕ್‌ಗಳಲ್ಲಿ ಆರೋಪಿಗಳು

ನಟ ದರ್ಶನ್, ಸಹಚರರಿಗೆ ಜೈಲು

● ಆದಿತ್ಯ ಕೆ.ಎ.

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಜುಲೈ 4ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಗಾದ ಆರೋಪಿ, ನಟ ದರ್ಶನ್ ಸೇರಿ ನಾಲ್ವರು ಆರೋಪಿಗಳನ್ನು ಬಂದೋಬಸ್ತ್‌ನಲ್ಲಿ ಕರೆದೊಯ್ದ ಪೊಲೀಸರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಶನಿವಾರ ಒಪ್ಪಿಸಿದರು.

ಆರೋಪಿಗಳು ಕಾರಾಗೃಹ ತಲುಪುತ್ತಿದ್ದಂತೆ ಜೈಲಿನ ಅಧಿಕಾರಿಗಳು, ದಾಖಲಾತಿ ಪ್ರಕ್ರಿಯೆ ಪೂರ್ಣಗೊಳಿಸಿ ನಾಲ್ವರನ್ನು ಪ್ರತ್ಯೇಕ ಬ್ಯಾರಕ್‌ಗೆ ಕಳುಹಿಸಿದರು ಎಂದು ಗೊತ್ತಾಗಿದೆ.

ನಂತರ ಎ–2 ದರ್ಶನ್‌ಗೆ ವಿಚಾರಣಾಧೀನ ಕೈದಿ ಸಂಖ್ಯೆ 6,106, ಎ–9 ಧನರಾಜ್ ಅಲಿಯಾಸ್ ರಾಜುಗೆ 6,107, ಎ–10 ವಿನಯ್‌ಗೆ 6,108 ಹಾಗೂ ಎ–14 ಪ್ರದೋಷ್‌ಗೆ 6,109 ಸಂಖ್ಯೆ ನೀಡಲಾಗಿದೆ.

2011ರಲ್ಲಿ ಪತ್ನಿ ವಿಜಯಲಕ್ಷ್ಮಿ ಅವರ ಮೇಲೆ ಹಲ್ಲೆ ನಡೆಸಿ ಜೈಲು ಸೇರಿದ್ದ ದರ್ಶನ್, ಇದೀಗ ಕೊಲೆ ಆರೋಪದಡಿ ಮತ್ತೆ ಕಾರಾಗೃಹ ಸೇರಿದರು. ಕೊಲೆ ಪ್ರಕರಣದ ಆರೋಪದಡಿ ದರ್ಶನ್ ಅವರನ್ನು ಜೂನ್ 12ರಂದು ಮೈಸೂರಿನಲ್ಲಿ ಬಂಧಿಸಿ ಪೊಲೀಸರು ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಿದ್ದರು.

ನ್ಯಾಯಾಲಯಕ್ಕೆ ಹಾಜರು ಪಡಿಸಲು ಆರೋಪಿಗಳನ್ನು ಕರೆತಂದಾಗ ಅಭಿಮಾನಿಗಳು ಕಿಕ್ಕಿರಿದು ಸೇರಿದ್ದರು. ‘ಡಿ ಬಾಸ್’ ಎಂದೂ ಕೆಲವರು ಕೂಗಿದರು. ಕಾರಾಗೃಹಕ್ಕೆ ಹೋಗುವ ಮುನ್ನ ದರ್ಶನ್ ಸಹ ಪೊಲೀಸ್ ವ್ಯಾನ್ ಒಳಗೇ ಕುಳಿತು ಕೈಬೀಸಿ ಮೌನಕ್ಕೆ ಜಾರಿದರು.

ತುಮಕೂರು ಜೈಲಿಗೆ ಸ್ಥಳಾಂತರಿಸಲು ಕೋರಿಕೆ: ಪ್ರಕರಣದ ಆರೋಪಿಗಳು ಹಾಗೂ ದರ್ಶನ್ ಮೇಲೆ ಅಭಿಮಾನ ಇರುವ ವಿಚಾರಣಾಧೀನ ಕೈದಿಗಳ ನಡುವೆ ಜೈಲಿನಲ್ಲಿ ಗಲಾಟೆ ಹಾಗೂ ಹಲ್ಲೆ ನಡೆಯುವ ಸಾಧ್ಯತೆಯಿದೆ. ಆರೋಪಿಗಳನ್ನು ತುಮಕೂರು ಜಿಲ್ಲಾ ಕಾರಾಗೃಹಕ್ಕೆ ಸ್ಥಳಾಂತರಿಸಲು ತನಿಖಾಧಿಕಾರಿಗಳು ಕೋರಿದ್ದರು. ಆ ಮನವಿಗೆ ನ್ಯಾಯಾಲಯದಿಂದ ಪುರಸ್ಕಾರ ಸಿಗಲಿಲ್ಲ.

‘ಆರೋಪಿಗಳು ಪರಸ್ಪರ ಹೇಳಿಕೆ ನೀಡಿದ್ದಾರೆ. ಇದರ ಮಾಹಿತಿ ತಿಳಿದುಕೊಂಡು ಸಹ ಆರೋಪಿಗಳು ಹಲ್ಲೆ ನಡೆಸುವ ಸಾಧ್ಯತೆಯಿದೆ. ಕೊಲೆ ಪ್ರಕರಣ ಮುಚ್ಚಿ ಹಾಕಲು ಶರಣಾಗಲು ಮನವೊಲಿಸಿ ನಾಲ್ವರಿಗೆ ತಲಾ ₹5 ಲಕ್ಷ ನೀಡಲಾಗಿತ್ತು. ಶರಣಾದ ಆರೋಪಿಗಳು ಇತರರ ಹೆಸರು ಬಹಿರಂಗ ಪಡಿಸಿದ್ದರು. ಇದರಿಂದ ಕೊಲೆ ರಹಸ್ಯ ಬಯಲಾಗಿತ್ತು. ಹೀಗಾಗಿ, ಬೇರೆ ಜೈಲಿಗೆ ಕಳುಹಿಸುವಂತೆ ಕೋರಲಾಗಿತ್ತು’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

‘ಇತರೆ ಕೈದಿಗಳಂತೆಯೇ ಈ ಪ್ರಕರಣದ ಕೈದಿಗಳನ್ನೂ ನೋಡಿಕೊಳ್ಳಲಾಗುವುದು. ಇವರಿಗೆ ವಿಶೇಷ ಸತ್ಕಾರ, ಸೌಲಭ್ಯ ನೀಡುತ್ತಿಲ್ಲ. ಸಹ ಆರೋಪಿಗಳ ನಡುವೆಯೇ ಗಲಾಟೆ ನಡೆಯುವ ಸಾಧ್ಯತೆಯಿದೆ ಎಂಬ ಮಾಹಿತಿಯಿದ್ದು, ಪ್ರತ್ಯೇಕ ಬ್ಯಾರಕ್‌ಗೆ ಹಾಕಲಾಗಿದೆ’ ಎಂದು ಕಾರಾಗೃಹದ ಮೂಲಗಳು ತಿಳಿಸಿವೆ.

ಶನಿವಾರ ಸಂಜೆ ವೇಳೆಗೆ ಕೇಂದ್ರ ಕಾರಾಗೃಹಕ್ಕೆ ದರ್ಶನ್ ಮತ್ತು ತಂಡವನ್ನು ಕರೆತರುವ ಮಾಹಿತಿ ತಿಳಿದಿದ್ದ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು. ಬ್ಯಾರಿಕೇಡ್ ಹಾಕಿ ಹೆಚ್ಚಿನ ಜನರು ಸೇರದಂತೆ ನಿಗಾ ವಹಿಸಿದ್ದರು.

ಪ್ರಕರಣದಲ್ಲಿ ಸಾಕ್ಷಿದಾರರಿಗೆ ದರ್ಶನ್ ಸಹಚರರು ಬೆದರಿಕೆ ಹಾಕಿದ್ದು, ಈ ಸಂಬಂಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ. ‘ಬೆದರಿಕೆ ಹಾಕಿದವರನ್ನು ಪತ್ತೆ ಮಾಡಲಾಗುತ್ತಿದೆ. ಅಗತ್ಯಬಿದ್ದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದ್ದಾರೆ.

ದರ್ಶನ್ ಸೇರಿ ಮೂವರು ಆರೋಪಿಗಳನ್ನು ಪೊಲೀಸ್ ಭದ್ರತೆಯಲ್ಲಿ ಬೆಂಗಳೂರಿನ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಶನಿವಾರ ಹಾಜರು ಪಡಿಸಲಾಯಿತು
–ಪ್ರಜಾವಾಣಿ ಚಿತ್ರ/ ರಂಜು ಪಿ.

ಸಾಕ್ಷಿದಾರರ ಜೀವಕ್ಕೆ ಅಪಾಯ

‘ಕೊಲೆ ಪ್ರಕರಣದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಸಾಕ್ಷಿದಾರರ ಹೇಳಿಕೆ ಪಡೆದುಕೊಳ್ಳಲಾಗಿದೆ. ಸಾಕ್ಷಿದಾರರ ಹೆಸರನ್ನು ನಮೂದಿಸಿದರೆ ಅವರ ಜೀವಕ್ಕೆ ಅಪಾಯ ಸಾಧ್ಯತೆಯಿದೆ. ಸಾಕ್ಷಿದಾರರ ಹೆಸರನ್ನು ರಿಮಾಂಡ್ ಅರ್ಜಿಯಲ್ಲಿ ನಮೂದಿಸಿಲ್ಲ’ ಎಂದು ತನಿಖಾಧಿಕಾರಿ ತಿಳಿಸಿದರು.

‘ಎಲ್ಲ ಆರೋಪಿಗಳು ‘ವೆಬ್ ಆ್ಯಪ್’ ಬಳಸಿರುವುದು ತನಿಖೆಯಿಂದ ದೃಢಪಟ್ಟಿದೆ. ದತ್ತಾಂಶ ನಾಶಪಡಿಸಿದ್ದಾರೆ. ಆರೋಪಿಗಳ ಹೆಸರಿನಲ್ಲೇ ಮತ್ತೆ ಸಿಮ್ ಕಾರ್ಡ್ ಖರೀದಿಸಿ ಮಾಹಿತಿ ಕಲೆ ಹಾಕಲು ಕೋರ್ಟ್‌ಗೆ ಕೋರಲಾಗಿದೆ. ಕೊಲೆಯಾದ ವ್ಯಕ್ತಿಯ ಮೊಬೈಲ್ ಸಹ ಸುಮನಹಳ್ಳಿ ರಾಜಕಾಲುವೆಗೆ ಎಸೆದಿದ್ದು, ಅದೇ ಸಂಖ್ಯೆಯ ಹೊಸ ಸಿಮ್ ಖರೀದಿಸಿ ಮಾಹಿತಿ ಕಲೆಹಾಕಲು ಅನುಮತಿ ಕೇಳಲಾಗಿದೆ’ ಎಂದು ಹೇಳಿದರು.

‘ದರ್ಶನ್ ಅವರಿಗೆ ಹಣ ನೀಡಿದ್ದ ವ್ಯಕ್ತಿಯ ವಿಚಾರಣೆ ನಡೆಸಬೇಕಿದೆ. ಎಲೆಕ್ಟ್ರಿಕ್ ಶಾಕ್ ಟಾರ್ಚ್ ಅನ್ನು ಆನ್‌ಲೈನ್‌ನಲ್ಲಿ ಖರೀದಿಸಿರುವುದಾಗಿ ಆರೋಪಿ ಧನರಾಜ್ ಬಾಯ್ಬಿಟ್ಟಿದ್ದಾರೆ. ಟಾರ್ಚ್ ಖರೀದಿಸಿ ಡಿಜಿಟಲ್ ಪೇಮೆಂಟ್ ಮಾಡಲಾಗಿದೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಮೃತನ ಬಟ್ಟೆ ಬದಲಾವಣೆ: ‘ರೇಣುಕಸ್ವಾಮಿ ಕೊಲೆ ಬಳಿಕ ಅವರ ಬಟ್ಟೆಯನ್ನು ಬದಲಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಮೃತನು ಮೊದಲು ಧರಿಸಿದ್ದ ಬಟ್ಟೆಗಳನ್ನು ಎಸೆದು ಸಾಕ್ಷ್ಯನಾಶ ಪಡಿಸಲಾಗಿದೆ. ಮೃತನ ಪ್ಯಾಂಟ್ ಎಸೆದಿದ್ದ ವ್ಯಕ್ತಿಯನ್ನು ವಿಚಾರಣೆ ನಡೆಸಲಾಗಿದೆ’ ಎಂದು ಹೇಳಿದರು.

₹40 ಲಕ್ಷ ನೀಡಿದ್ದು ಶಾಸಕರ ಸಂಬಂಧಿ

ದರ್ಶನ್‌ಗೆ ₹40 ಲಕ್ಷ ಸಾಲ ನೀಡಿದ್ದ ಮೋಹನ್‌ರಾಜ್ ಅವರು ಬೆಂಗಳೂರು ನಗರದ ಬಿಜೆಪಿಯ ಪ್ರಭಾವಿ ಶಾಸಕರೊಬ್ಬರ ಹತ್ತಿರದ ಸಂಬಂಧಿ ಎಂದು ಗೊತ್ತಾಗಿದೆ.

‘ದರ್ಶನ್ ಆಪ್ತ ಹಾಗೂ ಪಾಲಿಕೆ ಮಾಜಿ ಸದಸ್ಯರೂ ಆಗಿರುವ ಮೋಹನ್‌ರಾಜ್ ಒಂದು ವಾರದಿಂದ ತಲೆಮರೆಸಿಕೊಂಡಿದ್ದು ಅವರಿಗಾಗಿ ಶೋಧ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದರು.

ಜುಲೈ 4ರವರೆಗೆ ನ್ಯಾಯಾಂಗ ಬಂಧನ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಹಾಗೂ ಇತರ ಮೂವರನ್ನು ನಗರದ 24ನೇ ಎಸಿಎಂಎಂ ನ್ಯಾಯಾಲಯ 12 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ನ್ಯಾಯಾಧೀಶ ವಿಜಯಕುಮಾರ್ ಎಸ್.ಜಾಟ್ಲಾ ಅವರ ಮುಂದೆ ಶನಿವಾರ ಮಧ್ಯಾಹ್ನ 3.50ಕ್ಕೆ ಆರೋಪಿಗಳನ್ನು ಹಾಜರು ಪಡಿಸಲಾಯಿತು.

ತನಿಖಾಧಿಕಾರಿ ಎಸಿಪಿ ಎಲ್.ಚಂದನ್ ಕುಮಾರ್ ಪ್ರಕರಣದ ಸಿಡಿಯನ್ನು (ಕೇಸ್ ಡೈರಿ) ಮುಚ್ಚಿದ ಲಕೋಟೆಯಲ್ಲಿ ಹಾಗೂ ಮುಕ್ತ ರಿಮಾಂಡ್ ಅರ್ಜಿಯ ಕಡತವನ್ನು ನ್ಯಾಯಾಧೀಶರಿಗೆ ಸಲ್ಲಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಾಧೀಶರು 35 ನಿಮಿಷಗಳಲ್ಲಿ ವಿಚಾರಣಾ ಪ್ರಕ್ರಿಯೆ ಪೂರೈಸಿ ಆರೋಪಿಗಳನ್ನು ಜುಲೈ 4ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು. ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಹಾಗೂ ಸಹಾಯಕ ವಕೀಲರಾದ ಸಿ.ಸಚಿನ್ ಹಾಜರಿದ್ದರು.

ಜೀವ ಬೆದರಿಕೆ: ಪ್ರಮುಖ ಆರೋಪಿಗಳಾದ ಎ- 8 ರವಿಶಂಕರ್, ಎ-15 ಕಾರ್ತಿಕ್ ಅಲಿಯಾಸ್ ಕಪ್ಪೆ (27), ಎ-16 ಕೇಶವಮೂರ್ತಿ (27) ಮತ್ತು ಎ-17 ನಿಖಿಲ್ ನಾಯಕ್ (21) ಇವರಿಗೆ ಜೀವ ಬೆದರಿಕೆ ಯಿದ್ದು ಬೇರೆ ಜೈಲಿಗೆ ಕಳುಹಿಸಲು ಆದೇಶಿಸಬೇಕು ಎಂದು ಪಿ.ಪ್ರಸನ್ನ ಕುಮಾರ್ ಕೋರಿದರು.

ಇದಕ್ಕೆ ನ್ಯಾಯಾಧೀಶರು, ‘ಈ ವಿಷಯಕ್ಕೆ ಸಂಬಂಧಿಸಿದಂತೆ ತಾವು ಹೇಳುತ್ತಿರುವ ನಾಲ್ವರು ಆರೋಪಿಗಳ ಪರ ವಕೀಲರ ವಾದವನ್ನು ಇದೇ 24ರಂದು ಆಲಿಸಿ ಆದೇಶ ಪ್ರಕಟಿಸುತ್ತೇನೆ’ ಎಂದು ತಿಳಿಸಿ ವಿಚಾರಣೆ ಮುಂದೂಡಿದರು.

ಸಾಕ್ಷಿ ಹೇಳಿಕೆ ದಾಖಲು: ‘ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ 20 ಮತ್ತು 21ರಂದು ಐವರು ಸಾಕ್ಷಿಗಳ ಹೇಳಿಕೆಯನ್ನು ಅಪರಾಧ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 164ರ ಅಡಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ದಾಖಲು ಮಾಡಿಕೊಳ್ಳಲಾಗಿದೆ. ಇವರಲ್ಲಿ ಕೆಲವರು ಘಟನೆಯ ಪ್ರತ್ಯಕ್ಷ ಸಾಕ್ಷಿಗಳೂ ಇದ್ದಾರೆ’ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಂಗ ಬಂಧನಕ್ಕೆ ಒಳಗಾದ ಆರೋಪಿಗಳು
ಎ–2 ದರ್ಶನ್ ಅಲಿಯಾಸ್ ಡಿ ಬಾಸ್ ಬಿನ್ ಲೇಟ್ ತೂಗುದೀಪ ಶ್ರೀನಿವಾಸ್(47)
ಎ–9 ಡಿ.ಧನರಾಜ್ ಅಲಿಯಾಸ್ ರಾಜು ಬಿನ್ ದಿನೇಶ್ (27)
ಎ–10 ವಿ.ವಿನಯ್ ಬಿನ್ ಲೇಟ್ ವೆಂಕಟರೆಡ್ಡಿ (38)
ಎ–14 ಪ್ರದೋಷ್ ಬಿನ್ ಸುಬ್ಬಾರಾವ್ (40)

ದರ್ಶನ್ ರಕ್ಷಣೆಗೆ ನಿಂತಿಲ್ಲ: ಜಮೀರ್

ಪ್ರಜಾವಾಣಿ ವಾರ್ತೆ

ವಿಜಯಪುರ: ‘ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ರಕ್ಷಣೆಗೆ ನಾನು ಯಾರ ಮೇಲೂ ಒತ್ತಡ ಹೇರಿಲ್ಲ. ದರ್ಶನ್ ರಕ್ಷಣೆಗೆ ನಿಂತಿಲ್ಲ’ ಎಂದು ಸಚಿವ ಜಮೀರ್ ಅಹಮದ್ ಶನಿವಾರ ಹೇಳಿದರು.

‘ದರ್ಶನ್ ಮತ್ತು ನಾನು ಒಳ್ಳೆಯ ಸ್ನೇಹಿತರು. ಇಂತಹ ಕೃತ್ಯ ಮಾಡಿದಾಗ ಆರೋಪಿ ಪರ ಯಾರು ನಿಲ್ಲುತ್ತಾರೆ. ಯಾರೇ ತಪ್ಪು ಮಾಡಿದರೂ ತಪ್ಪೆ, ಉಪ್ಪು ತಿಂದವರು ನೀರು ಕುಡಿಯಲೇ ಬೇಕು ಎಂದು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಸಂಪನ್ಮೂಲ ಸಂಗ್ರಹಕ್ಕೆ ಸಲಹೆ ಕೇಳಿದರೆ ತಪ್ಪೇನು– ಡಿಕೆಶಿ

ಬೆಂಗಳೂರು: ‘ಕೇಂದ್ರ ಸರ್ಕಾರ ಹಾಗೂ ಬೇರೆ ರಾಜ್ಯ ಸರ್ಕಾರಗಳಂತೆ ನಾವು ಕೂಡಾ ಸಂಪನ್ಮೂಲ ಕ್ರೋಡೀಕರಣ ಮೂಲಗಳ ಬಗ್ಗೆ ಖಾಸಗಿ ಕಂಪನಿಗಳ ಸಲಹೆ ಕೇಳಿದ್ದೇವೆ. ಅದರಲ್ಲಿ ತಪ್ಪೇನಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸರ್ಕಾರ ಸಂಪನ್ಮೂಲ ಕ್ರೋಡೀಕರಣದತ್ತ ಹೆಚ್ಚು ಗಮನಹರಿಸುತ್ತಿದೆ. ಅನೇಕರಿಂದ ಸಲಹೆ ಕೇಳಿದ್ದೇವೆ. ಬಿಜೆಪಿಯವರಂತೆ ಹಣಕಾಸಿಗಾಗಿ ನಾವು ಸರ್ಕಾರಿ ಆಸ್ತಿಗಳನ್ನು ಅಡ ಇಡುತ್ತಿಲ್ಲ. ರಾಜ್ಯದ ಹಿತಕ್ಕಾಗಿ ಏನು ಕ್ರಮ ಕೈಗೊಳ್ಳಬೇಕೊ ಅದನ್ನು ಮಾಡುತ್ತೇವೆ’ ಎಂದರು.

ಗ್ಯಾರಂಟಿಯಿಂದ ಬೆಲೆ ಏರಿಕೆ ಮಾಡಿಲ್ಲ: ‘ಬೆಲೆ ಏರಿಕೆಗೆ ಗ್ಯಾರಂಟಿ ಯೋಜನೆಗಳೇ ಕಾರಣ’ ಎಂಬ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕೆ ಕುರಿತು ಗಮನಸೆಳೆದಾಗ, ‘ಯಾರು ಏನಾದರೂ ಆರೋಪಿಸಲಿ. ಗ್ಯಾರಂಟಿ ಯೋಜನೆಗೂ ಬೆಲೆ ಏರಿಕೆಗೂ ಸಂಬಂಧವಿಲ್ಲ. ಕಾಲಕಾಲಕ್ಕೆ ಆಗಬೇಕಿರುವ ಬೆಲೆ ಏರಿಕೆಯನ್ನೇ ನಾವು ಮಾಡಿದ್ದೇವೆ’ ಎಂದರು.

‘ನಾವು ಬಹಳ ಕಡಿಮೆ ಪ್ರಮಾಣದಲ್ಲಿ ನೆರೆ ರಾಜ್ಯಗಳ ಬೆಲೆಯನ್ನು ಗಮನದಲ್ಲಿಟ್ಟುಕೊಂಡು ತೈಲ ಬೆಲೆ ಏರಿಕೆ ಮಾಡಿದ್ದೇವೆ. ಗ್ಯಾರಂಟಿ ಯೋಜನೆಗಳು ಮುಂದುವರಿಯಲಿದೆ. ರಾಜ್ಯದ ಅಭಿವೃದ್ಧಿಗೆ ಏನು ಮಾಡಬೇಕೊ ಆ ಕೆಲಸ ಮಾಡುತ್ತೇವೆ’ ಎಂದರು.

ಸೂರಜ್ ರೇವಣ್ಣರಿಂದ ಲೈಂಗಿಕ ದೌರ್ಜನ್ಯ ಆರೋಪ ಕುರಿತು ಕೇಳಿದಾಗ, ‘ಅವರ ಕುಟುಂಬದಲ್ಲಿ ದೊಡ್ಡವರಿದ್ದಾರೆ. ಅವರು ಉತ್ತರಿಸುತ್ತಾರೆ. ನಮಗೆ ಆ ವಿಚಾರ ಬೇಡ’ ಎಂದರು.

ಡಿಸಿಎಂ ಸ್ಥಾನ ಬೇಡಿಕೆ ತಪ್ಪಲ್ಲ: ಸಚಿವ

ವಿಜಯಪುರ: ‘ರಾಜ್ಯ ಸರ್ಕಾರದಲ್ಲಿ ಹೆಚ್ಚುವರಿಯಾಗಿ ಉಪಮುಖ್ಯಮಂತ್ರಿ ಸ್ಥಾನಗಳನ್ನು ನೀಡಬೇಕೆಂದು ಲಿಂಗಾಯತ, ದಲಿತ, ಮುಸ್ಲಿಂ ಸಮುದಾಯಗಳು ಬೇಡಿಕೆ ಇಟ್ಟಿವೆ. ನಾವು ಕೂಡ ಬೇಡಿಕೆ ಇಟ್ಟಿದ್ದೇವೆ. ಅದನ್ನು ಕೇಳುವುದರಲ್ಲಿ ತಪ್ಪೇನೂ ಇಲ್ಲ’ ಎಂದು ಸಚಿವ ಜಮೀರ್ ಅಹಮದ್ ಹೇಳಿದರು.

‘ತಮ್ಮ ಸಮುದಾಯದ ವ್ಯಕ್ತಿ ಉಪಮುಖ್ಯಮಂತ್ರಿ ಆಗಬೇಕು ಎಂಬ ಆಸೆ ವಿವಿಧ ಸಮುದಾಯದವರಿಗೆ ಇರುತ್ತದೆ. ಆದರೆ, ಆ ಸ್ಥಾನ ಕೊಡುವುದು ಅಥವಾ ಬಿಡುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟ ವಿಚಾರ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಹಲ್ಲೆ ಪ್ರಕರಣ: ಶಾಸಕನ ಸಹೋದರ ಸೆರೆ

ಪ್ರಜಾವಾಣಿ ವಾರ್ತೆ

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಕಠಳ್ಳಿ ಗ್ರಾಮದಲ್ಲಿ ಜೆಜೆಎಂ ಕಾಮಗಾರಿ ಕಳಪೆಯಾಗಿರುವುದನ್ನು ಪ್ರಶ್ನಿಸಿದ್ದ ವ್ಯಕ್ತಿಯ ಮೇಲೆ ಈಚೆಗೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಅವರ ಸಹೋದರ ಸುನೀಲ ಪಾಟೀಲ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಕಠಳ್ಳಿಯ ಬಸವರಾಜ ಪಾಟೀಲ ಎಂಬುವವರ ಮೇಲೆ ಶಾಸಕರ ಸಹೋದರರೂ ಸೇರಿ ಇತರರು ಮೇ 31ರಂದು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಹುಮನಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಹಲ್ಲೆಗೊಳಗಾಗಿದ್ದ ಬಸವರಾಜ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದ ರಾಜಶೇಖರ ಪಾಟೀಲ ಅವರು, ಹಲ್ಲೆ ಮಾಡಿದ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದ್ದರು. ಬಳಿಕ ಪೊಲೀಸರು ಕೆಲ ಆರೋಪಿಗಳನ್ನು ಬಂಧಿಸಿದ್ದರು.

‘ಒಂದಾಗಿ ಕಾಂಗ್ರೆಸ್ ಸೊಕ್ಕು ಮುರಿಯುತ್ತೇವೆ’

ಎನ್‌ಡಿಎ ಸಂಸದರ ಅಭಿನಂದನಾ ಸಮಾರಂಭದಲ್ಲಿ ಬಿ.ವೈ.ವಿಜಯೇಂದ್ರ: ಬಿಜೆಪಿ, ಜೆಡಿಎಸ್ ನಾಯಕರ ಒಗ್ಗಟ್ಟು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಮಂಡಲದ ಒಳಗೆ ಮತ್ತು ಹೊರಗೆ ಬಿಜೆಪಿ-ಜೆಡಿಎಸ್ ಒಂದಾಗಿ ಕಾಂಗ್ರೆಸ್‌ನ ಸೊಕ್ಕು ಮುರಿಯುತ್ತೇವೆ. ಮುಂದಿನ ನಾಲ್ಕು ವರ್ಷ ಈ ಹೋರಾಟ ಮುಂದುವರಿಸುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಶನಿವಾರ ಹೇಳಿದರು.

ಬಿಜೆಪಿ ರಾಜ್ಯ ಘಟಕದ ವತಿಯಿಂದ ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಕೇಂದ್ರದ ನೂತನ ಸಚಿವರು, ಎನ್‌ಡಿಎ ಸಂಸದರ ಅಭಿನಂದನಾ ಸಮಾರಂಭದಲ್ಲಿ ಅವರು, ‘ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದೆ’ ಎಂದರು.

ದಕ್ಷಿಣ ಭಾರತದಲ್ಲಿ ಕರ್ನಾಟಕ ಬಿಜೆಪಿಯ ಭದ್ರಕೋಟೆ ಎಂಬುದು ಲೋಕಸಭಾ ಚುನಾವಣೆಯಲ್ಲೂ ಸಾಬೀತಾಗಿದೆ. ಕಾಂಗ್ರೆಸ್ ಒಂಬತ್ತು ಕ್ಷೇತ್ರಗಳಲ್ಲಿ ಗೆದ್ದಿರಬಹುದು. ಆದರೆ, 145 ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಮುನ್ನಡೆ ಸಿಕ್ಕಿದೆ. ಇದು ಜನತೆ ಕಾಂಗ್ರೆಸ್ ಸರ್ಕಾರವನ್ನು ತಿರಸ್ಕರಿಸುವುದಕ್ಕೆ ಸಾಕ್ಷಿ ಎಂದು ಹೇಳಿದರು.

ಕರ್ನಾಟಕ ಕಾಂಗ್ರೆಸ್‌ನ ದುರಾಡಳಿತದಿಂದ ಹಿನ್ನಡೆ ಅನುಭವಿಸುತ್ತಿದೆ. ಗ್ಯಾರಂಟಿ ಯೋಜನೆಗಳಿಂದಾಗಿ ಜನರ ಮೇಲೆ ಬೆಲೆ ಏರಿಕೆಯ ಹೊರೆ ಹೊರಿಸಲಾಗುತ್ತಿದೆ. ಸರ್ಕಾರದ ದುರಾಡಳಿತದಿಂದ ಬೇಸತ್ತಿರುವ ಕಾಂಗ್ರೆಸ್ ಶಾಸಕ ಸಿ.ಎಸ್.ನಾಡಗೌಡರು ರಾಜಕೀಯ ನಿವೃತ್ತಿಯ ಮಾತನಾಡಿದ್ದಾರೆ. ಇದು ರಾಜ್ಯದ ದುಸ್ಥಿತಿಗೆ ನಿದರ್ಶನ ಎಂದರು.

ಜನರ ಬಳಿ ಹೋಗಿ: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ‘ಕಾಂಗ್ರೆಸ್ ಎಂದರೆ ಸುಳ್ಳು ಗ್ಯಾರಂಟಿ, ಭ್ರಷ್ಟಾಚಾರ, ದುರಾಡಳಿತ ಮತ್ತು ಅಭಿವೃದ್ಧಿ ವಿರೋಧಿ ಎಂಬುದನ್ನು ಜನರಿಗೆ ಮನವರಿಕೆ ಮಾಡಬೇಕು. ಇದಕ್ಕಾಗಿ ಮುಖಂಡರು ಮತ್ತು ಕಾರ್ಯಕರ್ತರು ಜನರ ಬಳಿ ಹೋಗಿ’ ಎಂದು ಕರೆ ನೀಡಿದರು.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಚುನಾವಣಾ ಸಹ ಉಸ್ತುವಾರಿ ಸುಧಾಕರ ರೆಡ್ಡಿ ಮಾತನಾಡಿದರು. ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಗೋವಿಂದ ಕಾರಜೋಳ, ಮಾಜಿ ಸಂಸದ ಡಿ.ವಿ. ಸದಾನಂದ ಗೌಡ, ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರು, ಪರಿಷತ್ ಸದಸ್ಯರು ಇದ್ದರು.

ಬೆಂಗಳೂರಿನಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಕೇಂದ್ರ ಸಚಿವರಾದ ವಿ. ಸೋಮಣ್ಣ, ಎಚ್‌.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ ಮತ್ತು ಶೋಭಾ ಕರಂದ್ಲಾಜೆ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ರಾಜ್ಯ ಸಹ ಚುನಾವಣಾ ಉಸ್ತುವಾರಿ ಸುಧಾಕರ ರೆಡ್ಡಿ, ಮಾಜಿ ಸಚಿವ ಎಚ್‌.ಕೆ. ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ, ಜೆಡಿಎಸ್ ಬೆಂಗಳೂರು ಮಹಾನಗರ ಘಟಕದ ಅಧ್ಯಕ್ಷ ಎಚ್‌.ಎಂ. ರಮೇಶ್ ಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಇದ್ದರು –ಪ್ರಜಾವಾಣಿ ಚಿತ್ರ

‘ಕೆಲಸಕ್ಕೆ ಬಾರದವರನ್ನು ಕಿತ್ತುಹಾಕಿ’

‘ನೀವು ಯುವಕ ಇದ್ದೀರಿ. ಇನ್ನಾದರೂ ಪಕ್ಷದಲ್ಲಿರುವ ಕೆಲಸಕ್ಕೆ ಬಾರದವರನ್ನು ಕಿತ್ತು ಹಾಕಿ’ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ವಿಜಯೇಂದ್ರ ಅವರನ್ನು ವೇದಿಕೆಯಲ್ಲೇ ಆಗ್ರಹಿಸಿದರು.

‘ಯಾರೋ ಮಾಡಿದ ಪಾಪಕ್ಕೆ ಯಾರನ್ನೋ ಗುರಿ ಮಾಡಬೇಡಿ. ಸರಿಯಾಗಿ ಗುರುತಿಸಿ. ದಾವಣಗೆರೆಯಲ್ಲಿ ಸೋತಿದ್ದೇವೆ ನಾವು. ಸೋಮಣ್ಣ ಸೋಲುತ್ತಾನೆ ಎಂದು ಹೇಳುತ್ತಾ ಇದ್ದರು. ಜೆಡಿಎಸ್‌ನ ಸಹಕಾರ ಮತ್ತು ಬಿಜೆಪಿಯ ಹೊಂದಾಣಿಕೆಯಿಂದ ಗೆದ್ದಿದ್ದೇನೆ’ ಎಂದು ತಿಳಿಸಿದರು.

‘ರಾಜ್ಯ ಸರ್ಕಾರ ಎಷ್ಟು ತಿಂಗಳಿರಲಿದೆಯೊ ಗೊತ್ತಿಲ್ಲ. ಅದನ್ನು ಕುಮಾರಸ್ವಾಮಿ ಅವರೇ ಹೇಳಬೇಕು’ ಎಂದು ವೇದಿಕೆಯಲ್ಲಿದ್ದ ಅವರತ್ತ ನೋಡಿದರು.

‘ಟಿಕೆಟ್ ಹಂಚಿಕೆಯಲ್ಲಿ ವ್ಯತ್ಯಾಸ’: ಸೋಮಣ್ಣ ಮಾತಿಗೆ ವೇದಿಕೆಯಲ್ಲೇ ಪ್ರತಿಕ್ರಿಯಿಸಿದ ಬಿ.ಎಸ್. ಯಡಿಯೂರಪ್ಪ, ‘ನಾವು ಇನ್ನೂ ಎರಡು–ಮೂರು ಕ್ಷೇತ್ರಗಳಲ್ಲಿ ಗೆಲ್ಲಬಹುದಿತ್ತು. ಆದರೆ, ಟಿಕೆಟ್ ನೀಡುವುದರದಲ್ಲಿ ವ್ಯತ್ಯಾಸ ಆಯಿತು’ ಎಂದರು.

ಚುನಾವಣೆ ಘೋಷಿಸಿ: ಸವಾಲು

‘ಗ್ಯಾರಂಟಿ ಯೋಜನೆಗಳಿಂದ ಜನರು ಸಂತೃಪ್ತರಾಗಿದ್ದಾರೆ ಎಂದು ಹೇಳುವ ಕಾಂಗ್ರೆಸ್ ಸರ್ಕಾರಕ್ಕೆ ದಮ್ಮು, ತಾಕತ್ತು ಇದ್ದರೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಘೋಷಿಸಲಿ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಸವಾಲು ಹಾಕಿದರು.

‘ಮೈತ್ರಿ ಮುಂದುವರಿದರೆ ಸರ್ಕಾರ ರಚಿಸಬಹುದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಚ್ಚು, ಕಡಿಮೆ ಎನ್ನುವ ಭಿನ್ನಾಭಿಪ್ರಾಯವಿಲ್ಲದೇ ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರಿದರೆ ಭವಿಷ್ಯದ ದಿನಗಳಲ್ಲಿ 2006ರ ಮಾದರಿಯಲ್ಲೇ ಸರ್ಕಾರ ರಚಿಸುವ ಸಾಧ್ಯತೆ ನಮ್ಮೆದುರಿಗೆ ಇದೆ’ ಎಂದು ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಬಿಜೆಪಿ ರಾಜ್ಯ ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಕೇಂದ್ರದ ನೂತನ ಸಚಿವರು ಮತ್ತು ಎನ್‌ಡಿಎ ಸಂಸದರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಲೋಕಸಭಾ ಚುನಾವಣೆಯಲ್ಲಿ ಆರಂಭವಾದ ಮೈತ್ರಿ ಮುಂದುವರಿಯಬೇಕು. ಮೈಸೂರು ಮಹಾನಗರ ಪಾಲಿಕೆ ಚುನಾವಣೆ ಸೇರಿ ಮುಂಬರುವ ಎಲ್ಲ ಚುನಾವಣೆಗಳಲ್ಲೂ ಮೈತ್ರಿ ಇರಬೇಕು. ಎರಡೂ ಪಕ್ಷಗಳೂ ಮುಕ್ತ ಮನಸ್ಸಿನಿಂದ ಸಾಗಬೇಕು. ಮೈತ್ರಿಕೂಟ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೂ ಸಜ್ಜಾಗಬೇಕು ಎಂದರು.

‘ನಮ್ಮಗಳ ಮಧ್ಯೆ ಯಾವುದೇ ಒಡಕು ಇರಬಾರದು. ಅಣ್ಣ, ತಮ್ಮಂದಿರ ರೀತಿಯಲ್ಲಿ ಇರಬೇಕು. ಒಗ್ಗಟ್ಟು ಮುರಿಯಲು ಯಾರೇ ಯತ್ನಿಸಿದರೂ ಕಿವಿ ಮೇಲೆ ಹಾಕಿಕೊಳ್ಳಬಾರದು’ ಎಂದು ಹೇಳಿದರು.

> **‘ಹಿಂದೆ ಯಡಿಯೂರಪ್ಪ ಅವರಿಗೆ ನಾನು ಅಧಿಕಾರ ಹಸ್ತಾಂತರಿಸಬೇಕಿತ್ತು. ಕೆಲವರ ಕುತಂತ್ರದಿಂದ ಆಗಲಿಲ್ಲ. ಆಗ ನಮ್ಮ ಮೈತ್ರಿ ಉಳಿದಿದ್ದರೆ ಈಗ ಕಾಂಗ್ರೆಸ್ ಪಕ್ಷವೇ ರಾಜ್ಯದಲ್ಲಿ ಇರುತ್ತಿರಲಿಲ್ಲ**
> **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಪರಿಚಯಿಸಿದ್ದು ಬಿಎಸ್‌ವೈ: ‘2006ರಲ್ಲಿ ಬಿಜೆಪಿ ಜತೆ ಸೇರಿ ಸರ್ಕಾರ ರಚಿಸಿದ್ದರಿಂದ ಈ ನಾಡಿಗೆ ನನ್ನ ಪರಿಚಯ ಆಯಿತು. ಅದಕ್ಕೆ ಕಾರಣ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು. ನನಗಿಂತ ಹಿರಿಯರಾದರೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಮುಕ್ತ ಸಹಕಾರ ನೀಡಿದ್ದರು’ ಎಂದರು.

ಬೆಲೆ ಏರಿಕೆಗೆ ಗ್ಯಾರಂಟಿ ಕಾರಣ: ‘ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲ ಉತ್ಪನ್ನಗಳ ಬೆಲೆ ಏರಿಕೆಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳೇ ಕಾರಣ’ ಎಂದು ಎಚ್. ಡಿ. ಕುಮಾರಸ್ವಾಮಿ ಆರೋಪಿಸಿದರು.

‘ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ರಾಜ್ಯ ಸರ್ಕಾರ ಹೆಣಗಾಡುತ್ತಿದೆ. ಅದಕ್ಕಾಗಿ ನಿರಂತರವಾಗಿ ಬೆಲೆ ಏರಿಕೆ ಮಾಡುತ್ತಾ ಜನರನ್ನು ದೋಚುತ್ತಿದೆ’ ಎಂದು ತಿಳಿಸಿದರು.

ಅತಿಸಾರ: ವಾರದಲ್ಲಿ ಆರು ಸಾವಿರ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ರಾಜ್ಯದಲ್ಲಿ ಅತಿಸಾರ (ಡಯೇರಿಯಾ) ಪ್ರಕರಣಗಳು ಏರಿಕೆಯಾಗಿವೆ. ಕಳೆದೊಂದು ವಾರದಲ್ಲಿ 6,060 ಪ್ರಕರಣಗಳು ದೃಢಪಟ್ಟಿವೆ.

ಆರೋಗ್ಯ ಇಲಾಖೆಯು ಸೋಂಕು ರೋಗಗಳ ವರದಿ ಬಿಡುಗಡೆ ಮಾಡಿದ್ದು, ಇದರ ಪ್ರಕಾರ ಈ ವರ್ಷ ಜೂನ್ 16ರ ವೇಳೆಗೆ ವರದಿಯಾದ ಒಟ್ಟು ಅತಿಸಾರ ಪ್ರಕರಣಗಳ ಸಂಖ್ಯೆ 87,697ಕ್ಕೆ ಏರಿಕೆಯಾಗಿದೆ.

ಎರಡೂವರೆ ತಿಂಗಳಿಂದ ಪ್ರಕರಣಗಳು ಹೆಚ್ಚಳವಾಗಿವೆ. ಮಾರ್ಚ್ ಅಂತ್ಯಕ್ಕೆ 36,814 ಅತಿಸಾರ ಪ್ರಕರಣಗಳು ವರದಿಯಾಗಿದ್ದವು. ಬಳಿಕ ಬಿಸಿಲು ಮಳೆಯ ವಾತಾವರಣದಿಂದಾಗಿ ಪ್ರಕರಣಗಳು ಏರುಗತಿ ಪಡೆದು, 50 ಸಾವಿರಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿವೆ. ಕಳೆದೊಂದು ವಾರದಲ್ಲಿ 7,066 ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದಾರೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 1.56 ಲಕ್ಷಕ್ಕೆ ತಲುಪಿದೆ. ವಾರದಲ್ಲಿ 408 ಹಾವು ಕಡಿತ ಪ್ರಕರಣ ವರದಿಯಾಗಿದೆ. ಈವರೆಗೆ ವರದಿಯಾದ ಹಾವು ಕಡಿತ ಪ್ರಕರಣಗಳು 4,710ಕ್ಕೆ ಏರಿವೆ. 27 ಮಂದಿ ಹಾವು ಕಡಿದು ಮೃತಪಟ್ಟಿದ್ದಾರೆ.

‘ಐಸಿಡಿಎಸ್ ಯೋಜನೆ ಬಲಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು (ಐಸಿಡಿಎಸ್) ಬಲಪಡಿಸಲು ತಜ್ಞರ ಸಮಿತಿ ರಚಿಸಬೇಕು’ ಎಂದು ಆರ್ಥಿಕ ತಜ್ಞ ಟಿ.ಆರ್. ಚಂದ್ರಶೇಖರ್ ಅವರು ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಆಯೋಜಿಸಿದ್ದ ‘ಅಂಗನವಾಡಿ ಕೇಂದ್ರದ ಪರಿಕಲ್ಪನೆಗೆ ಬಂದಿರುವ ಅಪಾಯದ ಕುರಿತು ಚರ್ಚಿಸಲು ಮತ್ತು ಸಮಗ್ರತೆಯನ್ನು ಕಾಪಾಡಲು ಕರೆದಿದ್ದ ಸಭೆ’ಯಲ್ಲಿ ಅವರು ಶನಿವಾರ ಮಾತನಾಡಿದರು.

‘ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸುವ ಆದೇಶವನ್ನು ಸರ್ಕಾರ ತಜ್ಞರೊಂದಿಗೆ ಚರ್ಚಿಸದೇ ತರಾತುರಿಯಲ್ಲಿ ಮಾಡಿದೆ’ ಎಂದು ದೂರಿದರು.

‘ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಗೆ ದಾಖಲಾಗುವ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿದೆ. ಹೀಗಾಗಿ, ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸಲಾಗುತ್ತಿದೆ ಎಂಬ ಸಮರ್ಥನೆ ಸರಿಯಲ್ಲ. 2011ರ ಜನಗಣತಿಯ ಪ್ರಕಾರ ಆರು ವರ್ಷದೊಳಗಿನ ಮಕ್ಕಳ ಸಂಖ್ಯೆಯೇ ಕಡಿಮೆ ಆಗಿದೆ’ ಎಂದರು.

ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ, ‘ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸುವ ಆದೇಶ ಕೈಬಿಡಬೇಕು. ಅಂಗನವಾಡಿಗಳನ್ನೇ ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರವೆಂದು ಪರಿವರ್ತಿಸಬೇಕು.’ ಎಂದು ಒತ್ತಾಯಿಸಿದರು.

ಸಹಕಾರ ಪತ್ರಿಕೋದ್ಯಮ ಬೇಕಿದೆ: ಕೆ.ವಿ. ನಾಗರಾಜ್

ನಾಗರಾಜಗೆ ಖಾದ್ರಿ ಶಾಮಣ್ಣ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ನೀಡುವ ‘ಖಾದ್ರಿ ಶಾಮಣ್ಣ ಪತ್ರಿಕೋದ್ಯಮ’ ಪ್ರಶಸ್ತಿಯನ್ನು ‘ಪ್ರಜಾವಾಣಿ’ ಡೆಪ್ಯೂಟಿ ಎಡಿಟರ್ ಎಂ.ನಾಗರಾಜ ಅವರಿಗೆ ಶನಿವಾರ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನ ಮಾಡಿದ ನಿವೃತ್ತ ಪ್ರಾಧ್ಯಾಪಕ ಕೆ.ವಿ.ನಾಗರಾಜ್ ಅವರು, ‘ಹಿಂದೆ ಜಾಹೀರಾತು ಬೇರೆ, ಸುದ್ದಿ ಬೇರೆಯಾಗಿತ್ತು. ಈಗ ಪತ್ರಿಕೋದ್ಯಮವು ಸುದ್ದಿ ತಯಾರಿಸುವ ಕೈಗಾರಿಕೆಯಾಗಿದೆ. ಹಾಗಾಗಿ ಪತ್ರಿಕೋದ್ಯಮ ವಾಣಿಜ್ಯೋದ್ಯಮವಾಗಿದೆ’ ಎಂದರು.

ಇದಕ್ಕೆ ಪರ್ಯಾಯವಾಗಿ ಅಮೆರಿಕದಲ್ಲಿ ‘ಮೈಂಡ್‌ಫುಲ್ ಜರ್ನಲಿಸಂ’ ಆರಂಭವಾಗಿದೆ. ಬುದ್ಧನ ಅಷ್ಟಮಾರ್ಗಗಳನ್ನು ಅಳವಡಿಸಿಕೊಂಡು ಇದು ನಡೆಯುತ್ತಿದೆ. ಸ್ಪರ್ಧೆ ಇರಬಾರದು. ಸಹಕಾರ ಇರಬೇಕು ಎಂಬುದು ಅದರ ತತ್ವ. ಇದೇ ತತ್ವದ ಆಧಾರದ ಪತ್ರಿಕೋದ್ಯಮ ನಮ್ಮ ದೇಶದಲ್ಲಿಯೂ ಸಾಧ್ಯವೇ ಎಂಬ ಚಿಂತನೆ ಆಗಬೇಕು ಎಂದರು.

ಸಾಮಾಜಿಕ ಜಾಲತಾಣಗಳು ಬಂದ ಮೇಲೆ ಎಲ್ಲವೂ ಸುದ್ದಿ, ಎಲ್ಲರೂ ಪತ್ರಕರ್ತರು ಎಂಬ ಮಾತುಗಳಿವೆ. ಇದು ಸರಿಯಲ್ಲ. ವೃತ್ತಿಪರ ಚೌಕಟ್ಟು ಇಲ್ಲದೇ, ಸುದ್ದಿಯನ್ನು ಪರಿಷ್ಕರಿಸದೇ ಪ್ರಕಟಿಸುವುದು ಪತ್ರಿಕೋದ್ಯಮವಾಗದು ಎಂದು ಅಭಿಪ್ರಾಯಪಟ್ಟರು.

ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಮಾತನಾಡಿ, ‘ಬಿಬಿಎಂಪಿಯಲ್ಲಿ ಪತ್ರಕರ್ತರ ಆರೋಗ್ಯ ನಿಧಿಯಾಗಿ ವರ್ಷಕ್ಕೆ ₹ 2 ಕೋಟಿ ಮೀಸಲಿಡಲಾಗುತ್ತಿದೆ. ಅವಶ್ಯ ಇರುವ ಪತ್ರಕರ್ತರು ಇದರ ಸದುಪಯೋಗ ಪಡೆಯಬೇಕು’ ಎಂದು ತಿಳಿಸಿದರು.

ಪತ್ರಕರ್ತ ಬಿ.ಎಸ್.ಅರುಣ್ ಮಾತನಾಡಿ, ‘ಮಾಧ್ಯಮಗಳ ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದೆ. ರಾಜಕೀಯ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಸುದ್ದಿಗಳಲ್ಲಿ ನಿಖರ ಯಾವುದು? ನಕಲಿ ಯಾವುದು? ಎಂದು ಪತ್ತೆ ಹಚ್ಚುವುದೇ ಕಷ್ಟದ ಕೆಲಸವಾಗಿದೆ’ ಎಂದರು.

ಗಾಂಧಿಭವನ ಅಧ್ಯಕ್ಷ ವೂಡೇ ಪಿ. ಕೃಷ್ಣ ಮಾತನಾಡಿ, ‘ಮಾಧ್ಯಮಗಳು ಘನತೆಯನ್ನು ಕಳೆದುಕೊಳ್ಳುತ್ತಿರುವ ಈ ಕಾಲದಲ್ಲಿ ಮುಖ್ಯವಾಹಿನಿಯ ಮುದ್ರಣ ಮಾಧ್ಯಮಗಳು ಮಾತ್ರ ಘನತೆ, ಗಟ್ಟಿತನ ಉಳಿಸಿಕೊಂಡಿವೆ’ ಎಂದು ಶ್ಲಾಘಿಸಿದರು.

ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿಯನ್ನು ‘ಪ್ರಜಾವಾಣಿ’ ಡೆಪ್ಯೂಟಿ ಎಡಿಟರ್ ಎಂ. ನಾಗರಾಜ ಅವರಿಗೆ ಪ್ರಾಧ್ಯಾಪಕ ಕೆ.ವಿ. ನಾಗರಾಜ್ ಪ್ರದಾನ ಮಾಡಿದರು. ಪತ್ರಕರ್ತ ಬಿ.ಎಸ್‌. ಅರುಣ್, ಗಾಂಧಿಭವನ ಅಧ್ಯಕ್ಷ ವೂಡೇ ಪಿ. ಕೃಷ್ಣ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್‌.ಆರ್‌. ಉಮಾಶಂಕರ್, ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್‌ನ ಎಚ್‌.ಆರ್‌. ಶ್ರೀಶ, ನಾಗರಾಜ ಅವರ ಪತ್ನಿ ಯಶೋದಾ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಮೂರು ದಿನ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿಯ ಎಲ್ಲ ಜಿಲ್ಲೆಗಳು ಮತ್ತು ದಕ್ಷಿಣ ಒಳನಾಡಿನ ಕೆಲವೆಡೆ ಮೂರು ದಿನ ಭಾರಿ ಮಳೆಯಾಗುವ ಜತೆಗೆ ಬಲವಾಗಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಭಾನುವಾರ ಎಂಟು ಜಿಲ್ಲೆಗಳಿಗೆ ತೀವ್ರ ಮಳೆಯ ಅಲರ್ಟ್ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ‘ರೆಡ್ ಅಲರ್ಟ್’ ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಸಂಭವವಿದೆ. ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಬೆಳಗಾವಿ ಹಾಗೂ ಬೀದರ್ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಈ ಜಿಲ್ಲೆಗಳಲ್ಲಿಯೂ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ ಎಂದು ತಿಳಿಸಿದೆ.

ಸೋಮವಾರದಂದೂ ಕರಾವಳಿ ಜಿಲ್ಲೆಗಳು ಸೇರಿ 12 ಜಿಲ್ಲೆಗಳಿಗೆ ‘ರೆಡ್ ಅಲರ್ಟ್’ ಘೋಷಿಸಲಾಗಿದೆ.

ಹಾರಿ ಹೋದ ಬಲಾಕ



'ಕನ್ನಡದ ಆದಿ ದಂಪತಿ'ಯ ಅನನ್ಯ ಚಿತ್ರಗಳು...ಬಾಳ ಸಂಗಾತಿ ಕಮಲಾ ಅವರಿಗೆ ಹಂಪನಾ ವಿದಾಯ ಹೇಳಿದ ಕ್ಷಣ. ಚಿತ್ರ: ಕಿಶೋರ್ ಕುಮಾರ್ ಬೋಳಾರ್ (ಎಡಚಿತ್ರ) ಈ 'ಆದಿ ದಂಪತಿ'ಯ ಪ್ರೇಮದ ಪರಿ. ಈ ಅನನ್ಯ ಚಿತ್ರವನ್ನು ಈ ಹಿಂದೆ ಪ್ರಜಾವಾಣಿ ಸಂದರ್ಶನದ ವೇಳೆ ಕ್ಲಿಕ್ಕಿಸಲಾಗಿತ್ತು ಚಿತ್ರ: ಎಂ.ಎಸ್. ಮಂಜುನಾಥ್

● ಎಂ.ಎಸ್. ಆಶಾದೇವಿ

ನುಡಿ ನಮನ

ಕಳೆದ ತಿಂಗಳು ರಂಗಪ್ರವೇಶದ ಕಾರ್ಯಕ್ರಮವೊಂದಿತ್ತು. ಮುಖ್ಯ ಅತಿಥಿಗಳಾದ ಹಂಪನಾ ಅವರಿಗಾಗಿ ಕಾಯುತ್ತಿರುವಾಗ ನಾನೆಂದೆ, 'ಕನ್ನಡದ ಆದಿ ದಂಪತಿ' ಯಾಕೋ ಇನ್ನೂ ಬರಲಿಲ್ಲವಲ್ಲ ಎಂದು. ಒಬ್ಬರು ಅತಿಥಿಯಾಗಿದ್ದರೂ ದಂಪತಿ ಇಬ್ಬರೂ ಬರುವುದು ಅವರ ನಿಡುಗಾಲದ ಸಖ್ಯದ ವ್ಯಾಖ್ಯಾನದಂತೆ ಕಾಣಿಸುತ್ತಿತ್ತು. ಅಲ್ಲಿದ್ದ ಹಲವರು 'ಆದಿ ದಂಪತಿ' ಎನ್ನುವುದು ಸರಿಯಾದ ಮಾತು ಎಂದೂ ಅನುಮೋದಿಸಿದ್ದರು. ಒಂದೇ ತಿಂಗಳಲ್ಲಿ ಆ ಜೋಡಿ ಮುಕ್ಕಾದುದನ್ನು ನೋಡಿ ಅಪಾರ ದುಃಖವಾಗುತ್ತಿದೆ. 'ಜಕ್ಕವಕ್ಕಿ'ಗಳ ಹಾಗೆ ಬದುಕಿದವರು ಇವರಿಬ್ಬರು. ಅನುಕೂಲ ಸತಿಯರ ಪರಿಕಲ್ಪನೆಯನ್ನೇ ಬದಲಿಸುವಂತೆ ಪ್ರೊ. ಹಂಪನಾ ಅನುಕೂಲ ಪತಿಯೂ ಆಗಿದ್ದರು.

ಅಂತರ್ಜಾತೀಯ ಮದುವೆಗಳು ವಿರಳವಾಗಿದ್ದ ಕಾಲದಲ್ಲಿ ಇವರದು ಅಂತರ್ಧರ್ಮೀಯ ಮದುವೆಯೂ ಆಗಿತ್ತು. ಆ ಕಷ್ಟದ ದಿನಗಳನ್ನು ಕಮಲಾ ಹಂಪನಾ ಅವರು ಅವರ ಆತ್ಮಚರಿತ್ರೆ 'ಬೇರು ಬೆಂಕಿ ಬಿಳಲು'ವಿನಲ್ಲಿ ವಿವರವಾಗಿಯೇ ಬರೆದಿದ್ದಾರೆ. ಆ ಮದುವೆಗೆ ಎದುರಾದ ಸಂಕಷ್ಟದ ಗಳಿಗೆಯೊಂದನ್ನು ಅದೆಷ್ಟು ಧೀರವಾಗಿ ಅವರು ಎದುರಿಸಿದರು ಎನ್ನುವುದು ಅವರ ಬಗೆಗಿನ ಗೌರವವನ್ನು ಹೆಚ್ಚಿಸುತ್ತದೆ. ಮದುವೆಯ ನಂತರ ಅತ್ತೆ ಮನೆಯ ಮೆಚ್ಚಿನ ಸೊಸೆಯಾದದ್ದು, ಆ ಮನೆಯ ಆಧಾರಸ್ತಂಭವೇ ಆದದ್ದನ್ನೂ ತೃಪ್ತಿಯಿಂದಲೇ ಬರೆದಿದ್ದಾರೆ. ಇದನ್ನು ಹೆಣ್ಣಿನ 'ಒಳಗೊಳ್ಳುವ' ಶಕ್ತಿಯೆಂದೇ ನೋಡಬೇಕು. ಈ ದೃಷ್ಟಿಯಿಂದ ಹಂಪನಾ ಅವರ 'ಚಾರು ವಸಂತ' ಕೃತಿ ಇವರ ಸಖ್ಯಗೀತೆ.

ತುಂಬಾ ಹಿಂದೊಮ್ಮೆ ಇವರನ್ನು ಭೇಟಿಯಾಗಿದ್ದಾಗ, ಹೆಣ್ಣಿಗೆ ಯಾವುದೂ ಅಸಾಧ್ಯವಲ್ಲ, ನೋಡಿ , ನಾನು ಈಗ ತಾನೇ ಕಾಲೇಜಿಂದ ಬಂದಿದ್ದೀನಿ, ಒಳಗೆ ಅಡುಗೆಗೆ ಇಟ್ಟುಕೊಂಡೇ, ಇಲ್ಲಿ ಟೇಬಲ್ ಮೇಲೆ ಬರೀತಾನೂ ಇದ್ದೀನಿ ಅಂದಾಗ, 'ಇದೂ ಶೋಷಣೆಯೇ ಅಲ್ಲವೇ' ಅಂದಿದ್ದೆ. 'ನಿಜ, ಆದರೆ ಆರಂಭದಲ್ಲಿ ನಾವು ಹೆಣ್ಣು ಮಕ್ಕಳು ಇದನ್ನೆಲ್ಲ ದಾಟಿಕೊಂಡೇ ಹೋಗಬೇಕು, ಮುಂದೊಂದು ದಿನ ಕಾಲ ಬದಲಾದೀತು' ಎಂದದ್ದು ನೆನಪಾಗುತ್ತಿದೆ.

ಶಿಕ್ಷಣ ಪಡೆಯುವ ಹಂತದಿಂದ ಮಹಾರಾಣಿ ಕಾಲೇಜಿನ ಪ್ರಾಂಶುಪಾಲರಾಗುವ ತನಕದ ಅವರ ಪ್ರಯಾಣ ಹೋರಾಟದ್ದು, ಮಾತ್ರವಲ್ಲ; ಸಾರ್ಥಕತೆಯದೂ ಹೌದು. ಉದ್ಯೋಗಸ್ಥ ಮಹಿಳೆಯ ಅನಿವಾರ್ಯ ಸವಾಲುಗಳನ್ನು ಲೀಲಾಜಾಲವಾಗಿ ಎನ್ನುವಂತೆ ಎದುರಿಸುತ್ತಾ ಸಂಶೋಧನೆಯಲ್ಲಿ ತೊಡಗಿಸಿಕೊಂಡು, ಸಾಹಿತ್ಯದ ಇತರ ಪ್ರಕಾರಗಳಲ್ಲೂ ಬರವಣಿಗೆಯನ್ನು ಸಾತತ್ಯದಲ್ಲಿ ಉಳಿಸಿಕೊಂಡು ಬರುವುದು ಅವರಿಗೆ ಸಾಧ್ಯವಾಯಿತು. ಮೂಡಬಿದಿರೆಯಲ್ಲಿ 2003ರಲ್ಲಿ ನಡೆದ 71ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಹೆಗ್ಗಳಿಕೆಯೂ ಇವರದಾಗಿದೆ. ಇವರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಸಪ್ನ ಬುಕ್ ಹೌಸ್ ಪ್ರಕಟಿಸಿದೆ. ಕನ್ನಡದ ಮಟ್ಟಿಗೆ ಲೇಖಕಿಯೊಬ್ಬರ ಸಾಹಿತ್ಯದ ಹತ್ತು ಸಂಪುಟಗಳು ಪ್ರಕಟವಾಗಿರುವುದು ಬಹುಶಃ ಇವರೊಬ್ಬರದೇ ಎನ್ನಿಸುತ್ತದೆ. ಇವರ ಬಹುತೇಕ ಕೃತಿಗಳ ಶೀರ್ಷಿಕೆ 'ಬ'ಕಾರದಿಂದ ಶುರುವಾಗುತ್ತದೆ. ಇದಕ್ಕೆ ತಮ್ಮ ಗುರು ಹಾ ಮಾ ನಾಯಕರೇ ಸ್ಫೂರ್ತಿ ಎಂದು ಒಂದು ಕಡೆ ಹೇಳಿಕೊಂಡಿದ್ದಾರೆ. ಬಲಾಕ (ಬೆಳ್ಳಕ್ಕಿ) ಅವರ ಪ್ರಬಂಧ ಸಂಕಲನದ ಶೀರ್ಷಿಕೆ.

ಜೈನ ಸಾಹಿತ್ಯ ಮತ್ತು ಮಹಿಳೆ ಕಮಲಾ ಅವರ ಪ್ರಧಾನ ಆಸಕ್ತಿಗಳು. ಸಂಶೋಧನೆ ಮತ್ತು ವಿಮರ್ಶೆ ಎರಡೂ ಇವರ ಬರವಣಿಗೆಯ ಜೀವನದುದ್ದಕ್ಕೂ ಉಳಿದುಕೊಂಡು ಬಂದವು. ಜೈನಧರ್ಮದಲ್ಲಿ ಮಹಿಳೆಯರು ಪಡೆದ ಮಹತ್ವವನ್ನು ಕುರಿತು ಮತ್ತೆ ಮತ್ತೆ ಇವರು ಬರೆದಿದ್ದಾರೆ. ಜೈನಧರ್ಮವು ಪ್ರತಿಪಾದಿಸಿದ ಜೀವನ ಮೌಲ್ಯಗಳು ಇವತ್ತಿಗೆ ಪ್ರಸ್ತುತ, ಅವುಗಳಿಂದ ಸಮಕಾಲೀನ ಜಗತ್ತು ಕಲಿಯಲೇಬೇಕಾದ ಪಾಠಗಳಿವೆ ಎನ್ನುವುದು ಇವರ ಗಾಢ ನಂಬಿಕೆಯಾಗಿತ್ತು. ಸಾರ್ವಜನಿಕವಾಗಿಯೂ ಹೆಣ್ಣಿಗೆ ಅನ್ಯಾಯವಾದ ಸಂದರ್ಭಗಳಲ್ಲಿ ನಿರ್ಭಿಡೆಯಿಂದ ಇವರು ಪ್ರತಿಭಟಿಸಿದ ಅನೇಕ ಉದಾಹರಣೆಗಳಿವೆ.

ಒಂದು ಸಣ್ಣ ಉದಾಹರಣೆ ಕೊಡುವುದಾದರೆ, 'ಭಾರತ ಸಂವಿಧಾನಕ್ಕಿಂತ ನಾರಾಯಣಾಚಾರ್ಯ ದೊಡ್ಡವರೆ' ಎನ್ನುವ ಲೇಖನದಲ್ಲಿ ಅವರ ಜನಪರ ನಿಲುವುಗಳು ನಿಷ್ಠುರತೆಯಲ್ಲಿ, ಪ್ರಖರತೆಯಲ್ಲಿ ಪ್ರತಿಪಾದಿತವಾಗಿವೆ. ವಾಲ್ಮೀಕಿಯನ್ನು ಬ್ರಾಹ್ಮಣರ ಗುಂಪಿಗೆ ಸೇರಿಸುವ ರಾಜಕಾರಣವನ್ನು ಪ್ರತಿಭಟಿಸುತ್ತಾ ಸಂವಿಧಾನವೇ 'ಬೇಡ'ರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವಾಗ ಇವರು, ಅವರನ್ನು ಬ್ರಾಹ್ಮಣ ಜಾತಿಗೆ ಸೇರಿಸಿರುವುದರ ಹಿಂದಿನ ಹುನ್ನಾರವನ್ನು ಪ್ರಶ್ನಿಸುತ್ತಾರೆ.

ಜೊತೆಯ ಲೇಖಕಿಯರ ಏಳ್ಗೆಯಲ್ಲಿ ತಮ್ಮ ಏಳ್ಗೆಯನ್ನು ಕಾಣುವ ಅಪರೂಪದ ಗುಣವೊಂದಿತ್ತು ಇವರಲ್ಲಿ. ಯಾವ ಲೇಖಕಿಗೆ ಪ್ರಶಸ್ತಿ ಬಂದಾಗಲೂ ತಪ್ಪದೇ ಫೋನ್ ಮಾಡಿ ಅಭಿನಂದಿಸುತ್ತಿದ್ದರು. ಕೆಲವೊಮ್ಮೆ 'ಏನಮ್ಮ, ನೀನು ವಾರಕ್ಕೊಂದು ಪ್ರಶಸ್ತಿ ತೊಗೊಳ್ತಾ ಇದ್ದರೆ, ಎಷ್ಟೂಂತ ನಿನಗೆ ಅಭಿನಂದಿಸೋದು' ಎಂದು ರೇಗಿಸುತ್ತಾ, 'ಮನೆಗೆ ಬಾ ಒಳ್ಳೆ ಕಾಫಿನಾದ್ರೂ ಮಾಡಿಕೊಡ್ತೀನಿ' ಅನ್ನುತ್ತಿದ್ದರು.

ನಾಲ್ಕೈದು ವರ್ಷಗಳ ಕೆಳಗೆ ಒಮ್ಮೆ ಇದ್ದಕ್ಕಿದ್ದಂತೆ ಮಹಾರಾಣಿ ಕಾಲೇಜಿಗೆ ಬಂದರು. ಎಷ್ಟೆಲ್ಲಾ ಬದಲಾವಣೆ ಆಗಿದೆ ಅನ್ನುತ್ತಲೇ, 'ಆಶಾ ನಿನ್ನಿಂದ ಒಂದು ಸಹಾಯ ಆಗಬೇಕು' ಅಂದರು. 'ಏನು ಅಂದರೆ ನಮ್ಮಿಬ್ಬರನ್ನೂ ಜಗತ್ತಿನ ಆಯ್ದ ಆದರ್ಶ ಜೋಡಿ ಅಂತ ಮಿಕ್ಕ ಕೆಲವು ಜೋಡಿಗಳ ಜೊತೆ ಆರಿಸಿದ್ದಾರೆ. ಇದಕ್ಕಾಗಿ ಒಂದು ಸಾಕ್ಷ್ಯಚಿತ್ರ ಮಾಡ್ತಿದ್ದಾರೆ. ಅದಕ್ಕೇ ನಮ್ಮಿಬ್ಬರ ಶೂಟಿಂಗ್ ಇಲ್ಲೂ ಆಗಬೇಕು ಅಂತ ಬಂದಿದ್ದೀವಿ. ನಡುವೆ ನಾನು ಬೇರೆ ಸೀರೆ ಉಟ್ಕೋಬೇಕು, ಅದಕ್ಕೆ ನಿಮ್ಮ ಸ್ಟಾಫ್ ರೂಮ್ ಬೇಕು' ಎಂದರು. ಅವರ ಆಸಕ್ತಿ, ಉತ್ಸಾಹ ನೋಡಿ ಬೆರಗಾಗಿದ್ದೆ.

ಕಮಲಾ ಮೇಡಂ ಎಂದರೆ ಅಸೀಮ ಜೀವನ ಪ್ರೀತಿ ಮತ್ತು ಸ್ನೇಹಪರತೆ. ನಗುವಿಲ್ಲದ ಅವರ ಮುಖವನ್ನು ಯಾರೂ ನೋಡಿಲ್ಲ, ಅವರ ಕೊನೆಯ ನೋಟದಲ್ಲೂ ಇದ್ದದ್ದು ಅದೇ ನಗುಮುಖ. ❖

ಎಚ್‌ಡಿಕೆಗೆ ತೇಜಸ್ವಿ ನಾಯಕ್ ಆಪ್ತ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶ ಕೇಡರ್‌ನ ಐಎಎಸ್ ಅಧಿಕಾರಿ ಎಸ್. ತೇಜಸ್ವಿ ನಾಯಕ್ ಅವರನ್ನು ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಆಪ್ತ ಕಾರ್ಯದರ್ಶಿಯಾಗಿ (ಪಿ.ಎಸ್) ನೇಮಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯವರಾದ ನಾಯಕ್ ಅವರು ಭಾರೀ ಕೈಗಾರಿಕೆ ಇಲಾಖೆ ನೋಡಿಕೊಳ್ಳಲಿದ್ದಾರೆ. ಅವರು ಈ ಹಿಂದೆ ಕೃಷಿ ಸಚಿವ ಅರ್ಜುನ್ ಮುಂಡಾ ಅವರ ಆಪ್ತ ಕಾರ್ಯದರ್ಶಿಯಾಗಿದ್ದರು.

ಭಾರತೀಯ ಅರಣ್ಯ ಸೇವಾ ಅಧಿಕಾರಿ ತಾಕತ್ ಸಿಂಗ್ ರಣಾವತ್ ಅವರನ್ನು ಕುಮಾರಸ್ವಾಮಿ ಆಪ್ತ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಅವರು ಉಕ್ಕು ಇಲಾಖೆಯನ್ನು ನೋಡಿಕೊಳ್ಳಲಿದ್ದಾರೆ. ರಣಾವತ್ ಈ ಹಿಂದೆ ಶೋಭಾ ಕರಂದ್ಲಾಜೆ ಅವರು 'ಮೋದಿ-2 ಸರ್ಕಾರ'ದಲ್ಲಿ ಕೃಷಿ ಖಾತೆ ರಾಜ್ಯ ಸಚಿವರಾಗಿದ್ದಾಗ ಆಪ್ತ ಕಾರ್ಯದರ್ಶಿಯಾಗಿದ್ದರು.

ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ ಎಸ್. ಎಸ್. ನಕುಲ್ ಅವರನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಆಪ್ತ ಕಾರ್ಯದರ್ಶಿಯಾಗಿ ಮರುನೇಮಿಸಲಾಗಿದೆ ಮತ್ತು ಅವರು ಹಣಕಾಸು ಸಚಿವಾಲಯ ನೋಡಿಕೊಳ್ಳುತ್ತಾರೆ.

ಕರ್ನಾಟಕ ಕೇಡರ್‌ನ ಮತ್ತೊಬ್ಬ ಐಎಎಸ್ ಅಧಿಕಾರಿ ಅನಿರುದ್ಧ್ ಶ್ರವಣ್ ಕೂಡ ನಿರ್ಮಲಾ ಸೀತಾರಾಮನ್ ಅವರ ಪಿ.ಎಸ್. ಆಗಿ ಮರು ನೇಮಕಗೊಂಡಿದ್ದಾರೆ. ಅವರು ಸಚಿವರ ಕಚೇರಿಯಲ್ಲಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ನೋಡಿಕೊಳ್ಳುತ್ತಾರೆ. ಇಬ್ಬರೂ ಅಧಿಕಾರಿಗಳು 'ಮೋದಿ-2 ಸರ್ಕಾರ'ದಲ್ಲಿ ನಿರ್ಮಲಾ ಅವರ ಪಿ.ಎಸ್.ಗಳಾಗಿದ್ದರು.

'ಎಚ್‌ಎಂಟಿ ಪುನಃಶ್ಚೇತನಕ್ಕೆ ಪ್ರಸ್ತಾವ ಸಲ್ಲಿಸಲು ಸೂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಮಶೀನ್ ಆ್ಯಂಡ್ ಟೂಲ್ಸ್ (ಎಚ್‌ಎಂಟಿ) ಕಂಪನಿಯ ಪುನಃಶ್ಚೇತನ ಮತ್ತು ಚಟುವಟಿಕೆಗಳ ವಿಸ್ತರಣೆ ಕುರಿತು ಪ್ರಸ್ತಾವ ಸಲ್ಲಿಸುವಂತೆ ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಅಧಿಕಾರಿಗಳಿಗೆ ಶನಿವಾರ ಸೂಚಿಸಿದರು.

ಎಚ್‌ಎಂಟಿ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಕೊಹ್ಲಿ ಮತ್ತು ಇತರ ಅಧಿಕಾರಿಗಳ ಜತೆ ಸಭೆ ನಡೆಸಿದ ಸಚಿವರು, ಎಚ್‌ಎಂಟಿ ಪುನಶ್ಚೇತನದ ಅವಕಾಶಗಳ ಕುರಿತು ಚರ್ಚಿಸಿದರು. ಕಂಪನಿಯ ವಹಿವಾಟು, ನಿವ್ವಳ ಲಾಭ, ಉತ್ಪಾದನೆ ಮತ್ತು ಇತರ ಚಟುವಟಿಕೆಗಳ ಕುರಿತು ಅಧಿಕಾರಿಗಳು ಮಾಹಿತಿ ಒದಗಿಸಿದರು. ಎಚ್‌ಎಂಟಿಯ ಉತ್ಪಾದನಾ ಚಟುವಟಿಕೆಗಳ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ವಿವರ ನೀಡಿದರು.

'ಒಂದು ಕಾಲಘಟ್ಟದಲ್ಲಿ ವೈಭವಯುತವಾಗಿ ಮೆರೆದಿದ್ದ ಕಂಪನಿ ಈಗ ದುಸ್ಥಿತಿಗೆ ತಲುಪಿದೆ. ಅದನ್ನು ಮತ್ತೆ ಸದೃಢಗೊಳಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕಿದೆ. ಎಚ್‌ಎಂಟಿ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

'ಆತ್ಮನಿರ್ಭರ ಭಾರತದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಕೆಲಸ ಮಾಡುತ್ತಿದ್ದಾರೆ. ಅವರ ಚಿಂತನೆಯ ಹಾದಿಯಲ್ಲೇ ಎಚ್‌ಎಂಟಿ ಕಂಪನಿಯನ್ನೂ ಪುನಶ್ಚೇತನಗೊಳಿಸಲು ಕೇಂದ್ರ ಸರ್ಕಾರ ಅಗತ್ಯ ನೆರವು ಒದಗಿಸುತ್ತದೆ' ಎಂದು ಅಧಿಕಾರಿಳಿಗೆ ಭರವಸೆ ನೀಡಿದರು.

ಎಚ್‌ಎಂಟಿ ರಕ್ಷಣಾ ಇಲಾಖೆ ಮತ್ತು ಬಾಹ್ಯಾಕಾಶ ಸಂಶೋಧನಾ ಯೋಜನೆಗಳಿಗೆ ಪರಿಕರಗಳನ್ನು ತಯಾರಿಸಿ ಕೊಡುತ್ತಿದೆ. ದೇಶದ ಉದ್ದಗಲಕ್ಕೆ ಕಂಪನಿಯ ಉತ್ಪಾದನಾ ಘಟಕಗಳಿವೆ. ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಕಂಪನಿಯ ಕ್ಷಮತೆ ಹೆಚ್ಚಿಸಬೇಕು ಎಂದು ಸೂಚಿಸಿದರು.

ಕಂಪನಿ ಅನುಭವಿಸುತ್ತಿರುವ ನಷ್ಟ, ನ್ಯಾಯಾಲಯದಲ್ಲಿ ಬಾಕಿ ಇರುವ ವ್ಯಾಜ್ಯಗಳು ಸೇರಿದಂತೆ ಸಮಸ್ಯೆಗಳ ವಿವರವನ್ನೂ ರಾಜೇಶ್ ಕೊಹ್ಲಿ ನೀಡಿದರು. ಸಮಸ್ಯೆಗಳ ಇತ್ಯರ್ಥಕ್ಕೆ ನೆರವು ನೀಡುವುದಾಗಿ ಸಚಿವರು ಭರವಸೆ ನೀಡಿದರು. ಕೋಲಾರ ಸಂಸದ ಮಲ್ಲೇಶ್ ಬಾಬು, ಕಂಪನಿಯ ನಿರ್ದೇಶಕಿ ಸಮೀನಾ ಕೊಹ್ಲಿ ಮತ್ತು ಅಧಿಕಾರಿಗಳು ಸಭೆಯಲ್ಲಿದ್ದರು.

ಮೂಡುಬಿದಿರೆಯಲ್ಲಿ ನಡೆದ 71ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿ ಕಮಲಾ ಹಂಪನಾ ಅವರು ಭಾಷಣ ಮಾಡಿದ ಕ್ಷಣ.
—ಪ್ರಜಾವಾಣಿ ಸಂಗ್ರಹ ಚಿತ್ರ

ಕಮಲಾ ಹಂಪನಾ ಇನ್ನಿಲ್ಲ

ಒಂದನೇ ಪುಟದಿಂದ...

ರಾಜಾಜಿನಗರದಲ್ಲಿರುವ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಬೆಳಿಗ್ಗೆ ಇರಿಸಿ, ಬಳಿಕ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ಬಯಲು ರಂಗಮಂದಿರದಲ್ಲಿ ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಾಹಿತ್ಯ, ರಂಗಭೂಮಿ, ರಾಜಕೀಯ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಅಂತಿಮ ದರ್ಶನ ಪಡೆದರು.

ಕಮಲಾ ಅವರ ಸ್ವ ಇಚ್ಛೆಯಂತೆ ಅವರ ಕಣ್ಣು ಮತ್ತು ದೇಹವನ್ನು ರಾಮಯ್ಯ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಯಿತು.

1935ರ ಅ.28ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ ಅವರು, ಚಳ್ಳಕೆರೆ ಸೇರಿ ವಿವಿಧೆಡೆ ಪ್ರಾಥಮಿಕ ಶಿಕ್ಷಣ ಪಡೆದಿದ್ದರು. ತುಮಕೂರಿನಲ್ಲಿ ಪ್ರೌಢ ಶಿಕ್ಷಣ ಹಾಗೂ ಮೈಸೂರಿನಲ್ಲಿ ಕಾಲೇಜು ವ್ಯಾಸಂಗ ಮಾಡಿದರು. ಬಿ.ಎ. ಆನರ್ಸ್ ಪದವಿ ಪಡೆದ ಅವರು, 1958ರಲ್ಲಿ ಕನ್ನಡ ಅಧ್ಯಾಪಕಿಯಾಗಿ ವೃತ್ತಿ ಆರಂಭಿಸಿದ್ದರು. ಬೆಂಗಳೂರು ಮತ್ತು ಮೈಸೂರು ಮಹಾರಾಣಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಬೆಂಗಳೂರಿನ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಬಳಿಕ ಮೈಸೂರು ವಿಶ್ವವಿದ್ಯಾಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನದ ಪ್ರಾಧ್ಯಾಪಕರು, ಅಧ್ಯಕ್ಷರು ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಜೈನಧರ್ಮ ಹಳಗನ್ನಡ ಗ್ರಂಥ ಸಂಪಾದನೆ, ಜೀವನ ಚರಿತ್ರೆ, ಕಥೆ, ಕವನ, ವ್ಯಕ್ತಿ ಚಿತ್ರ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೊಡುಗೆ ನೀಡಿರುವ ಅವರು, 48 ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಕ್ಷೇತ್ರದ ಸಾಧನೆಗೆ 'ರಾಜ್ಯೋತ್ಸವ ಪ್ರಶಸ್ತಿ', 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಬಾಬಾ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ', 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ' ಸೇರಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೂಡುಬಿದಿರೆಯಲ್ಲಿ ನಡೆದ 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಎಸ್ಕಾಂಗಳ ಸಿಬ್ಬಂದಿಯೂ ಅವಘಡಕ್ಕೆ ಈಡು ● ಜಾಗೃತಿ ಅಗತ್ಯ

ವಿದ್ಯುತ್ ಅವಘಡ: 473 ಜನ ಸಾವು

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರಾಜ್ಯದಲ್ಲಿ ಒಂದು ವರ್ಷದ ಅವಧಿಯಲ್ಲಿ ವಿದ್ಯುತ್ ಅವಘಡದಿಂದ 473 ಜನರು ಜೀವ ಕಳೆದುಕೊಂಡಿದ್ದಾರೆ. ಅದರಲ್ಲಿ ಎಸ್ಕಾಂಗಳ 35 ಸಿಬ್ಬಂದಿಯೂ ಸೇರಿದ್ದಾರೆ. 476 ಪ್ರಾಣಿಗಳು ಪ್ರಾಣಬಿಟ್ಟಿವೆ. ವಿದ್ಯುತ್‌ನ ಅಪಾಯದ ಬಗೆಗಿನ ಜನರ ನಿರ್ಲಕ್ಷ್ಯ ಕೂಡ ಪ್ರಾಣ ಹಾನಿಗೆ ಕಾರಣವಾಗಿದೆ.

ವಿದ್ಯುತ್ ಪ್ರವಹಿಸುವ ವಾಹಕಗಳ, ಉಪಕರಣಗಳ ಸ್ಪರ್ಶದಿಂದಾಗಿ ಜೀವ ಕಳೆದುಕೊಂಡವರ ಸಂಖ್ಯೆಯೇ (256) ಅಧಿಕವಾಗಿದ್ದರೆ, ನೆಲಕ್ಕೆ ತಾಕಿದ ತಂತಿಗಳು ತಾಗಿ ಜೀವ ಕಳೆದುಕೊಂಡ ಪ್ರಾಣಿಗಳ ಸಂಖ್ಯೆ (194) ಜಾಸ್ತಿ ಇದೆ.

ವಿದ್ಯುತ್ ಕಂಬಗಳ ನಡುವೆ ಅಂತರ ಹೆಚ್ಚಾಗಿ ವಿದ್ಯುತ್ ತಂತಿಗಳು ಒಂದಕ್ಕೊಂದು ತಾಗಿ ಶಾರ್ಟ್ ಸರ್ಕೀಟ್‌ನಿಂದಾಗಿ ತುಂಡಾಗಿ ಬಿದ್ದಿರುವ ಅಥವಾ ಅತಿ ಒತ್ತಡ ತಾಳಲಾರದೇ ತಂತಿಗಳು ತುಂಡಾಗಿ ಬಿದ್ದಿರುವ ತಂತಿಗಳ ಸ್ಪರ್ಶ ಅಪಾಯವನ್ನುಂಟು ಮಾಡಿದೆ. ವಿದ್ಯುತ್ ಮಾರ್ಗಗಳಿಗೆ ಅಳವಡಿಸಿರುವ ಇನ್ಸುಲೇಟರ್‌ಗಳು ಒಡೆದು ಹೋಗಿದ್ದ ಹಾಗೂ ಕಿಲಾಡಿಗಳು ಕಲ್ಲಿನಿಂದ ಹೊಡೆದಿದ್ದರಿಂದಾಗಿ ತಂತಿಗಳು ತುಂಡಾಗಿವೆ. ಹಕ್ಕಿಗಳು ವಿದ್ಯುತ್ ವಾಹಕಗಳ ನಡುವೆ ಬಂದಾಗ ಸ್ಪಾರ್ಕ್ ಆಗಿ ವಾಹಕಗಳು ತುಂಡಾಗಿವೆ. ರಸ್ತೆಗೆ ಅಡ್ಡಲಾಗಿ ಹಾದು ಹೋಗಿರುವ ವಿದ್ಯುತ್ ವಾಹಕಗಳಿಗೆ ವಾಹನಗಳು ತಗುಲಿ ತಂತಿಗಳು ತುಂಡಾಗಿವೆ. ಜಮೀನಿನಲ್ಲಿ ಬೆಳೆದ ಬೆಳೆಗಳು ವಾಹಕಗಳಿಗೆ ಉಜ್ಜಿ ತುಂಡಾಗಿವೆ. ಗಾಳಿಯಿಂದ ಒಂದಕ್ಕೊಂದು ತಾಗಿ, ಕೊಂಬೆಗಳು ಬಿದ್ದು ತುಂಡಾಗಿವೆ.

ಈ ರೀತಿ ತುಂಡಾಗಿ ಬಿದ್ದಿದ್ದ ವಿದ್ಯುತ್ ವಾಹಕಗಳನ್ನು ಸ್ಪರ್ಶಿಸಿದ್ದರಿಂದ 30 ಜನರು ಮೃತಪಟ್ಟಿದ್ದರೆ, 7 ಮಂದಿ ಗಾಯಗೊಂಡಿದ್ದರು. 140 ಪ್ರಾಣಿಗಳು ಸತ್ತು ಹೋಗಿದ್ದವು. ಮುರಿದು ವಿದ್ಯುತ್ ತಂತಿ ಮೇಲೆ ಬಿದ್ದು ನೇತಾಡುತ್ತಿದ್ದ ಮರದ ಕೊಂಬೆಗಳ ಸ್ಪರ್ಶದಿಂದ ನಾಲ್ವರು ಮನುಷ್ಯರು, 13 ಪ್ರಾಣಿಗಳು ಜೀವ ಕಳೆದುಕೊಳ್ಳುವಂತಾಗಿತ್ತು.

ಗ್ರಾಹಕರ ಸ್ಥಾವರಗಳಲ್ಲಿರುವ ವಿದ್ಯುತ್ ವಯರಿಂಗ್ ಮತ್ತು ಉಪಕರಣಗಳಲ್ಲಿನ ನ್ಯೂನತೆ ಮಾನವನ ಪ್ರಾಣಹಾನಿಗೆ (30) ಕಾರಣವಾಗಿದೆ. ವಿದ್ಯುತ್ ಕಂಬಗಳು ವಾಲುವುದು/ಮುರಿದು ಬೀಳುವುದು, ಅನಧಿಕೃತ ವಿದ್ಯುತ್ ಬೇಲಿ, ವಿದ್ಯುತ್ ಮಾಪಕದ ಸಮಸ್ಯೆಗಳು ಕೂಡ ಅವಘಡಕ್ಕೆ ಕಾರಣವಾಗಿವೆ ಎಂದು ಇಂಧನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಎಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಕೂಡ ಅವಘಡಕ್ಕೆ ಕಾರಣವಾಗಿದೆ. ಕಂಬ ಹತ್ತಿ ವಿದ್ಯುತ್ ತಂತಿಗಳ ದುರಸ್ತಿಗೊಳಿಸುವಾಗ ಲೈನ್‌ಮನ್‌ಗಳೇ ಮೃತಪಟ್ಟಿದ್ದಾರೆ. ಇಲಾಖೆಯೂ ಜಾಗೃತಗೊಳ್ಳಬೇಕು. ಜನರನ್ನೂ ಜಾಗೃತಿಗೊಳಿಸಬೇಕು' ಎಂದು ಗ್ರಾಹಕ ಯೋಗೀಶ್ ಕಾಂಚನ ಒತ್ತಾಯಿಸಿದರು.

ಅಪಾಯಕ್ಕೆ ಆಹ್ವಾನ ನೀಡುವ ವಿದ್ಯುತ್ ಉಪಕರಣ (ಸಾಂದರ್ಭಿಕ ಚಿತ್ರ)



ಜಾಗೃತಿ ಸಪ್ತಾಹ

ವಿದ್ಯುತ್ ಅವಘಡದಿಂದ ಸಾವುನೋವುಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಿರುವುದನ್ನು ಕಂಡು ಭಾರತ ಸರ್ಕಾರವು ವಿದ್ಯುತ್ ಸುರಕ್ಷತಾ ಸಪ್ತಾಹವನ್ನು ಆಚರಿಸಲು 2019ರಲ್ಲಿ ತೀರ್ಮಾನಿಸಿತು. ರಾಜ್ಯದಲ್ಲಿ ಕಳೆದ ವರ್ಷ ಸಪ್ತಾಹ ಆಚರಣೆ ಜಾರಿಗೆ ಬಂತು. ಈ ವರ್ಷ ಜೂನ್ 26ರಿಂದ ಜುಲೈ 1ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ವಿದ್ಯುತ್ ನಿರೀಕ್ಷಕಿ ಬಿ.ವಿ. ಶಶಿಕಲಾ ಅವರು ತಿಳಿಸಿದರು.

ಜನರಲ್ಲಿ ಜಾಗೃತಿ ಮೂಡಿಸುತ್ತಿರುವುದು ಪರಿಣಾಮವನ್ನು ಬೀರುತ್ತಿದೆ. 2022-23ನೇ ಸಾಲಿನಲ್ಲಿ 2,147 ಅವಘಡಗಳು ಉಂಟಾಗಿದ್ದರೆ, 2023-24ನೇ ಸಾಲಿನಲ್ಲಿ 262 ಪ್ರಕರಣಗಳು ಕಡಿಮೆಯಾಗಿದ್ದು, 1,885 ಅವಘಡಗಳಾಗಿವೆ ಎಂದು ಅವರು ವಿವರ ನೀಡಿದರು.

ಸರ್ಕಾರಿ ಜಮೀನು ಅಕ್ರಮ ಪರಭಾರೆ 10 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಡ್ಯ: ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನು ಅಕ್ರಮ ಪರಭಾರೆಗೆ ಸಂಬಂಧಿಸಿದಂತೆ ತಹಶೀಲ್ದಾರ್ ಸೇರಿ 10 ಮಂದಿ ವಿರುದ್ಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೃತ ವ್ಯಕ್ತಿ ಹೆಸರಿನಲ್ಲಿ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಮಂಡ್ಯ ಗ್ರಾಮದ ಸರ್ವೆ ನಂ.174/8ರಲ್ಲಿರುವ 3 ಗುಂಟೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಪರಭಾರೆ ಮಾಡಿ ಭೂಗಳ್ಳರಿಗೆ ಅಕ್ರಮ ಖಾತೆ ಮಾಡಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ ದೂರು ನೀಡಿದ್ದರು. ಇದನ್ನ ಆಧರಿಸಿ ಮಂಡ್ಯ ತಹಶೀಲ್ದಾರ್ ಆಗಿದ್ದ ಕುಂಞ ಅಹಮದ್, ಉಪ ನೋಂದಣಾಧಿಕಾರಿಯಾಗಿದ್ದ ಶಿವಲಿಂಗೇಗೌಡ, ವಿಶೇಷ ಭೂಸ್ವಾಧೀನಾಧಿಕಾರಿ ಆಗಿದ್ದ ಹೋಟೆಲ್ ಶಿವಪ್ಪ, ಕೆ.ಮಧುಸೂದನ್ ಸೇರಿ 10 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ರವೀಂದ್ರ ಅವರು ಭೂಸ್ವಾಧೀನವಾಗಿರುವ ಜಮೀನನ್ನು ಸತ್ತ ವ್ಯಕ್ತಿಯ ಹೆಸರಿನಲ್ಲಿ ಆಧಾರ್ ಸೃಷ್ಟಿಸಿ ಅಕ್ರಮವಾಗಿ ಪರಭಾರೆ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿ ಮತ್ತು ಎಸ್ಪಿಗೆ ದೂರು ಸಲ್ಲಿಸಿದ್ದರು. ಈ ದೂರು ಆಧರಿಸಿ ಉಪವಿಭಾಗಾಧಿಕಾರಿ, ಭೂ ದಾಖಲೆಗಳ ಉಪನಿರ್ದೇಶಕರು ಸಲ್ಲಿಸಿರುವ ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಅಕ್ರಮವಾಗಿ ಖಾತೆ ಮಾಡಿರುವುದನ್ನು ಪತ್ತೆ ಹಚ್ಚಿದ್ದಾರೆ. ಇದನ್ನು ಆಧರಿಸಿ ಕ್ರಮ ಜರುಗಿಸಲಾಗಿದೆ.

ತಪ್ಪಿತಸ್ಥ ಅಧಿಕಾರಿಗಳು, ನೌಕರರ ವಿರುದ್ಧ ಸಿಸಿಎ ನಿಯಮಗಳನುಸಾರ ಶಿಸ್ತು ಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿ ಸಿದ್ಧಪಡಿಸಿ ಕಳುಹಿಸುವಂತೆ ಜಿಲ್ಲಾಧಿಕಾರಿಯು ಉಪವಿಭಾಗಾಧಿಕಾರಿಗೆ ಸೂಚಿಸಿದ್ದರು. ಅದರಂತೆ ಆರೋಪಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಉತ್ತರ ಪ್ರದೇಶ ಲಘುವಾಗಿ ಪರಿಗಣಿಸಬಾರದಿತ್ತು'

ನವದೆಹಲಿ (ಪಿಟಿಐ): ತಮ್ಮ ಮತದಾನೋತ್ತರ ಸಮೀಕ್ಷೆ ತಪ್ಪಾಗಲು ತಾವು ಕೊನೆಯ ಮೂರು ಹಂತದ ಮತದಾನದಲ್ಲಿ ಉತ್ತರ ಪ್ರದೇಶವನ್ನು ಲಘುವಾಗಿ ಪರಿಗಣಿಸಿದ್ದೇ ಕಾರಣ ಎಂದು 'ಆ್ಯಕ್ಸಿಸ್ ಮೈ ಇಂಡಿಯಾ' ಮುಖ್ಯಸ್ಥ ಪ್ರದೀಪ್ ಗುಪ್ತಾ ಹೇಳಿದ್ದಾರೆ.

'ಆ್ಯಕ್ಸಿಸ್ ಮೈ ಇಂಡಿಯಾ' ತನ್ನ ಸಮೀಕ್ಷೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವು ಲೋಕಸಭಾ ಚುನಾವಣೆಯಲ್ಲಿ 361-400 ಸ್ಥಾನಗಳನ್ನು ಗಳಿಸಲಿದೆ ಎಂದು ಭವಿಷ್ಯ ನುಡಿದಿತ್ತು. 80 ಕ್ಷೇತ್ರಗಳಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ 67 ಸ್ಥಾನಗಳು ಬರುತ್ತವೆ ಎಂದು ಹೇಳಿತ್ತು. ಆದರೆ, ಲೋಕಸಭಾ ಚುನಾವಣೆಯ ಫಲಿತಾಂಶದಲ್ಲಿ ಬಿಜೆಪಿಗೆ ಸಿಕ್ಕಿದ್ದು ಕೇವಲ 240 ಸ್ಥಾನ. ನಿರ್ಣಾಯಕ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಅದು ಗಳಿಸಿದ್ದು ಕೇವಲ 33 ಸ್ಥಾನ ಮಾತ್ರ. ಸಂಸ್ಥೆಯ ಮತದಾನೋತ್ತರ ಸಮೀಕ್ಷೆಯ ಮಾರ್ಗಗಳು ತಪ್ಪಾಗಿಲ್ಲ. ನಿರ್ಣಾಯಕ ರಾಜ್ಯಗಳಿಗೆ ಸಂಪನ್ಮೂಲಗಳನ್ನು ವಿನಿಯೋಗಿಸುವುದರಲ್ಲಿಯೇ ತಪ್ಪಾಗಿದೆ' ಎಂದರು.

ಕೇರಳ: ಕೆಲವೆಡೆ ಭಾರಿ ಮಳೆ ಮುನ್ಸೂಚನೆ

ತಿರುವನಂತಪುರ(ಪಿಟಿಐ): ಕೇರಳದ ಕೆಲ ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಿರುವ ಭಾರತೀಯ ಹವಾಮಾನ ಇಲಾಖೆ, ಭಾನುವಾರ ಭಾರಿ ಮಳೆಯಾಗಲಿದೆ ಎಂದು ತಿಳಿಸಿದೆ.

ಮಲಪ್ಪುರಂ, ಕೋಯಿಕ್ಕೋಡ್, ವಯನಾಡ್ ಹಾಗೂ ಕಣ್ಣೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಇಡುಕ್ಕಿ, ಎರ್ನಾಕುಲಂ, ತ್ರಿಶ್ಶೂರ್, ಪಾಲಕ್ಕಾಡ್ ಹಾಗೂ ಕಾಸರಗೋಡು ಜಿಲ್ಲೆಗಳಿಗೆ ಭಾನುವಾರ ಆರೆಂಜ್ ಅಲರ್ಟ್ ಘೋಷಿಸಿದೆ.

ಇತರ ಕೆಲ ಜಿಲ್ಲೆಗಳಿಗೆ ಹವಾಮಾನ ಇಲಾಖೆಯು ಎರಡು ದಿನಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಿದೆ.

'ರೆಡ್ ಅಲರ್ಟ್' ಎಂಬುದು 24 ಗಂಟೆಗಳ ಅವಧಿಯಲ್ಲಿ 20 ಸೆಂ.ಮೀ.ಗೂ ಅಧಿಕ ಮಳೆಯಾಗುವುದನ್ನು ಸೂಚಿಸುತ್ತದೆ.

ಲೆಕ್ಕಾಧಿಕಾರಿಯಿಂದಲೇ ನಿಗಮದ ವ್ಯವಸ್ಥಾಪಕರ ವಿರುದ್ಧ ದೂರು

ತಾಂಡಾ ಅಭಿವೃದ್ಧಿ ನಿಗಮ; ಅಕ್ರಮದ ಘಾಟು

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಅಧೀನದ ತಾಂಡಾ ಅಭಿವೃದ್ಧಿ ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರೇ ಅಧಿಕಾರ ದುರ್ಬಳಕೆ ಮಾಡಿಕೊಂಡು ಹಣಕಾಸು ಅಕ್ರಮಗಳನ್ನು ನಡೆಸಿದ್ದಾರೆ ಎಂದು ನಿಗಮದ ಹಿಂದಿನ ಲೆಕ್ಕಾಧಿಕಾರಿಯೇ ಆಕ್ಷೇಪ ಎತ್ತಿದ್ದಾರೆ. ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆದು ಆರು ತಿಂಗಳು ಕಳೆದರೂ ಯಾವುದೇ ಕ್ರಮವಾಗಿಲ್ಲ.

ತಾಂಡಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಲ್. ಶಿವಶಂಕರ ನಾಯ್ಕ್ ಸರ್ಕಾರಿ ಅನುದಾನ ದುರ್ಬಳಕೆ, ಕಾಮಗಾರಿಗಳ ಅನುಮೋದನೆಯಲ್ಲಿ ಅಕ್ರಮ, ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ವಿತರಿಸದೇ ಅಕ್ರಮ ಎಸಗಿದ್ದಾರೆ ಎಂದು ಆರೋಪಿಸಿ ನಿಗಮದ ಲೆಕ್ಕಾಧಿಕಾರಿ ಸುರೇಶ್ ನಾಯ್ಕ್ 2011ರ ನವೆಂಬರ್ 23ರಂದು ಪತ್ರ ಬರೆದಿದ್ದರು. ವ್ಯವಸ್ಥಾಪಕ ನಿರ್ದೇಶಕರಿಗೇ ದೂರು ಪತ್ರವನ್ನು ಸಲ್ಲಿಸಿದ್ದ ಲೆಕ್ಕಾಧಿಕಾರಿ, ಅದರ ಪ್ರತಿಯನ್ನು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಮತ್ತು ಪ್ರಧಾನ ಕಾರ್ಯದರ್ಶಿಯವರ ಕಚೇರಿಗೆ ರವಾನಿಸಿದ್ದರು.

ಶೌಚಾಲಯಕ್ಕೆ ತುಂಡು ಗುತ್ತಿಗೆ: ಸಂತ ಸೇವಾಲಾಲ್ ಜಯಂತಿ ಆಚರಣೆಯಲ್ಲಿ ಜೈವಿಕ ಶೌಚಾಲಯಗಳ ಬಳಕೆಗೆ ₹ 1.5 ಕೋಟಿ ವೆಚ್ಚ ಮಾಡಲಾಗಿತ್ತು. ಈ ಸೇವೆ ಪಡೆಯಲು ಟೆಂಡರ್ ಆಹ್ವಾನಿಸಿರಲಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ (ಕೆಟಿಪಿಪಿ) ಸೆಕ್ಷನ್ 4-ಜಿ ಅಡಿ ವಿನಾಯ್ತಿಯನ್ನೂ ಪಡೆಯದೆ ಬಿಲ್‌ಗಳನ್ನು ವಿಭಜಿಸಿ (ತುಂಡು ಗುತ್ತಿಗೆ) ಪಾವತಿಸುವ ಮೂಲಕ ವ್ಯವಸ್ಥಾಪಕ ನಿರ್ದೇಶಕರು ಅಕ್ರಮ ಎಸಗಿದ್ದಾರೆ ಎಂಬ ಆರೋಪ ಪತ್ರದಲ್ಲಿದೆ.

ಲೆಕ್ಕಪರಿಶೋಧನೆಯಲ್ಲೂ ಅಕ್ರಮ: ಕಡಿಮೆ ವಹಿವಾಟು ನಡೆಸುವ ನಿಗಮವಾಗಿದ್ದರೂ ವಲಯ ಕಚೇರಿಗಳ ಲೆಕ್ಕಪರಿಶೋಧನೆ ಹೆಸರಿನಲ್ಲಿ ₹ 1 ಕೋಟಿ ಪಾವತಿಸಲಾಗಿದೆ. ಯಾವುದೇ ವಲಯ ಕಚೇರಿಯಿಂದಲೂ ಲೆಕ್ಕಪರಿಶೋಧನಾ ವರದಿ ಸಲ್ಲಿಕೆಯಾಗಿಲ್ಲ. ಲೆಕ್ಕಪರಿಶೋಧನಾ ವರದಿ ಕುರಿತು ಮಾಹಿತಿ ಕೇಳಿದರೆ ಕರ್ತವ್ಯದಿಂದ ಬಿಡುಗಡೆ ಮಾಡುವುದಾಗಿ ಸಂಬಂಧಿಸಿದ ಶಾಖೆಯ ನೌಕರ ಪ್ರಜ್ವಲ್ ಎಂಬುವವರಿಗೆ ವ್ಯವಸ್ಥಾಪಕ ನಿರ್ದೇಶಕರು ಬೆದರಿಸಿರುತ್ತಾರೆ ಎಂದೂ ಲೆಕ್ಕಾಧಿಕಾರಿ ದೂರಿದ್ದರು.

ಕಸೂತಿ ತರಬೇತಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರವು ಒದಗಿಸಿದ್ದ ₹2 ಕೋಟಿ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಲಾಗಿದೆ. ಆದರೆ, ಕಸೂತಿ ತರಬೇತಿ ಕಾರ್ಯಕ್ರಮಕ್ಕೆ ಆ ಅನುದಾನವನ್ನು ಬಳಸಲಾಗಿದೆ ಎಂಬ ತಪ್ಪು ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು ಎಂಬ ಉಲ್ಲೇಖವೂ ಇದೆ.

ಕಾಮಗಾರಿಗಳಲ್ಲೂ ಅವ್ಯವಹಾರ: ನಿಗಮದ ವತಿಯಿಂದ ಕೈಗೆತ್ತಿಕೊಂಡ ಕಾಮಗಾರಿಗಳ ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಾಗ ನಿಯಮ ಪಾಲಿಸಿಲ್ಲ. ಲೆಕ್ಕಾಧಿಕಾರಿಯನ್ನು ಹೊರಗಿಟ್ಟು ಕಾರ್ಯನಿರ್ವಾಹಕ ಎಂಜಿನಿಯರ್ ಮೂಲಕ ಅನುಮೋದನೆ ಪಡೆಯಲಾಗಿದೆ. ಹಲವು ವರ್ಷಗಳಿಂದ ಅಪೂರ್ಣ ಸ್ಥಿತಿಯಲ್ಲಿರುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿಲ್ಲ. ಅನುದಾನ ಲಭ್ಯವಿಲ್ಲದಿದ್ದರೂ ಹೊ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ ಎಂಬ ಆರೋಪವೂ ಇದೆ.

ಕನ್ನಿಂಗ್ ಹ್ಯಾಂ ರಸ್ತೆಯಲ್ಲಿದ್ದ ನಿಗಮದ ಕಚೇರಿಯನ್ನು ಬಂಜಾರ ಭವನಕ್ಕೆ ಸ್ಥಳಾಂತರ ಮಾಡುವಾಗಲೂ ಟೆಂಡರ್ ನಡೆಸದೇ ಬೃಹತ್ ಮೊತ್ತದ ಕಾಮಗಾರಿ ಕೈಗೊಂಡಿರುವುದರಲ್ಲೂ ನಿಯಮ ಉಲ್ಲಂಘನೆ ನಡೆದಿದೆ ಎಂದು ಲೆಕ್ಕಾಧಿಕಾರಿ ಆರೋಪಿಸಿದ್ದರು.

ಫಲಾನುಭವಿಗಳಿಗೆ ಹಣ ಬಿಡುಗಡೆಗೆ ನಿರ್ಲಕ್ಷ್ಯ

2021-22 ಮತ್ತು 2022-23ನೇ ಸಾಲಿನ ನೇರ ಸಾಲ ಯೋಜನೆ ಹಾಗೂ ಉದ್ಯಮಶೀಲತಾ ಯೋಜನೆಗಳ ಫಲಾನುಭವಿಗಳಿಗೆ ಹಣ ಪಾವತಿಸುವ ಕುರಿತು ಹಲವು ಬಾರಿ ಚರ್ಚಿಸಿದ್ದರೂ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಕ್ರಮ ವಹಿಸಿಲ್ಲ. ವಿಳಂಬ ಧೋರಣೆಯಿಂದಾಗಿ ಯೋಜನೆಯ ನೆರವು ಫಲಾನುಭವಿಗಳನ್ನು ತಲುಪದೇ ಬಾಕಿ ಉಳಿದಿದೆ ಎಂದು ಲೆಕ್ಕಾಧಿಕಾರಿ ಸುರೇಶ್ ನಾಯ್ಕ್ ಅವರು ದೂರಿದ್ದಾರೆ.

'ಪತ್ರವನ್ನು ನೋಡಿಯೇ ಇಲ್ಲ'

'ಸುರೇಶ್ ನಾಯ್ಕ್ ಅವರು ಮೂರು ತಿಂಗಳ ಅವಧಿಗೆ ತಾಂಡಾ ಅಭಿವೃದ್ಧಿ ನಿಗಮದಲ್ಲಿ ಲೆಕ್ಕಾಧಿಕಾರಿ ಹುದ್ದೆಯಲ್ಲಿದ್ದರು. ಅವರು ನನ್ನ ವಿರುದ್ಧ ಆರೋಪ ಮಾಡಿರುವ ದೂರಿನ ಪತ್ರವನ್ನು ನಾನು ನೋಡಿಯೇ ಇಲ್ಲ' ಎಂದು ತಾಂಡಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ ನಾಯ್ಕ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ತಪ್ಪು ಗ್ರಹಿಕೆಯಿಂದ ನನ್ನ ವಿರುದ್ಧ ಆರೋಪ ಮಾಡಿರುವಂತಿದೆ. ನಿಗಮದಲ್ಲಿ ನಾನು ಯಾವುದೇ ಅವ್ಯವಹಾರ ನಡೆಸಿಲ್ಲ. ಅಂತಹ ಅನುಮಾನಗಳಿದ್ದರೆ ಯಾವುದೇ ರೀತಿಯ ತನಿಖೆ ಎದುರಿಸುವುದಕ್ಕೂ ಸಿದ್ಧ' ಎಂದು ಹೇಳಿದರು.

ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಮೆಹ್ತಾಬ್ ಆಯ್ಕೆ

ಸರ್ಕಾರ–ವಿಪಕ್ಷ ನಡುವೆ ವಾಕ್ಸಮರ

ನವದೆಹಲಿ (ಪಿಟಿಐ): ನೂತನ ಲೋಕಸಭೆಯ ಮೊದಲ ಅಧಿವೇಶನ ಆರಂಭವಾಗಲು ಕೆಲವು ದಿನಗಳಷ್ಟೇ ಬಾಕಿ ಇರುವ ಹೊತ್ತಿನಲ್ಲಿ ಹಂಗಾಮಿ ಸ್ಪೀಕರ್ ನೇಮಕ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ವಿರೋಧ ಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪ ಜೋರಾಗಿದೆ.

ಭರ್ತೃಹರಿ

ಬಿಜೆಪಿ ನಾಯಕ, ಏಳು ಬಾರಿ ಸಂಸದರಾಗಿ ಆಯ್ಕೆಯಾಗಿರುವ ಭರ್ತೃಹರಿ ಮೆಹ್ತಾಬ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹಂಗಾಮಿ ಸ್ಪೀಕರ್ ಆಗಿ ನೇಮಿಸಿದ್ದಾರೆ. ಹೊಸ ಲೋಕಸಭೆಗೆ ಆಯ್ಕೆಯಾಗಿರುವವರಿಗೆ ಪ್ರಮಾಣ ವಚನವನ್ನು ಮೆಹ್ತಾಬ್ ಅವರು ಬೋಧಿಸಬೇಕಿದೆ. ಅಲ್ಲದೆ, ಸ್ಪೀಕರ್ ಆಯ್ಕೆಯ ಪ್ರಕ್ರಿಯೆಯನ್ನು ಇವರೇ ನಡೆಸಬೇಕಿದೆ.

ಲೋಕಸಭೆಯ ಹಿರಿಯ ಸದಸ್ಯರಾದ

ಕೆ. ಸುರೇಶ್ (ಕಾಂಗ್ರೆಸ್), ಟಿ.ಆರ್. ಬಾಲು (ಡಿಎಂಕೆ), ರಾಧಾ ಮೋಹನ್ ಸಿಂಗ್ ಮತ್ತು ಫಗ್ಗನ್ ಸಿಂಗ್ ಕುಲಸ್ತೆ (ಬಿಜೆಪಿ), ಸುದೀಪ್ ಬಂದ್ಯೋಪಾಧ್ಯಾಯ (ಟಿಎಂಸಿ) ಅವರ ಹೆಸರನ್ನು ರಾಷ್ಟ್ರಪತಿಯವರು, ಮೆಹ್ತಾಬ್ ಅವರಿಗೆ ನೆರವಾಗುವ ಸಮಿತಿಗೆ ಸೂಚಿಸಿದ್ದಾರೆ.

ಹಂಗಾಮಿ ಸ್ಪೀಕರ್ ನೇಮಕ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರವು ನಿಯಮಗಳನ್ನು ಹಾಗೂ ಸಂಪ್ರದಾಯವನ್ನು ಉಲ್ಲಂಘಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಎಂಟು ಬಾರಿ ಸಂಸದರಾಗಿ ಆಯ್ಕೆಯಾಗಿರುವ ಸುರೇಶ್ ಅವರನ್ನು ಹಂಗಾಮಿ ಸ್ಪೀಕರ್ ಹುದ್ದೆಗೆ ಪರಿಗಣಿಸಿಲ್ಲ ಎಂದು ದೂರಿದೆ. ಆದರೆ ಈ ಮಾತು 'ತಪ್ಪುದಾರಿಗೆ ಎಳೆಯುವಂಥದ್ದು' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿರುಗೇಟು ನೀಡಿದ್ದಾರೆ.

ಹೊಸದಾಗಿ ಸಂಸದರಾಗಿ ಆಯ್ಕೆಯಾದವರಿಗೆ ಪ್ರಮಾಣ ವಚನ ಬೋಧಿಸುವ ಸಂದರ್ಭದಲ್ಲಿ ಮೆಹ್ತಾಬ್ ಅವರಿಗೆ ನೆರವಾಗುವ ಸಮಿತಿಗೆ ಬಾಲು, ಸುರೇಶ್ ಮತ್ತು ಬಂದ್ಯೋಪಾಧ್ಯಾಯ ಅವರು ಸೇರಲಿಕ್ಕಿಲ್ಲ ಎಂದು ವಿರೋಧ ಪಕ್ಷಗಳ ಮೂಲಗಳು ಶನಿವಾರ ತಿಳಿಸಿವೆ.

ಮೆಹ್ತಾಬ್ ಅವರು ಸತತವಾಗಿ ಏಳು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ, ಲೋಕಸಭೆಯಲ್ಲಿ ಅವರೇ ಅತ್ಯಂತ ಹಿರಿಯ ಸದಸ್ಯ ಎಂದು ರಿಜಿಜು ಹೇಳಿದ್ದಾರೆ. ಸುರೇಶ್ ಅವರು ಎಂಟು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಾರಾದರೂ, ಅವರು 1998 ಹಾಗೂ 2004ರಲ್ಲಿ ಆಯ್ಕೆಯಾಗಿರಲಿಲ್ಲ ಎಂದು ತಿಳಿಸಿದ್ದಾರೆ.

ಆದರೆ, ತಾವು ದಲಿತ ಎಂಬ ಕಾರಣಕ್ಕಾಗಿ ಹಂಗಾಮಿ ಸ್ಪೀಕರ್ ಹುದ್ದೆಗೆ ತಮ್ಮನ್ನು ಪರಿಗಣಿಸಲಿಲ್ಲ ಎಂದು ಸುರೇಶ್ ಆರೋಪಿಸಿದ್ದಾರೆ. ಇದನ್ನು ರಿಜಿಜು ಅಲ್ಲಗಳೆದಿದ್ದಾರೆ. ಅಲ್ಲದೆ, ಹಂಗಾಮಿ ಸ್ಪೀಕರ್ ವಿಚಾರವಾಗಿ ಸುಳ್ಳುಗಳನ್ನು ಹೇಳುವ ಮೂಲಕ ಕಾಂಗ್ರೆಸ್ ಪಕ್ಷವು ಬುಡಕಟ್ಟು ಸಮುದಾಯಕ್ಕೆ ಸೇರಿದ ಸಂಸದೀಯ ವ್ಯವಹಾರಗಳ ಸಚಿವರನ್ನು ಅವಮಾನಿಸಿದೆ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ.

'ಕಾಂಗ್ರೆಸ್ ಪಕ್ಷವು ಬುಡಕಟ್ಟು ಸಮುದಾಯದವರನ್ನು ಯಾವಾಗಲೂ ನಿಂದಿಸುವ ಕೆಲಸ ಮಾಡುತ್ತ ಬಂದಿದೆ. ಕಾಂಗ್ರೆಸ್ಸಿಗರು ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತ್ನಿ ಎಂದು ಕರೆದಿದ್ದರು, ಅವರನ್ನು ನಿಂದಿಸಿದ್ದರು ಕೂಡ' ಎಂದು ಪೂನಾವಾಲಾ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಬೆದರಿಕೆಗಳು ಹಾಗೂ ಸುಳ್ಳುಗಳಿಗೆ ತಾವು ಅಂಜುವುದಿಲ್ಲ ಎಂದು ರಿಜಿಜು ಹೇಳಿದ್ದಾರೆ.

'ನಾನು ಹಿಂದೆಯೂ ಹೇಳಿದ್ದೇನೆ. ಈಗಲೂ ಹೇಳುತ್ತೇನೆ. ಪ್ರಜಾತಂತ್ರ ಮತ್ತು ಸಂವಿಧಾನದ ಉಳಿವಿಗಾಗಿನ ಸಮರವು ಇನ್ನೂ ಪೂರ್ಣಗೊಂಡಿಲ್ಲ' ಎಂದು ಶಿವಸೇನಾ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ ಎಕ್ಸ್‌ನಲ್ಲಿ ಬರೆದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

13ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷವಾಯಿತು. ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ "ಚಿರಶಾಂತಿ" ನೀಡಲೆಂದು ಪ್ರಾರ್ಥಿಸುವ.

ಪತಿ: ದಾಸಯ್ಯ, ಮಾಜಿ ಸದಸ್ಯರು, ಕರ್ನಾಟಕ ಲೋಕಸೇವಾ ಆಯೋಗ.
-: ಮಕ್ಕಳಾದ :-
ಸುಮಾ, ಚೇತನ್, ಹಂಸ, ಮೊಮ್ಮಕ್ಕಳು, ಅಳಿಯಂದಿರು ಮತ್ತು ಬಂಧುಭಾಂದವರು.

ಶ್ರೀಮತಿ ತಾರಾಮಣಿ
ಜನನ: 2.9.1954 ಮರಣ: 23.6.2011

Remembrance

Sri. N.V. Ramachandra Chetty, IFS (Retd.)
04-05-1938 05-07-2023

It has been a year since you left us, A guiding light, so bright and just.
Your wisdom and warmth still linger, In our hearts, where your memories glimmer.

Om Shanti
Forever in our hearts
Family Members and Friends:
Smt. Nalini Ramachandra Chetty
Dr. M. R. Pattabhiram & Anitha Pattabhiram
Manjunath & Geetha Manjunath
Shreeshyla & Indira Shreeshyla
Chetas Manjunath & Aria Lakshmi
Tejas, Chiranthan & Nayanabhiram

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹560
12 ಕ್ಕೆ ₹75
ಮೈಸೂರು
100ಕ್ಕೆ ₹565

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹200.50
ಆರ್‌ಎಸ್‌ಎಸ್-5 ₹192
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹180

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹302-482
ದ್ವಿತಳಿ (ಬಿ.ವಿ) ₹333-618

ವಿದ್ಯುತ್ ಪ್ರಸರಣ ವ್ಯವಸ್ಥೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ರಾಜಸ್ಥಾನದಲ್ಲಿ 9 ಗಿಗಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಹೊಸ ಅಂತರರಾಜ್ಯ ಪ್ರಸರಣ ವ್ಯವಸ್ಥೆಗೆ (ಐಎಸ್‌ಟಿಎಸ್) ಕೇಂದ್ರ ವಿದ್ಯುತ್ ಸಚಿವಾಲಯ ಶನಿವಾರ ಅನುಮೋದನೆ ನೀಡಿದೆ.

ಈ ಯೋಜನೆಗಳನ್ನು ಸುಂಕ ಆಧಾರಿತ ಸ್ಪರ್ಧಾತ್ಮಕ ಬಿಡ್ಡಿಂಗ್ (ಟಿಬಿಸಿಬಿ) ವಿಧಾನದ ಮೂಲಕ ಜಾರಿಗೊಳಿಸಲಾಗುವುದು ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.

ಕರ್ನಾಟಕದಲ್ಲಿ ವಿದ್ಯುತ್ ವ್ಯವಸ್ಥೆಯನ್ನು ಬಲಪಡಿಸುವ ಯೋಜನೆಯು ಕೊಪ್ಪಳ ಹಾಗೂ ಗದಗ ಜಿಲ್ಲೆಗಳಲ್ಲಿ 4.5 ಗಿಗಾವಾಟ್ ನವೀಕರಿಸಬಹುದಾದ ಇಂಧನವನ್ನು ಉತ್ಪಾದಿಸುವುದಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ₹1,354 ಕೋಟಿ. ಈ ಯೋಜನೆಯ ಅನುಷ್ಠಾನದ ಅವಧಿ 2027ರ ಜೂನ್ ವರೆಗೆ ಇರುತ್ತದೆ.

ಭದ್ರಾ ಮೇಲ್ದಂಡೆಗೆ ಘೋಷಿಸಿದ್ದ ₹5,300 ಕೋಟಿ ಬಿಡುಗಡೆಗೆ ಕೃಷ್ಣ ಬೈರೇಗೌಡ ಮನವಿ

'ಕಲ್ಯಾಣ'ಕ್ಕೆ ವಿಶೇಷ ಪ್ಯಾಕೇಜ್ ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ₹11,400 ಕೋಟಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಬೆಂಗಳೂರು ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ರಾಜ್ಯ ಹಣಕಾಸು ಸಚಿವರೊಂದಿಗೆ ಶನಿವಾರ ಇಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಈ ಮನವಿ ಮಾಡಿದರು.

'ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರವು 2023ನೇ ಬಜೆಟ್‌ನಲ್ಲಿ ₹5,300 ಕೋಟಿ ಘೋಷಣೆ ಮಾಡಿದೆ. ಒಂದೂವರೆ ವರ್ಷ ಕಳೆದರೂ ಅನುದಾನ ಬಿಡುಗಡೆ ಆಗಿಲ್ಲ. ಈ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸಬೇಕು' ಎಂದು ಅವರು ಆಗ್ರಹಿಸಿದರು.

ಕೃಷ್ಣ ಬೈರೇಗೌಡ

'ವಸತಿ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಕೇಂದ್ರ ಪಾಲನ್ನು ನಗರ ಪ್ರದೇಶದಲ್ಲಿ ₹1.5 ಲಕ್ಷದಿಂದ ₹5 ಲಕ್ಷಕ್ಕೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ₹1.2 ಲಕ್ಷದಿಂದ ₹3 ಲಕ್ಷಕ್ಕೆ ಹೆಚ್ಚಿಸಬೇಕು' ಎಂದು ಮನವಿ ಮಾಡಿದರು.

'ಅಂಗನವಾಡಿ, ಆಶಾ ಕಾರ್ಯಕರ್ತೆಯರ ಹಾಗೂ ಬಿಸಿಯೂಟ ನೌಕರರ ಗೌರವಧನದಲ್ಲಿ ಕೇಂದ್ರದ ಪಾಲು ಬಹಳ ಕಡಿಮೆ ಇದೆ. ಅದನ್ನು ದಶಕದಿಂದ ಪರಿಷ್ಕರಣೆ ಮಾಡಿಲ್ಲ. ಇದರಿಂದಾಗಿ, ರಾಜ್ಯದ ಮೇಲೆ ಹೆಚ್ಚಿನ ಹೊರೆ ಬಿದ್ದಿದೆ. ಗೌರವಧನವನ್ನು ಪರಿಷ್ಕರಣೆ ಮಾಡಬೇಕು. ಆ ಮೂಲಕ ಅವರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು' ಎಂದು ಅವರು ಒತ್ತಾಯಿಸಿದರು.

ಸಕಾಲದಲ್ಲಿ ತೆರಿಗೆ ಪಾಲು ಹಂಚಿಕೆ: ನಿರ್ಮಲಾ

ನವದೆಹಲಿ (ಪಿಟಿಐ): 'ಸಕಾಲದಲ್ಲಿ ತೆರಿಗೆ ಪಾಲು ಹಂಚಿಕೆ ಹಾಗೂ ಜಿಎಸ್‌ಟಿ ವರಮಾನ ನಷ್ಟ ಪರಿಹಾರ ಬಾಕಿ ವಿತರಿಸುವ ಮೂಲಕ ರಾಜ್ಯಗಳ ಅಭಿವೃದ್ಧಿಗೆ ಸರ್ಕಾರವು ಸಂಪೂರ್ಣ ಸಹಕಾರ ನೀಡಲಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ರಾಜ್ಯಗಳ ಹಣಕಾಸು ಸಚಿವರೊಟ್ಟಿಗೆ ನಡೆದ ಬಜೆಟ್ ಪೂರ್ವ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ನವದೆಹಲಿಯಲ್ಲಿ ಶನಿವಾರ ನಡೆದ 53ನೇ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿದರು –ಪಿಟಿಐ ಚಿತ್ರ

ಕೇಂದ್ರವು ರಾಜ್ಯ ಸರ್ಕಾರಗಳಿಗೆ 50 ವರ್ಷಗಳ ಬಡ್ಡಿರಹಿತ ಸಾಲ ಸೌಲಭ್ಯ ಕಲ್ಪಿಸಿದೆ. ಮೂಲ ಸೌಕರ್ಯದಲ್ಲಿ ಹೂಡಿಕೆಗೆ ಉತ್ತೇಜನ ನೀಡಲು ಇದರಿಂದ ಸಹಕಾರಿ ಆಗಲಿದೆ. ಈ ಸಾಲವನ್ನು ಬಂಡವಾಳ ವೆಚ್ಚದ ರೂಪದಲ್ಲಿ ವಿನಿಯೋಗಿಸಬೇಕು ಎಂದರು. ಹಣಕಾಸು ಆಯೋಗದ ಶಿಫಾರಸು ಅನ್ವಯ ಕೇಂದ್ರ ಸಂಗ್ರಹಿಸುವ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ನೀಡುವ ಪಾಲಿನ ಹಣವನ್ನು ಸಕಾಲದಲ್ಲಿ ಬಿಡುಗಡೆಗೊಳಿಸಲಾಗುವುದು. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಯಿಂದಾಗಿ ರಾಜ್ಯಗಳಿಗೆ ಆಗುವ ವರಮಾನ ನಷ್ಟಕ್ಕೆ ನೀಡುವ ಪರಿಹಾರ ಬಾಕಿಯನ್ನೂ ನೀಡಲಾಗುವುದು ಎಂದು ಹೇಳಿದರು.

ರಾಜ್ಯಗಳ ಬಂಡವಾಳ ವೆಚ್ಚಕ್ಕೆ ಉತ್ತೇಜನ ನೀಡಲು ಕೇಂದ್ರ ಒತ್ತು ನೀಡಲಿದೆ. ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಹಣಕಾಸಿನ ನೆರವು ಯೋಜನೆಯನ್ನು ಜಾರಿಗೊಳಿಸಿದೆ. ಇದರಡಿ ನಾಗರಿಕ ಕೇಂದ್ರಿತ ಸುಧಾರಣೆ ಮತ್ತು ವಲಯವಾರು ನಿರ್ದಿಷ್ಟ ಬಂಡವಾಳ ಯೋಜನೆಗಳಿಗೆ ಕೆಲವು ಷರತ್ತು ವಿಧಿಸಲಾಗಿದೆ ಎಂದರು.

ರಾಜ್ಯದಲ್ಲಿ 13,896 ಉದ್ಯೋಗ ಸೃಷ್ಟಿ: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿಕೆ

₹3,587 ಕೋಟಿ ಹೂಡಿಕೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ 146ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯು ಒಟ್ಟು ₹3,587 ಕೋಟಿ ಬಂಡವಾಳ ಹೂಡಿಕೆಯ 64 ಯೋಜನೆಗಳಿಗೆ ಅನುಮೋದನೆ ನೀಡಿದೆ.

ಈ ಅನುಮೋದನೆಯಿಂದ ರಾಜ್ಯದಲ್ಲಿ 13,896 ಮಂದಿಗೆ ಉದ್ಯೋಗ ದೊರೆಯಲಿದೆ. ಇಂಟರ್‌ನ್ಯಾಷನಲ್ ಬ್ಯಾಟರಿ ಕಂಪನಿ ಇಂಡಿಯಾ, ರಿವರ್ ಮೊಬಿಲಿಟಿ, ವೇಗಾ ಆಟೊ ಆ್ಯಕ್ಸೆಸರೀಸ್, ಮಿರ್ರಾ ಆ್ಯಂಡ್ ಮಿರ್ರಾ ಇಂಡಸ್ಟ್ರೀಸ್ ಸೇರಿ ಹಲವು ಕಂಪನಿಗಳು ಬಂಡವಾಳ ಹೂಡಲಿವೆ. ಈ ಯೋಜನೆಗಳಲ್ಲಿ ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಘಟಕ, ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರ, ವಿದ್ಯುತ್ ಉತ್ಪಾದನಾ ಕೇಂದ್ರ ಹಾಗೂ ಹಾಲು ಉತ್ಪಾದನಾ ಘಟಕಗಳು ಸೇರಿವೆ. ಸಭೆಯಲ್ಲಿ ಕೈಗೊಂಡ ನಿರ್ಧಾರಗಳಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ತುಮಕೂರು, ಯಾದಗಿರಿ, ಹಾವೇರಿ, ಗದಗ ಹಾಗೂ ಮೈಸೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಮತ್ತಷ್ಟು ಉತ್ತೇಜನ ದೊರೆಯಲಿದೆ.

ಸಭೆಯ ಬಳಿಕ ಮಾತನಾಡಿದ ಸಚಿವ ಪಾಟೀಲ, 'ಇಂಟರ್‌ನ್ಯಾಷನಲ್ ಬ್ಯಾಟರಿ ಕಂಪನಿ ಇಂಡಿಯಾವು ದೇವನಹಳ್ಳಿ ಬಳಿ ₹390 ಕೋಟಿ ವೆಚ್ಚದಲ್ಲಿ ಪ್ರೈಮರಿ ಸೆಲ್ಸ್ ಆ್ಯಂಡ್ ಬ್ಯಾಟರೀಸ್ ಘಟಕ ಸ್ಥಾಪಿಸಲಿದೆ. ಇದರಿಂದ 300 ಮಂದಿಗೆ ಉದ್ಯೋಗಾವಕಾಶ ದೊರೆಯಲಿದೆ' ಎಂದರು.

'ಬೆಂಗಳೂರು ಮೂಲದ ನವೋದ್ಯಮವಾದ ರಿವರ್ ಮೊಬಿಲಿಟಿ ಪ್ರೈವೆಟ್ ಲಿಮಿಟೆಡ್ ಹೊಸಕೋಟೆ ಬಳಿ ₹306.9 ಕೋಟಿ ವೆಚ್ಚದಲ್ಲಿ ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಘಟಕ ಸ್ಥಾಪಿಸಲಿದೆ. ಇದರಿಂದ 690 ಜನರಿಗೆ ಉದ್ಯೋಗ ಸಿಗಲಿದೆ. ವೇಗಾ ಆಟೊ ಆ್ಯಕ್ಸೆಸರೀಸ್ ಪ್ರೈವೇಟ್ ಲಿಮಿಟೆಡ್‌ನಿಂದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಇಪಿಎಸ್ ಲೀನರ್ ತಯಾರಿಕಾ ಘಟಕ ಸ್ಥಾಪನೆಯಾಗಲಿದೆ. ಇದಕ್ಕಾಗಿ ₹205 ಕೋಟಿ ವೆಚ್ಚ ಮಾಡಲಿದೆ ಎಂದರು.

ಜಪಾನ್, ದಕ್ಷಿಣ ಕೊರಿಯಾಕ್ಕೆ ನಿಯೋಗ

ಬೆಂಗಳೂರು: ರಾಜ್ಯಕ್ಕೆ ಜಾಗತಿಕ ಬಂಡವಾಳ ಹೂಡಿಕೆ ಆಕರ್ಷಿಸುವ ಉದ್ದೇಶದಿಂದ ಜಪಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳಿಗೆ 10ದಿನಗಳ (ಜೂನ್ 24ರಿಂದ ಜುಲೈ5) ಭೇಟಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ಉನ್ನತ ಮಟ್ಟದ ನಿಯೋಗವು ಶನಿವಾರ ರಾತ್ರಿ ತೆರಳಿತು.

ಮುಂದಿನ ವರ್ಷ ನಗರದಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಯಶಸ್ಸುಗೊಳಿಸಲು ಹೂಡಿಕೆದಾರರನ್ನು ಖುದ್ದಾಗಿ ಆಹ್ವಾನಿಸಲಿರುವ ನಿಯೋಗವು, ಟೋಕಿಯೊ ಮತ್ತು ಸೋಲ್ ನಗರಗಳಲ್ಲಿ ರೋಡ್ ಶೋ ನಡೆಸಲಿದೆ. ಟೋಕಿಯೊ, ಒಸಾಕಾ, ಕ್ಯೂಟೊ ಹಾಗೂ ಸೋಲ್, ಇಂಚೆಯಾನ್ ಮತ್ತು ಜಿಯೊಂಗಿ ನಗರಗಳಲ್ಲಿ ಕಂಪನಿಗಳ ಪ್ರಮುಖರ ಜೊತೆ ನಿಯೋಗವು ಸಮಾಲೋಚಿಸಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಪೂಜಾ ಕೈಂಕರ್ಯಕ್ಕೆ ಬೇಕಾಗಿದ್ದಾರೆ
ಹಾಸನ ಜಿಲ್ಲೆಯ ಚನ್ನರಾಯಪಟ್ಟಣಕ್ಕೆ ಸಮೀಪದ ಬಾಗೂರು ರಸ್ತೆಯಲ್ಲಿನ ಗುಲಸಿಂದ ಗ್ರಾಮದಲ್ಲಿ ಶ್ರೀರಾಘವೇಂದ್ರ ಸ್ವಾಮಿಯವರ ಪ್ರತೀಕ ಪೂಜಾ ಮಂದಿರ ನಿರ್ಮಾಣವಾಗುತ್ತಿದ್ದು, ಶ್ರೀ ಗುರುರಾಯರಿಗೆ ಪೂಜಾ ಕೈಂಕರ್ಯಗಳ ಸೇವೆಯನ್ನು ಮಾಡಲಿಚ್ಛಿಸುವವರಿಗೆ ಸದಾವಕಾಶವಿರುತ್ತದೆ. ಮಠದ ಹಿಂಭಾಗದಲ್ಲಿ ನೂತನವಾಗಿ ವಸತಿ ಸೌಕರ್ಯ ಮಾಡಿದ್ದು, ಗೌರವ ಸಂಭಾವನೆಯನ್ನು ನೀಡಲಾಗುವುದು. ಇದು ರಾಯರ ಪ್ರತೀಕ ಮಂದಿರ ವಾದ್ದರಿಂದ ಶ್ರೀ ರಾಯರ ಬಗ್ಗೆ ಅಧ್ಯಯನ ಹೊಂದಿದ ಪರಿಣಿತ ಮಾಧ್ವರು/ಸ್ಮಾರ್ತರು/ ವೈಷ್ಣವರು ಅಥವಾ ಇತರರಿಗೆ ಪೂಜೆ ಸೇವೆ ಮಾಡಲು ಅವಕಾಶವಿರುತ್ತದೆ.
ಆಸಕ್ತರು ದಯವಿಟ್ಟು ಮೊಬೈಲ್
9448733155
8792866295
ಸಂಪರ್ಕಿಸಲು ಕೋರಿದೆ

Accounts & Finance

WANTED ACCOUNT ASST (Male) Tally & GST work. Salary: Negotiable. Mail: starsilks@gmail.com

Cook

"ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಅಡಿಗೆ ಕೆಲಸದವರು ಮತ್ತು ಮಹಿಳಾ ಮನೆಗೆಲಸದವರು ಬೇಕಾಗಿದ್ದಾರೆ ಉತ್ತಮ ಸಂಬಳ ಹಾಗೂ ಇಬ್ಬರಿಗೂ ಪ್ರತ್ಯೇಕ ವಸತಿ ಸೌಲಭ್ಯ ನೀಡಲಾಗುತ್ತದೆ. 9845058243"

Drivers

ಚಾಲಕ ಅಗತ್ಯವಿದೆ!
ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

Multiple Vacancy

REQUIRED EXPERIENCED Telecaller, Field Executive For Bank Loan collection Salary + Incentive, Commission. 9916276701, 9900709308.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

TRAVEL CORNER
HITESH HOLIDAYS : BENGALURU
SINGAPORE AND MALAYSIA
06 DAYS
Date: 10th August 2024
Rs. 97990/-* P.P.
DUBAI (Dasara Holidays)
05 DAYS
Date : 12th Oct 2024 &
Rs. 89990/-*P.P.
VIETNAM & COMBODIA- 10 DAYS
Date: 18th Oct 2024
Rs. 157000/-* P.P.
Contact for other travel packages & GST 5% Extra on all the package
Contact: 9739326102 / 9036568598

ರೆಂಟಲ್ ಪ್ರಾಪರ್ಟೀಸ್

Accommodation Wanted

Industrial And Factory

INDUSTRIAL SHED
Required on Lease. We are looking for an 8500sqft Shed for Factory setup having 25ft Height and Orange Category in Bangalore within 50-60 kms Radius from Malleshwaram. Contact: 9108934749.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Out-Station

ಯಾದಗಿರಿಯಲ್ಲಿ ಎರಡು ಕಮರ್ಷಿಯಲ್ ಸೈಟುಗಳು, 12000 ಮತ್ತು 6500sft ಮಾರಾಟಕ್ಕೆ ಇವೆ.ಮುನಿಸಿಪಲ್ ಲಿಮಿಟ್ ಒಳಗಡೆ, RTO ಆಫೀಸ ಹತ್ತಿರ ಯಾದಗಿರಿ ಕಲ್ಬುರ್ಗಿಯ ರಾಷ್ಟ್ರೀಯ ಹೆದ್ದಾರಿಯ ಮೇಲೆ ಇದೆ.ಸಂಪರ್ಕಿಸಿ ಮೊಬೈಲ್: 9880042441

ಭವಿಷ್ಯ

Astrology

★ಪರಮಶ್ರೇಷ್ಠ★
ಶ್ರೀದೇವಾನಂದನ್‌ರವರಿಂದ ನಿಮ್ಮ ಎಲ್ಲೂ ಪರಿಹಾರವಾಗದ ವಿವಾಹ,ಕುಟುಂಬ,ದಾಂಪತ್ಯ ಕಲಹ,ಬಂಜೇತನ ದುರ್ನಡತೆ, ದುಶ್ಚಟ,ಸಾಲ,ಶತ್ರು ರೋಗ ಲೈಂಗಿಕತೆ, ಸ್ತ್ರೀಪುರುಷ ವಶೀಕರಣಕ್ಕೆ ಸಂಪರ್ಕಿಸಿರಿ: 9845005009

ವೈವಾಹಿಕ

Matrimonial Bureaus

ವಿವಾಹ ಮತ್ತು ಸಂತಾನ ಸಂಬಂಧಿಸಿದ ಸಮಸ್ಯೆಗಳಿಗೆ ಸೂಕ್ತ ಪರಿಹಾರಕ್ಕಾಗಿ ಸಂಪರ್ಕಿಸಿ: 04998273627, 9446573627.

ಪ್ರವಾಸ

Travel

ಚಾರ್ಧಾಮ್ ಯಾತ್ರೆ 19.09.24 ರಿಂದ 12 ದಿನ ಗಂಗೋತ್ರಿ, ಯಮುನೋತ್ರಿ, ಕೇದಾರ್ನಾಥ್, ಬದರೀನಾಥ್, ಹರಿದ್ವಾರ್, ರಿಷಿಕೇಶ್, ದೆಹಲಿ. ಶ್ರೀ ಗಂಗಾ ಟೂರಿಸ್ಟ್: 9480253807/ 8105522123

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಕೇಂದ್ರಕ್ಕೆ ₹6,959 ಕೋಟಿ ಲಾಭಾಂಶ ಪಾವತಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) 2023–24ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರಕ್ಕೆ ಒಟ್ಟು ₹6,959 ಕೋಟಿ ಲಾಭಾಂಶ ಪಾವತಿಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ, ಎಸ್‌ಬಿಐ ಅಧ್ಯಕ್ಷ ದಿನೇಶ್ ಖಾರಾ ಅವರು ಲಾಭಾಂಶದ ಚೆಕ್ ಅನ್ನು ಹಸ್ತಾಂತರಿಸಿದರು. ಈ ವೇಳೆ ಹಣಕಾಸು ಸೇವೆ ಕಾರ್ಯದರ್ಶಿ ವಿವೇಕ್ ಜೋಶಿ ಹಾಜರಿದ್ದರು.

2022–23ನೇ ಆರ್ಥಿಕ ವರ್ಷದಲ್ಲಿ ಎಸ್‌ಬಿಐ ಪ್ರತಿ ಷೇರಿಗೆ ₹11.30 ಲಾಭಾಂಶ ಘೋಷಿಸಿತ್ತು. 2023–24ರಲ್ಲಿ ₹13.70 ಲಾಭಾಂಶ ಪ್ರಕಟಿಸಿದೆ. ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ₹67,085 ಕೋಟಿ ನಿವ್ವಳ ಲಾಭ ಗಳಿಸಿದೆ.

ಬಿಒಎಂನಿಂದ ₹857 ಕೋಟಿ ಪಾವತಿ: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರವು (ಬಿಒಎಂ) ಕೇಂದ್ರಕ್ಕೆ ₹857 ಕೋಟಿ ಲಾಭಾಂಶ ಪಾವತಿಸಿದೆ.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ನಿಧು ಸಕ್ಸೇನಾ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕ ಆಶೀಶ್ ಪಾಂಡೆ, ಲಾಭಾಂಶದ ಚೆಕ್ ಅನ್ನು ಸಚಿವೆ ನಿರ್ಮಲಾ ಅವರಿಗೆ ಹಸ್ತಾಂತರಿಸಿದರು. 2023–24ನೇ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ಪ್ರತಿ ಷೇರಿಗೆ ₹1.40 ಲಾಭಾಂಶ ಘೋಷಿಸಿದೆ. ಕೇಂದ್ರ ಸರ್ಕಾರವು ಬ್ಯಾಂಕ್‌ನ ಶೇ 86.46ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿದೆ.

71 ಸಾವಿರ ಟನ್ ಈರುಳ್ಳಿ ದಾಸ್ತಾನು

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಪ್ರಸಕ್ತ ವರ್ಷದಲ್ಲಿ 5 ಲಕ್ಷ ಟನ್ ಈರುಳ್ಳಿ ಕಾಪು ದಾಸ್ತಾನಿಗೆ ನಿರ್ಧರಿಸಲಾಗಿದೆ. ಈ ಪೈಕಿ ಇಲ್ಲಿಯವರೆಗೆ 71 ಸಾವಿರ ಟನ್ ಸಂಗ್ರಹಣೆ ಮಾಡಲಾಗಿದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಈರುಳ್ಳಿಯ ಸರಾಸರಿ ದರ ₹38.67 ಇದೆ. ಮಾರುಕಟ್ಟೆಯಲ್ಲಿ ಸಾಮಾನ್ಯ ದರ ₹40 ಇದೆ. ಬಹುತೇಕ ಭಾಗದಲ್ಲಿ ಮುಂಗಾರು ಮಳೆ ಸುರಿಯುತ್ತಿದೆ. ಹಾಗಾಗಿ, ಚಿಲ್ಲರೆ ಧಾರಣೆಯಲ್ಲಿ ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

'ದೇಶದಲ್ಲಿ ರಾಬಿ ಅವಧಿಯಲ್ಲಿ ಈರುಳ್ಳಿ ಉತ್ಪಾದನೆಯಲ್ಲಿ ಶೇ 20ರಷ್ಟು ಕುಸಿತವಾಗಿದೆ. ಕಳೆದ ವರ್ಷಕ್ಕಿಂತಲೂ ಪ್ರಸಕ್ತ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಕಾಪು ದಾಸ್ತಾನು ಮಾಡಲಾಗುತ್ತಿದೆ' ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೆರಿಕ: ಅಮುಲ್ ಉತ್ಪನ್ನ ಮಾರಾಟಕ್ಕೆ ಸಿದ್ಧತೆ

ಮುಂಬೈ (ಪಿಟಿಐ): ಅಮೆರಿಕದಲ್ಲಿ 'ಅಮುಲ್ ಬ್ರ್ಯಾಂಡ್' ಅಡಿಯಲ್ಲಿ ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟವು (ಜಿಸಿಎಂಎಂಎಫ್‌ಎಲ್) ಸಿದ್ಧತೆ ನಡೆಸಿದೆ.

ಈಗಾಗಲೇ, ಅಮೆರಿಕದಲ್ಲಿ ಅಲ್ಲಿನ ಮಿಚಿಗನ್ ಹಾಲು ಉತ್ಪಾದಕರ ಸಂಘದ ಸಹಭಾಗಿತ್ವದಡಿ ಅಮುಲ್‌ನ ತಾಜಾ ಹಾಲಿನ ಮಾರಾಟ ಮಾಡುತ್ತಿದೆ. ಶೀಘ್ರವೇ, ಹಾಲಿನ ಉತ್ಪನ್ನಗಳ ಮಾರಾಟ ಆರಂಭಿಸುವ ಮೂಲಕ ಮಾರುಕಟ್ಟೆಯ ವಿಸ್ತರಣೆಗೆ ಒಕ್ಕೂಟ ನಿರ್ಧರಿಸಿದೆ.

ಭಾರಿ ಬೇಡಿಕೆ: 'ಅಮುಲ್ ಉತ್ಪನ್ನಗಳಿಗೆ ವಿದೇಶಗಳಲ್ಲಿ ಭಾರಿ ಬೇಡಿಕೆಯಿದೆ. ಅಮೆರಿಕದಲ್ಲಿ ಮೊಸರು, ಲಸ್ಸಿ ಬಟರ್‌ಮಿಲ್ಕ್, ಕ್ರೀಮ್ ಮತ್ತು ಪನ್ನೀರ್ ಸೇರಿ ಇತರೆ ಉತ್ಪನ್ನಗಳ ಮಾರಾಟ ಆರಂಭಿಸಲಾಗುವುದು' ಎಂದು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಜಯನ್ ಮೆಹ್ತಾ ತಿಳಿಸಿದ್ದಾರೆ.

ಭಾರತೀಯ ವ್ಯಾಪಾರಿಗಳ ಒಕ್ಕೂಟದ (ಐಎಂಸಿ) 116ನೇ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, 'ಮುಂದಿನ ಒಂದು ದಶಕದ ಅವಧಿಯಲ್ಲಿ ವಿಶ್ವದಲ್ಲಿ ಉತ್ಪಾದನೆ ಆಗುವ ಹಾಲಿನಲ್ಲಿ ಮೂರನೇ ಒಂದು ಭಾಗದಷ್ಟು ಉತ್ಪಾದನೆಯು ಭಾರತದಲ್ಲಿಯೇ ಆಗಲಿದೆ' ಎಂದು ಹೇಳಿದ್ದಾರೆ.

ಅಮೆರಿಕದಲ್ಲಿ ಭಾರತೀಯರು ಮತ್ತು ಏಷ್ಯಾದ ವಿವಿಧ ದೇಶಗಳ ಜನರು ನೆಲೆಸಿರುವ ಪ್ರದೇಶಗಳಲ್ಲಿ ಅಮುಲ್ ಹಾಲು ಮಾರಾಟ ಮಾಡಲಾಗುತ್ತಿದೆ. ಕೆನಡಾದಲ್ಲಿಯೂ ತಾಜಾ ಹಾಲು ಮಾರಾಟ ಆರಂಭಿಸುವ ಯೋಜನೆಯಿದೆ. ಅಲ್ಲದೆ, ವಿಶ್ವದ ಇತರೆ ದೇಶಗಳಲ್ಲೂ ಮಾರುಕಟ್ಟೆ ವಿಸ್ತರಿಸಲು ಎದುರು ನೋಡುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ಚೀನಾದಲ್ಲಿ ಯೋಗ ದಿನ

ಬೀಜಿಂಗ್ (ಪಿಟಿಐ): ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಚೀನಾದಾದ್ಯಂತ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಯೋಗಾಭ್ಯಾಸದ ವಿವಿಧ ಭಂಗಿಗಳನ್ನು ನೂರಾರು ಯೋಗ ಉತ್ಸಾಹಿಗಳು ಪ್ರದರ್ಶಿಸಿದರು.

ವಿವಿಧ ನಗರಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನದಂದು ನಡೆಯಲಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಅದರಲ್ಲೂ ಯುವ ಜನರ ಸಂಖ್ಯೆಯೇ ಹೆಚ್ಚಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಶನಿವಾರ ಆಯೋಜಿಸಿದ್ದ ಎರಡು ಗಂಟೆಗಳ ಕಾರ್ಯಕ್ರಮದಲ್ಲಿ, ಒಂದು ಸಾವಿರಕ್ಕೂ ಹೆಚ್ಚು ಯೋಗ ಉತ್ಸಾಹಿಗಳು ಭಾಗವಹಿಸಿದ್ದರು. ವಾರಾಂತ್ಯದ ರಜೆಗೆ ಹೊಂದಾಣಿಕೆ ಆಗುವಂತೆ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಒಂದು ದಿನದ ನಂತರ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬೀಜಿಂಗ್‌ನಲ್ಲಿ ಭಾರತೀಯ ರಾಯಭಾರ ಕಚೇರಿಯು ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದ ಚೀನಾದ ಯೋಗ ಉತ್ಸಾಹಿಗಳು –ಪಿಟಿಐ ಚಿತ್ರ

ಹಳೆ ರಾಯಭಾರ ಕಚೇರಿ ಆವರಣದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಚೀನಾದ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ಭಾಗಿಯಾಗಿದ್ದರು.

1985ರ ಕಾನಿಷ್ಕಾ ಬಾಂಬ್ ದಾಳಿ ಕೃತ್ಯ ತನಿಖೆ ಸಕ್ರಿಯ: ಕೆನಡಾ

ಒಟ್ಟಾವಾ (ಪಿಟಿಐ): 'ಏರ್ ಇಂಡಿಯಾ ವಿಮಾನ 182ರ ಮೇಲೆ 1985ರಲ್ಲಿ ನಡೆದಿದ್ದ ಬಾಂಬ್ ದಾಳಿ ಕೃತ್ಯದ ತನಿಖೆಯು ಈಗಲೂ ಸಕ್ರಿಯವಾಗಿದೆ ಮತ್ತು ಪ್ರಗತಿಯಲ್ಲಿದೆ' ಎಂದು ಕೆನಡಾದ ಪೊಲೀಸರು ತಿಳಿಸಿದ್ದಾರೆ.

'ಇದು, ಅತ್ಯಂತ ದೀರ್ಘಕಾಲ ಅವಧಿಯ ಹಾಗೂ ಅತ್ಯಂತ ಸಂಕೀರ್ಣವಾದ ಭಯೋತ್ಪಾದನೆ ಕೃತ್ಯದ ತನಿಖೆಯಾಗಿದೆ' ಎಂದು ಪೊಲೀಸರು ವ್ಯಾಖ್ಯಾನಿಸಿದ್ದಾರೆ. ವಿಮಾನದ ಮೇಲಿನ ಬಾಂಬ್ ದಾಳಿ ಘಟಿಸಿ 39 ವರ್ಷಗಳು ಗತಿಸಿದ ಹಿನ್ನೆಲೆಯಲ್ಲಿ ಪೊಲೀಸರು ಈ ಮಾತು ಹೇಳಿದ್ದಾರೆ. ಕೆನಡಾದ ಮಾಂಟ್ರಿಯಲ್ ಮತ್ತು ನವದೆಹಲಿ ನಡುವಣ ಏರ್ ಇಂಡಿಯಾದ 'ಕಾನಿಷ್ಕಾ 182' ವಿಮಾನವು ಜೂನ್ 23, 1985ರಂದು ಲಂಡನ್‌ನ ಹೀಥ್ರೂ ವಿಮಾನನಿಲ್ದಾಣದಲ್ಲಿ ಭೂಸ್ಪರ್ಶಕ್ಕೆ 45 ನಿಮಿಷ ಮೊದಲು ಸ್ಫೋಟಗೊಂಡಿತ್ತು. ಒಟ್ಟು 329 ಮಂದಿ ಸತ್ತಿದ್ದು, ಇವರಲ್ಲಿ ಹೆಚ್ಚಿನವರು ಭಾರತ ಮೂಲದ ಕೆನಡಾದವರು.

1984ರಲ್ಲಿ ಸ್ವರ್ಣಮಂದಿರದಲ್ಲಿ ನಡೆದಿದ್ದ 'ಆಪರೇಷನ್ ಬ್ಲೂಸ್ಟಾರ್' ಕಾರ್ಯಾಚರಣೆಗೆ ಪ್ರತೀಕಾರವಾಗಿ ಸಿಖ್ ಉಗ್ರವಾದಿಗಳು ಈ ಬಾಂಬ್ ಕೃತ್ಯವನ್ನು ಎಸಗಿದ್ದರು ಎಂದು ಆರೋಪಿಸಲಾಗಿತ್ತು. ಶುಕ್ರವಾರ ಈ ಕುರಿತು ಹೇಳಿಕೆ ನೀಡಿರುವ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಆರ್‌ಸಿಎಂಪಿ) ಸಹಾಯಕ ಕಮಿಷನರ್ ಡೇವಿಡ್ ಟೆಬೌಲ್ ಅವರು, 'ದೇಶದ ಇತಿಹಾಸದ ಲ್ಲಿಯೇ ಕೆನಡಿಯನ್ನರ ಜೀವಹಾನಿಗೆ ಕಾರಣವಾದ ಅತಿದೊಡ್ಡ ಭಯೋತ್ಪಾದಕ ಕೃತ್ಯ ಇದಾಗಿತ್ತು' ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಆಂಧ್ರ: ವೈಎಸ್‌ಆರ್‌ಸಿಪಿ ಕೇಂದ್ರ ಕಚೇರಿ ನೆಲಸಮ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ವಿರೋಧ ಪಕ್ಷವಾದ ವೈಎಸ್‌ಆರ್‌ಸಿಪಿ ತಾಡೇಪಲ್ಲಿಯಲ್ಲಿ ನಿರ್ಮಿಸುತ್ತಿದ್ದ ಪಕ್ಷದ ಕೇಂದ್ರ ಕಚೇರಿಯನ್ನು ಅಕ್ರಮ ಕಟ್ಟಡ ಎಂದು ಟಿಡಿಪಿ ಸರ್ಕಾರವು ಶನಿವಾರ ನೆಲಸಮ ಮಾಡಿದೆ.

ಆಂಧ್ರಪ್ರದೇಶ ರಾಜಧಾನಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಎಪಿಸಿಆರ್‌ಡಿಎ) ಮತ್ತು ಮಂಗಳಗಿರಿ–ತಾಡೇಪಲ್ಲಿ ನಗರಪಾಲಿಕೆ ಅಧಿಕಾರಿಗಳು ಪೊಲೀಸರ ನೆರವಿನೊಂದಿಗೆ ಕಟ್ಟಡ ನೆಲಸಮಗೊಳಿಸಿದರು.

ವೈಎಸ್‌ಆರ್‌ಸಿಪಿ ಮುಖ್ಯಸ್ಥ ಜಗನ್‌ಮೋಹನ್ ರೆಡ್ಡಿ ಅವರು, 'ಇದು ದ್ವೇಷದ ರಾಜಕಾರಣ' ಎಂದಿದ್ದು, ಹೈಕೋರ್ಟ್ ಆದೇಶವನ್ನು ಧಿಕ್ಕರಿಸಿ ಕಟ್ಟಡ ನೆಲಸಮಗೊಳಿಸಲಾಗಿದೆ ಎಂದು ಟೀಕಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜಗನ್, ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ನಾಯಕತ್ವದಲ್ಲಿ ರಾಜ್ಯದಲ್ಲಿ ಸರ್ವನಾಶ ಮತ್ತು ಭಯೋತ್ಪಾದನೆಯ ಆಳ್ವಿಕೆ ಆರಂಭವಾಗಿದೆ ಎಂದಿದ್ದಾರೆ.

ಕೋರ್ಟ್ ಆದೇಶ ವಿರುದ್ಧ ಮೇಲ್ಮನವಿ: ಹಿಂದೂಜಾ ಕುಟುಂಬ

ಲಂಡನ್ (ಪಿಟಿಐ): ಮನೆಕೆಲಸದವರ ಮೇಲೆ ಕೌಟುಂಬಿಕ ದೌರ್ಜನ್ಯ ಆರೋಪ ಕುರಿತ ಪ್ರಕರಣದಲ್ಲಿ ಕುಟುಂಬದ ಕೆಲವರು ತಪ್ಪಿತಸ್ಥರು ಎಂಬ ಸ್ವಿಸ್ ಕೋರ್ಟ್ ಆದೇಶ ಪ್ರಶ್ನಿಸಿ, ಉನ್ನತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಬ್ರಿಟನ್‌ನ ಅತಿಶ್ರೀಮಂತ ಹಿಂದೂಜಾ ಕುಟುಂಬವು ತಿಳಿಸಿದೆ.

ಭಾರತ ಮೂಲದ ಮನೆಕೆಲಸದವರ ಮೇಲೆ ದೌರ್ಜನ್ಯ ಎಸಗಿದ ಆರೋಪ ಕುಟುಂಬದ ಕೆಲವರ ಮೇಲಿದೆ. ಕುಟುಂಬ ಪರವಾಗಿ ನೀಡಲಾದ ಹೇಳಿಕೆಯಲ್ಲಿ, ಕುಟುಂಬದ ನಾಲ್ವರರಿಗೆ ನಾಲ್ಕರಿಂದ ನಾಲ್ಕೂವರೆ ವರ್ಷ ಸಜೆ ವಿಧಿಸಿದ ಬಳಿಕ ಇತರೆ ಯಾವುದೇ ಸದಸ್ಯರನ್ನು ವಶಕ್ಕೆ ಪಡೆದಿರಲಿಲ್ಲ ಎಂದು ತಿಳಿಸಿದ್ದಾರೆ.

ಕುಟುಂಬದ ವಕೀಲರು, ಮಾನವ ಸಾಗಣೆ ಆರೋಪದಿಂದ ಕಕ್ಷಿದಾರರಾದ ಪ್ರಕಾಶ್, ಕಮಲ್ ಹಿಂದೂಜಾ, ಅವರ ಪುತ್ರ ಅಜಯ್, ಇವರ ಪತ್ನಿ ನಮ್ರತಾ ಅವರನ್ನು ದೋಷಮುಕ್ತಗೊಳಿಸಲಾಗಿದೆ. ಕೋರ್ಟ್‌ನ ಇತರೆ ಆದೇಶ ಕುರಿತು ನಿರಾಶೆಯಾಗಿದೆ. ಅದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುತ್ತಿದೆ ಎಂದರು.

ಆರೋಪಿಗಳ ಮಂಪರು ಪರೀಕ್ಷೆ ಸಾಧ್ಯತೆ • ಬಿಹಾರ ಪೊಲೀಸರಿಂದ ತನಿಖೆ ಚುರುಕು

ನೀಟ್: ಸಿಬಿಐ ತನಿಖೆಗೆ ಕೇಂದ್ರದ ನಿರ್ಧಾರ

ನವದೆಹಲಿ/ಪಟ್ನಾ (ಪಿಟಿಐ): ನೀಟ್ ಅಕ್ರಮಗಳ ಸಮಗ್ರ ತನಿಖೆಗಾಗಿ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವಹಿಸಲಾಗುವುದು ಎಂದು ಕೇಂದ್ರ ಸರ್ಕಾರವು ಶನಿವಾರ ರಾತ್ರಿ ಘೋಷಿಸಿದೆ.

'ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಪ್ರಕರಣವನ್ನು ಸಮಗ್ರ ತನಿಖೆಗಾಗಿ ಸಿಬಿಐಗೆ ವಹಿಸಲು ನಿರ್ಧರಿಸಲಾಯಿತು' ಎಂದು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ನೀಟ್-ಯುಜಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆಗೆ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸೂಚಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ಅರ್ಜಿಯೊಂದನ್ನು ಸಲ್ಲಿಸಲಾಗಿತ್ತು.

ಪರೀಕ್ಷೆಗೆ ಹಾಜರಾಗಿದ್ದ 10 ಮಂದಿ ವಿದ್ಯಾರ್ಥಿಗಳು ಈ ಅರ್ಜಿ ಸಲ್ಲಿಸಿದ್ದರು. ಅಕ್ರಮಗಳ ಬಗ್ಗೆ ತನಿಖೆ ನಡೆಸುತ್ತಿರುವ ಬಿಹಾರ ಪೊಲೀಸರಿಗೆ, ತನಿಖೆಯನ್ನು ಬೇಗನೆ ನಡೆಸಿ ವರದಿಯೊಂದನ್ನು ಸಲ್ಲಿಸಲು ಸೂಚಿಸಬೇಕು ಎಂದು ಕೂಡ ಅರ್ಜಿಯಲ್ಲಿ ಕೋರಲಾಗಿದೆ.

ನೀಟ್-ಯುಜಿ 2024 ಪರೀಕ್ಷೆಯನ್ನು ರದ್ದುಪಡಿಸಬೇಕು, ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆದೇಶಿಸಬೇಕು ಎಂಬ ಕೋರಿಕೆ ಇರುವ ಹಲವು ಅರ್ಜಿಗಳು ಸುಪ್ರೀಂ ಕೋರ್ಟ್‌ಗೆ ಈಗಾಗಲೇ ಸಲ್ಲಿಕೆಯಾಗಿವೆ. ಅವುಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಎನ್‌ಟಿಎ ಪ್ರಶ್ನೆ ಪತ್ರಿಕೆ ಪರಿಶೀಲನೆ: 'ನೀಟ್-ಯುಜಿ' ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಬಿಹಾರ ಪೊಲೀಸ್ ಆರ್ಥಿಕ ಅಪರಾಧಗಳ ಘಟಕವು (ಇಒಯು) ಪಟ್ನಾದ ಫ್ಲಾಟ್‌ನಿಂದ ವಶಪಡಿಸಿಕೊಂಡಿರುವ ಕೆಲ ದಾಖಲೆಗಳನ್ನು, ಎನ್‌ಟಿಎಯಿಂದ ಸ್ವೀಕರಿಸಿರುವ ಪ್ರಶ್ನೆ ಪತ್ರಿಕೆಯ ಜತೆಗೆ ತಾಳೆ ನೋಡಲು ಯೋಜಿಸಿದೆ.

ಕಳೆದ ತಿಂಗಳು ಕಾರ್ಯಾಚರಣೆ ನಡೆಸಿದ್ದ ಇಒಯು ಫ್ಲಾಟ್‌ವೊಂದರಿಂದ ಭಾಗಶಃ ಸುಟ್ಟಿದ್ದ ಪ್ರಶ್ನೆ ಪತ್ರಿಕೆಗಳನ್ನು ವಶಪಡಿಸಿಕೊಂಡಿತ್ತು. ಅಲ್ಲದೆ ಈ ಪ್ರಕರಣದಲ್ಲಿ ಇಲ್ಲಿಯವರೆಗೆ 13 ಜನರನ್ನೂ ಬಂಧಿಸಿದೆ.

'ತನಿಖೆಯ ಭಾಗವಾಗಿ ನೀಟ್-ಯುಜಿ ಪರೀಕ್ಷೆಯ ಉಲ್ಲೇಖಿತ ಪ್ರಶ್ನೆ ಪತ್ರಿಕೆಗಳನ್ನು ಒದಗಿಸುವಂತೆ ಎನ್‌ಟಿಎ ಅನ್ನು ವಿನಂತಿಸಲಾಗಿತ್ತು. ಏಜೆನ್ಸಿಯು ಪ್ರಶ್ನೆ ಪತ್ರಿಕೆಗಳನ್ನು ಇದೀಗ ಒದಗಿಸಿದ್ದು, ಅದನ್ನು ನಾವು ವಶಪಡಿಸಿಕೊಂಡಿರುವ ಪತ್ರಿಕೆಗಳ ಜತೆ ತಾಳೆ ಮಾಡಿ ನೋಡುತ್ತೇವೆ' ಎಂದು ಇಒಯು ಮೂಲಗಳು ತಿಳಿಸಿವೆ.

ಮಂಪರು ಪರೀಕ್ಷೆ ಸಾಧ್ಯತೆ: ಈ ಪ್ರಕರಣದಲ್ಲಿ ಬಂಧಿತರಾಗಿರುವ ಕೆಲ ಆರೋಪಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸುವ ಸಾಧ್ಯತೆಯ ಕುರಿತು ಇಒಯು ಪೊಲೀಸರು ಪರಿಶೀಲಿಸುತ್ತಿದ್ದಾರೆ.

'ಕೆಲ ಆರೋಪಿಗಳು ಸ್ಪಂದಿಸುತ್ತಿಲ್ಲ. ಅವರ ಹೇಳಿಕೆಗಳಿಂದ ತನಿಖಾಧಿಕಾರಿ ತೃಪ್ತರಾಗಿಲ್ಲ. ಆದ್ದರಿಂದ ಆರೋಪಿಗಳ ಮಂಪರು ಪರೀಕ್ಷೆ ನಡೆಸುವ ಸಾಧ್ಯತೆಯೂ ಇದೆ. ಈ ವೇಳೆ ತನಿಖೆಗೆ ಹೊಸ ಮಾರ್ಗಗಳು ದೊರೆಯಬಹುದು ಎಂಬ ನಿರೀಕ್ಷೆಯನ್ನು ತನಿಖಾಧಿಕಾರಿಗಳು ಹೊಂದಿದ್ದಾರೆ' ಎಂದು ಮೂಲಗಳು ಹೇಳಿವೆ.

ನೀಟ್–ಯುಜಿ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ವಾರಾಣಸಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಸಮಿತಿಯ ಹೊಣೆಗಾರಿಕೆ ಏನು?

- ಪರೀಕ್ಷಾ ಕಾರ್ಯವಿಧಾನ, ದತ್ತಾಂಶ ಭದ್ರತೆಯಲ್ಲಿ ತರಬೇಕಾದ ಸುಧಾರಣೆ ಮತ್ತು ಎನ್‌ಟಿಎ ರಚನೆ ಹಾಗೂ ಕಾರ್ಯ ನಿರ್ವಹಣೆ ಕುರಿತು ಪರಿಶೀಲಿಸಬೇಕು
- ಪರೀಕ್ಷಾ ಪ್ರಕ್ರಿಯೆಯ ಆರಂಭದಿಂದ ಅಂತ್ಯದವರೆಗೆ ವಿಶ್ಲೇಷಿಸಬೇಕು. ಪರೀಕ್ಷಾ ವ್ಯವಸ್ಥೆಯಲ್ಲಿನ ದಕ್ಷತೆ ಸುಧಾರಣೆ ಮತ್ತು ಸಂಭವನೀಯ ದುಷ್ಕೃತ್ಯವನ್ನು ತಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಬೇಕು
- ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಮತ್ತು ಎನ್‌ಟಿಎ ಶಿಷ್ಟಾಚಾರಗಳ ಕುರಿತು ಸಂಪೂರ್ಣ ಪರಿಶೀಲನೆ ನಡೆಸಬೇಕು
- ಪರೀಕ್ಷೆಯ ಪ್ರತಿ ಹಂತದಲ್ಲೂ ಅನುಸರಿಸಬೇಕಾದ ಮತ್ತು ಅದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಮೇಲ್ವಿಚಾರಣಾ ವ್ಯವಸ್ಥೆ ಹಾಗೂ ಹಾಲಿ ವ್ಯವಸ್ಥೆಯನ್ನು ಬಲಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಬೇಕು
- ಪ್ರಶ್ನೆ ಪತ್ರಿಕೆಗಳ ಸೆಟ್ಟಿಂಗ್ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಭದ್ರತಾ ಶಿಷ್ಟಾಚಾರಗಳನ್ನು ಪರಿಶೀಲಿಸಿ, ವ್ಯವಸ್ಥೆಯ ದೃಢತೆಯನ್ನು ಹೆಚ್ಚಿಸಲು ಏನು ಮಾಡಬೇಕು ಎಂಬುದನ್ನು ತಿಳಿಸಬೇಕು

6 ಜನರ ಬಂಧಿಸಿದ ಪೊಲೀಸರು

ದೇವಘರ್ (ಪಿಟಿಐ): ನೀಟ್ ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಬಿಹಾರ ಪೊಲೀಸರು ಜಾರ್ಖಂಡ್‌ನ ದೇವಘರ್ ಜಿಲ್ಲೆಯಲ್ಲಿ ಸ್ಥಳೀಯ ಪೊಲೀಸರ ನೆರವಿನಿಂದ ಆರು ಜನರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಇಲ್ಲಿನ ದೇವಿಪುರ ಪೊಲೀಸ್ ಠಾಣೆ ವ್ಯಾಪ್ತಿಯ ಏಮ್ಸ್-ದೇವಘರ್ ಬಳಿಯ ಮನೆಯೊಂದರಿಂದ ಅವರನ್ನು ಶುಕ್ರವಾರ ರಾತ್ರಿ ಬಂಧಿಸಲಾಯಿತು. ಎಲ್ಲರನ್ನೂ ಬಿಹಾರಕ್ಕೆ ಕರೆದೊಯ್ಯಲಾಗಿದೆ ಎಂದು ಅವರು ಹೇಳಿದ್ದಾರೆ.

ಬಂಧಿತರು ಬಿಹಾರದ ನಳಂದ ಜಿಲ್ಲೆಯ ನಿವಾಸಿಗಳಾಗಿದ್ದು, ಪರಮ್‌ಜಿತ್ ಸಿಂಗ್ ಅಲಿಯಾಸ್ ಬಿಟ್ಟು, ಚಿಂಟು ಅಲಿಯಾಸ್ ಬಲದೇವ್ ಕುಮಾರ್, ಕಾಜು ಅಲಿಯಾಸ್ ಪ್ರಶಾಂತ್ ಕುಮಾರ್, ಅಜಿತ್ ಕುಮಾರ್, ರಾಜೀವ್ ಕುಮಾರ್ ಮತ್ತು ಪಂಕು ಕುಮಾರ್ ಎಂದು ಗುರುತಿಸಲಾಗಿದೆ. ಅವರೆಲ್ಲರೂ ಇಲ್ಲಿನ ಜುನು ಸಿಂಗ್ ಎಂಬುವರ ಮನೆಯಲ್ಲಿ ವಾಸಿಸುತ್ತಿದ್ದರು ಎಂದು ದೇವಘರ್ ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ವಿರೋಧಿಸಿ ಶನಿವಾರ ರಾಂಚಿಯಲ್ಲಿ ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದ ಆರ್‌ಜೆಡಿಯ ಜಾರ್ಖಂಡ್ ಘಟಕ, ಪ್ರತಿಭಟನೆ ಮುಂದೂಡಿದೆ.

ಇ.ಡಿ ತನಿಖೆ ಸಾಧ್ಯತೆ

ನವದೆಹಲಿ (ಪಿಟಿಐ): ನೀಟ್- ಯುಜಿ ಪರೀಕ್ಷಾ ಅಕ್ರಮಗಳ ಕುರಿತು ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುವ ಸಾಧ್ಯತೆ ಇದೆ. ಇಒಯು ಎಫ್‌ಐಆರ್ ಆಧರಿಸಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಇ.ಡಿ ತನಿಖೆ ನಡೆಸಬಹುದು. ಅಪರಾಧದ ಆದಾಯವನ್ನು ಗುರುತಿಸಲು ಮತ್ತು ಆರೋಪಿಗಳಿಗೆ ಸೇರಿದ ಆಸ್ತಿಗಳನ್ನು ಜಪ್ತಿ ಮಾಡುವ ಪ್ರಕ್ರಿಯೆಯನ್ನೂ ಅದು ಆರಂಭಿಸಬಹುದು ಎಂಬ ನಿರೀಕ್ಷೆಯಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಇಒಯು ಉನ್ನತ ಅಧಿಕಾರಿಗಳು ತನಿಖೆಯ ಭಾಗವಾಗಿ ದೆಹಲಿಯಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಗಳು ಮತ್ತು ಇತರ ಸಂಬಂಧಿತ ವಿಭಾಗಗಳ ಅಧಿಕಾರಿಗಳ ಜತೆಯೂ ಸಮಾಲೋಚನೆ ನಡೆಸಲಿದ್ದಾರೆ ಎಂದು ಗೊತ್ತಾಗಿದೆ.

'ನೆಟ್' ಪ್ರಶ್ನೆ ಪತ್ರಿಕೆ ಸೋರಿಕೆ ಸಿಬಿಐನಿಂದ ವ್ಯಕ್ತಿ ವಿಚಾರಣೆ

ನವದೆಹಲಿ (ಪಿಟಿಐ): ಯುಜಿಸಿ- ನೆಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಕುರಿತು ತನಿಖೆ ಆರಂಭಿಸಿರುವ ಸಿಬಿಐ ಶನಿವಾರ ಉತ್ತರ ಪ್ರದೇಶದ ಕುಶಿನಗರದಲ್ಲಿ ವ್ಯಕ್ತಿಯೊಬ್ಬನನ್ನು ವಿಚಾರಣೆಗೆ ಒಳಪಡಿಸಿದೆ.

ಶಂಕಿತ ಆರೋಪಿಯು ಪ್ರಶ್ನೆ ಪತ್ರಿಕೆಯ ಒಂದು ಭಾಗವನ್ನು 'ಟೆಲಿಗ್ರಾಮ್' ಆ್ಯಪ್‌ನಲ್ಲಿ ಪೋಸ್ಟ್ ಮಾಡಿದ್ದ ಎನ್ನಲಾಗಿದ್ದು, ಆತ ರಾಜಸ್ಥಾನದ ಕೋಟಾದಲ್ಲಿ ಪರೀಕ್ಷೆಗೆ ತರಬೇತಿ ಪಡೆದಿದ್ದ ಎಂದು ಗೊತ್ತಾಗಿದೆ.

'ನೆಟ್' ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಕೇಂದ್ರ ಶಿಕ್ಷಣ ಸಚಿವಾಲಯ ಸಿಬಿಐ ತನಿಖೆಗೆ ವಹಿಸಿದ್ದು, ಸಿಬಿಐ ಈ ಕುರಿತು ಗುರುವಾರ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಕಿರಿಯ ಸಂಶೋಧನಾ ಫೆಲೊ, ಸಹಾಯಕ ಪ್ರಾಧ್ಯಾಪಕರು ಮತ್ತು ಪಿಎಚ್‌.ಡಿ ಪ್ರವೇಶಕ್ಕಾಗಿನ ಅರ್ಹತೆಗಾಗಿ ನಡೆಯುವ ಯುಜಿಸಿ-ನೆಟ್ ಪರೀಕ್ಷೆಯು ಜೂನ್ 18ರಂದು ದೇಶದಾದ್ಯಂತ ಜರುಗಿತ್ತು.

ಡಾರ್ಕ್‌ನೆಟ್‌ನಲ್ಲಿ ಲಭ್ಯವಿದ್ದ ಪತ್ರಿಕೆ: ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆಯು 'ಡಾರ್ಕ್‌ನೆಟ್'ನಲ್ಲಿ ಲಭ್ಯವಿರುವ ಬಗ್ಗೆ ಮತ್ತು ಇನ್‌ಸ್ಟಾಗ್ರಾಂನಲ್ಲಿ ₹ 5 ಲಕ್ಷದಿಂದ ₹ 6 ಲಕ್ಷಕ್ಕೆ ಮಾರಾಟವಾಗುತ್ತಿರುವ ಕುರಿತು ಗೃಹ ಸಚಿವಾಲಯದ ಅಡಿಯಲ್ಲಿರುವ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ ನ್ಯಾಷನಲ್ ಸೈಬರ್ ಕ್ರೈಮ್ ಥ್ರೆಟ್ ಅನಾಲಿಟಿಕ್ಸ್ ಯೂನಿಟ್ ಯುಜಿಸಿಗೆ ಮಾಹಿತಿ ರವಾನಿಸಿತ್ತು. ಇದನ್ನು ಆಧರಿಸಿ ಶಿಕ್ಷಣ ಸಚಿವಾಲಯವು ಮೇಲ್ನೋಟಕ್ಕೆ ಪರೀಕ್ಷಾ ಪಾರದರ್ಶಕತೆಗೆ ಧಕ್ಕೆಯುಂಟಾಗಿದೆ ಎಂದು ಯುಜಿಸಿ-ನೆಟ್ ಪರೀಕ್ಷೆಯನ್ನು ರದ್ದುಗೊಳಿಸಿ ಆದೇಶಿಸಿತು.

ರಾಮನ ಮೂರ್ತಿ ಪ್ರತಿಷ್ಠಾಪನೆ ಮಾಡಿಸಿದ್ದ ಪ್ರಧಾನ ಅರ್ಚಕ ನಿಧನ

ಪ್ರಜಾವಾಣಿ ವಾರ್ತೆ

ವಾರಾಣಸಿ: ಅಯೋಧ್ಯೆಯಲ್ಲಿ ಬಾಲ ರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ವಿಧಿಗಳನ್ನು ನೆರವೇರಿಸಿದ್ದ ಪ್ರಧಾನ ಅರ್ಚಕ ಆಚಾರ್ಯ ಲಕ್ಷ್ಮೀಕಾಂತ ದೀಕ್ಷಿತ್ (86) ಶನಿವಾರ ನಿಧನರಾದರು.

ಕೆಲ ದಿನಗಳಿಂದ ಅನಾರೋಗ್ಯಪೀಡಿತರಾಗಿದ್ದ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬೆಳಗಿನ 6.45ಕ್ಕೆ ಅವರು ಕೊನೆಯುಸಿರೆಳೆದರು. ಅವರ ಅಂತ್ಯಕ್ರಿಯೆಯನ್ನು ಮಣಿಕರ್ಣಿಕಾ ಘಾಟ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ದೀಕ್ಷಿತ್ ಅವರು ವೇದಗಳಲ್ಲಿ ಅಪಾರ ಪಾಂಡಿತ್ಯವುಳ್ಳರಾಗಿದ್ದರು. ಜನವರಿ 22ರಂದು ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ 12 ಅರ್ಚಕರಿದ್ದ ತಂಡವನ್ನು ಇವರು ಮುನ್ನಡೆಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು 'ಯಜಮಾನ' ಸ್ಥಾನದಲ್ಲಿದ್ದು, ಪ್ರಾಣ ಪ್ರತಿಷ್ಠಾಪನೆಯ ಧಾರ್ಮಿಕ ವಿಧಿಗಳನ್ನು ನೆರವೇರಿಸಿದ್ದರು. ಅವರು ಇಲ್ಲಿನ ಮೀರ್ ಘಾಟ್‌ನಲ್ಲಿರುವ ಸಂಗದೇವ ಮಹಾವಿದ್ಯಾಲಯದಲ್ಲಿ ಹಿರಿಯ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಲಕ್ಷ್ಮೀಕಾಂತ ದೀಕ್ಷಿತ್ ಅವರ ಹಿರಿಯರು ಮಹಾರಾಷ್ಟ್ರದ ಸೊಲ್ಲಾಪುರದವರು. ಹಲವು ತಲೆಮಾರುಗಳಿಂದ ಅವರ ಕುಟುಂಬ ವಾರಾಣಸಿಯಲ್ಲಿಯೇ ನೆಲೆಸಿದೆ. ಇವರ ಪೂರ್ವಜರು ಆಗಿನ ನಾಗ್ಪುರ ಮತ್ತು ನಾಶಿಕ್ ರಾಜಸಂಸ್ಥಾನಗಳಲ್ಲಿ ಅರ್ಚಕರಾಗಿದ್ದರು.

ತಿರುಚ್ಚಿಯ ಮಹಿಳೆಯರು ಕಳ್ಳಬಟ್ಟಿ ತಯಾರಿಸುವುದಿಲ್ಲ ಮತ್ತು ಸೇವಿಸುವುದಿಲ್ಲ ಎಂದು ಶನಿವಾರ ಶಪಥ ಕೈಗೊಂಡರು —ಪಿಟಿಐ ಚಿತ್ರ

ಕಠಿಣ ಕಾನೂನು ಜಾರಿಗೆ

ಒಂದನೇ ಪುಟದಿಂದ...

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ), ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ), ರೈಲ್ವೆ, ಬ್ಯಾಂಕಿಂಗ್ ನೇಮಕಾತಿಗೆ ನಡೆಸುವ ಪರೀಕ್ಷೆಗಳು ಹಾಗೂ ಎನ್‌ಟಿಎ ನಡೆಸುವ ಪರೀಕ್ಷೆಗಳು ಸೇರಿದಂತೆ ವಿವಿಧ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆಯುವುದನ್ನು ತಡೆಯುವ ಉದ್ದೇಶವನ್ನು ಕಾಯ್ದೆಯು ಹೊಂದಿದೆ.

ತಪ್ಪು ಮಾಡಿರುವುದು ಸಾಬೀತಾದರೆ ಈ ಕಾಯ್ದೆಯ ಅಡಿಯಲ್ಲಿ ಕನಿಷ್ಠ ಮೂರರಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಸಾಧ್ಯವಿದೆ. ವಂಚನೆಯಂತಹ ಅಪರಾಧವನ್ನು ಸಂಘಟಿತವಾಗಿ ಎಸಗಿದವರಿಗೆ ಐದರಿಂದ 10 ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಹಾಗೂ ಕನಿಷ್ಠ ₹1 ಕೋಟಿ ದಂಡ ವಿಧಿಸಲು ಅವಕಾಶ ಇದೆ.

ಈ ಕಾಯ್ದೆಯು ಜಾರಿಗೆ ಬರುವ ಮೊದಲು, ಸರ್ಕಾರ ಅಥವಾ ಸರ್ಕಾರದ ಸಂಸ್ಥೆಗಳು ನಡೆಸುವ ಪರೀಕ್ಷೆಗಳಲ್ಲಿ ಅಕ್ರಮಗಳನ್ನು ಎಸಗುವವರಿಗೆ ಶಿಕ್ಷೆ ವಿಧಿಸಲು ನಿರ್ದಿಷ್ಟವಾದ ಕಾನೂನು ಇರಲಿಲ್ಲ.

ಹಾನಿ ನಿಯಂತ್ರಣದ ಯತ್ನ: ಕಾಂಗ್ರೆಸ್

ನವದೆಹಲಿ (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಎಸಗಿದವರಿಗೆ ಕಠಿಣ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ಕಾಯ್ದೆ ಜಾರಿಗೆ ತಂದಿರುವ ಕೇಂದ್ರದ ಕ್ರಮವು, ಹಾನಿ ನಿಯಂತ್ರಣಕ್ಕೆ ಯತ್ನಿಸುವಂತಿದೆ ಎಂದು ಕಾಂಗ್ರೆಸ್ ಟೀಕಿಸಿದೆ.

ಕಾನೂನನ್ನು ಜಾರಿಗೆ ತರುವ ಅಗತ್ಯ ಇತ್ತು. ಆದರೆ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರ ಅಕ್ರಮಗಳು ನಡೆದ ನಂತರ ಇದು ಜಾರಿಗೆ ಬಂದಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

ರಾಷ್ಟ್ರಪತಿಯವರು ಈ ಮಸೂದೆಗೆ ಫೆ. 13ರಂದು ಅಂಕಿತ ಹಾಕಿದ್ದಾರೆ. ಆದರೆ, ಕಾಯ್ದೆಯು ಶುಕ್ರವಾರದಿಂದ ಜಾರಿಗೆ ಬಂದಿದೆ ಎಂಬುದನ್ನು ದೇಶಕ್ಕೆ ಈ ದಿನ (ಶನಿವಾರ) ಬೆಳಿಗ್ಗೆ ತಿಳಿಸಲಾಗಿದೆ ಎಂದು ರಮೇಶ್ ಅವರು ಹೇಳಿದ್ದಾರೆ. ನೀಟ್, ಯುಜಿಸಿ–ನೆಟ್, ಸಿಎಸ್‌ಐಆರ್–ಯುಜಿಸಿ–ನೆಟ್ ಮತ್ತು ಇತರ ಹಗರಣಗಳಿಂದ ಆಗಿರುವ ಹಾನಿಯನ್ನು ಕಡಿಮೆ ಮಾಡುವ ಒಂದು ಯತ್ನ ಇದು ಎಂಬುದು ಸ್ಪಷ್ಟ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. 'ಪ್ರಶ್ನೆಪತ್ರಿಕೆ ಸೋರಿಕೆ ಆಗದೆ ಇರುವಂತೆ ನೋಡಿಕೊಳ್ಳುವ ಕಾನೂನುಗಳು, ವ್ಯವಸ್ಥೆಗಳು, ಪ್ರಕ್ರಿಯೆಗಳನ್ನು ರೂಪಿಸುವುದು ಹೆಚ್ಚು ಮುಖ್ಯ' ಎಂದು ಸರ್ಕಾರಕ್ಕೆ ಕಿವಿಮಾತು ಹೇಳಿದ್ದಾರೆ.

ಹೊಸ ಕಾನೂನು ಜಾರಿಗೊಳಿಸುವುದು ತಪ್ಪನ್ನು ಮರೆಮಾಚಲು ಬಿಜೆಪಿ ನಡೆಸಿರುವ ಯತ್ನ ಮಾತ್ರ. ಶಿಕ್ಷಣ ವ್ಯವಸ್ಥೆ ಹಾಗೂ ಸ್ವಾಯತ್ತ ಸಂಸ್ಥೆಗಳನ್ನು ಹಸ್ತಕ್ಷೇಪ ಮತ್ತು ಬಿಜೆಪಿ–ಆರ್‌ಎಸ್‌ಎಸ್‌ನ ನಕಾರಾತ್ಮಕ ಪ್ರಭಾವದಿಂದ ಹೊರತರುವವರೆಗೂ ವಂಚನೆ ಮುಂದುವರಿಯುತ್ತದೆ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

9.15ರ ವೇಳೆಗೆ ಕಚೇರಿಯಲ್ಲಿ ಹಾಜರು ನೌಕರರಿಗೆ ಕೇಂದ್ರ ಸರ್ಕಾರ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಚೇರಿಗಳಿಗೆ ತಡವಾಗಿ ಬರುವ ಉದ್ಯೋಗಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿರುವ ಕೇಂದ್ರ ಸರ್ಕಾರ, ಹಿರಿಯ ಅಧಿಕಾರಿಗಳು ಸೇರಿದಂತೆ ಎಲ್ಲ ಸರ್ಕಾರಿ ಉದ್ಯೋಗಿಗಳು ಕಚೇರಿಯಲ್ಲಿ ಬೆಳಿಗ್ಗೆ 9ರ ಒಳಗೆ ಹಾಜರಿರಬೇಕು ಎಂದು ಸೂಚಿಸಿದೆ.

ಕೇಂದ್ರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಗರಿಷ್ಠ 15 ನಿಮಿಷಗಳಷ್ಟು ರಿಯಾಯಿತಿಯನ್ನು ನೀಡಿದೆ. ಹೀಗಾಗಿ, ಬೆಳಿಗ್ಗೆ 9.15ರ ವೇಳೆಗೆ ಎಲ್ಲ ನೌಕರರು ಕಚೇರಿಗಳಲ್ಲಿ ಹಾಜರಿರುವುದು ಕಡ್ಡಾಯವಾಗಲಿದೆ.

ಒಂದು ವೇಳೆ, 9.15ರ ನಂತರ ಕಚೇರಿಗೆ ಬಂದಲ್ಲಿ, ಸಂಬಂಧಪಟ್ಟ ಉದ್ಯೋಗಿಯದ್ದು ಅರ್ಧ ದಿನ ಸಾಂದರ್ಭಿಕ ರಜೆ ಎಂದು ಪರಿಗಣಿಸಲಾಗುವುದು ಎಂದು ಡಿಒಪಿಟಿ ತಿಳಿಸಿದೆ.

ವಿವಿಧ ಸಚಿವಾಲಯಗಳು ಹಾಗೂ ವಿವಿಧ ಇಲಾಖೆಗಳ ನೌಕರರ ಕಚೇರಿ ಸಮಯ ಬೆಳಿಗ್ಗೆ 9ರಿಂದ ಸಂಜೆ 5.30ರ ವರೆಗೆ. ಈ ನಡುವೆ, ಮಧ್ಯಾಹ್ನ 1ರಿಂದ 1.30ರ ವರೆಗೆ ಊಟಕ್ಕೆ ಬಿಡುವು ಇರಲಿದೆ.

ಇನ್ನು, ಕೇಂದ್ರ ಸರ್ಕಾರದ ಇತರ ಕಚೇರಿಗಳ ಕೆಲಸದ ಸಮಯ ಬೆಳಿಗ್ಗೆ 9.30ರಿಂದ ಸಂಜೆ 6.30 ಇದ್ದು, ಮಧ್ಯಾಹ್ನ 1.30ರಿಂದ 2ರ ವರೆಗೆ ಊಟದ ಬಿಡುವು ಇರಲಿದೆ ಎಂದು ಡಿಒಪಿಟಿ ತನ್ನ ಆದೇಶದಲ್ಲಿ ತಿಳಿಸಿದೆ.

'ಕೆಲ ನೌಕರರು ಕಚೇರಿಗೆ ತಡವಾಗಿ ಬರುವುದು ಹಾಗೂ ಬೇಗನೆ ಕಚೇರಿಯಿಂದ ಹೊರಡುತ್ತಿರುವುದು ಗಮನಕ್ಕೆ ಬಂದಿದೆ' ಎಂದೂ ಹೇಳಿದೆ.

'ಎಲ್ಲ ನೌಕರರು ಆಧಾರ್ ಸಂಖ್ಯೆ ಆಧರಿತ ಬಯೊಮೆಟ್ರಿಕ್ ಹಾಜರಿ ವ್ಯವಸ್ಥೆಯನ್ನು ಬಳಸಬೇಕು. ಕೋವಿಡ್–19 ಪಿಡುಗಿನ ವೇಳೆ, ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿತ್ತು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇ.ಡಿ ದಾಳಿಯಲ್ಲಿ ₹1 ಕೋಟಿ ವಶ

ರಾಂಚಿ (ಪಿಟಿಐ): ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತಿತರರ ವಿರುದ್ಧ ದಾಖಲಾಗಿರುವ ಭೂಕಬಳಿಕೆ ಪ್ರಕರಣದ ನಂಟಿನ ಹಣ ಅಕ್ರಮ ವರ್ಗಾವಣೆಯ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ), ರಾಂಚಿಯಲ್ಲಿ ದಾಳಿ ನಡೆಸಿ ₹ 1 ಕೋಟಿ ನಗದು ಹಾಗೂ 100 ಗುಂಡುಗಳನ್ನು ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕಮಲೇಶ್ ಸಿಂಗ್ ಎಂಬುವರಿಗೆ ಸೇರಿರುವ ಕಾಂಕೆ ರಸ್ತೆಯ ಆವರಣದಿಂದ ಶುಕ್ರವಾರ ಸಂಜೆ ಇವುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮಾಜಿ ಮುಖ್ಯಮಂತ್ರಿ, ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ನಾಯಕ ಹೇಮಂತ್ ಸೊರೇನ್ ವಿರುದ್ಧ ದಾಖಲಾಗಿರುವ ಭೂಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿಗಳು ನಡೆದಿವೆ. ಆದರೆ, ಬೇರೆ ಭೂಕಬಳಿಕೆಗೆ ಸಂಬಂಧಿಸಿವೆ ಎಂದು ಮೂಲಗಳು ತಿಳಿಸಿವೆ.

ಕಲ್ಲಕುರಿಚ್ಚಿ ವಿಷಪೂರಿತ ಮದ್ಯಸೇವನೆ ಪ್ರಕರಣ

ಸಿಬಿಐ ತನಿಖೆಗೆ ಒಪ್ಪಿಸಲು ನಕಾರ

ಚೆನ್ನೈ (ಪಿಟಿ): ಕಲ್ಲಕುರಿಚ್ಚಿಯಲ್ಲಿ ನಡೆದ ವಿಷಪೂರಿತ ಮದ್ಯಸೇವನೆ ಪ್ರಕರಣವು ಸತತ ಎರಡನೇ ದಿನವಾದ ಶನಿವಾರ ತಮಿಳುನಾಡು ಅಧಿವೇಶನದಲ್ಲಿ ಪ್ರತಿಧ್ವನಿಸಿತು. ಪ್ರಮುಖ ಪ್ರತಿಪಕ್ಷ ಎಐಎಡಿಎಂಕೆ, ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿ ಸದನ ಬಹಿಷ್ಕರಿಸಿ ಹೊರನಡೆಯಿತು.

ಅತ್ಯಂತ ನೋವಿನ ವಿಚಾರದಲ್ಲಿ ಡಿಎಂಕೆ ಪಕ್ಷವು ರಾಜಕೀಯ ಮಾಡುತ್ತಿದ್ದು, ತನಿಖೆ ಪಾರದರ್ಶಕವಾಗಿ ನಡೆಯುತ್ತಿದೆ. ಸಿಬಿಐ ತನಿಖೆಗೆ ಒಪ್ಪಿಸಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ಬೇಡಿಕೆ ನಿರಾಕರಿಸಿತು.

'ರಾಜ್ಯ ಸರ್ಕಾರ ಪಾರದರ್ಶಕವಾಗಿದೆ. ನಾವು ಯಾವುದೇ ವಿಚಾರವನ್ನು ಮುಚ್ಚಿಟ್ಟಿಲ್ಲ. ಸಿಬಿಐ ತನಿಖೆ ನಡೆಸುವ ಅಗತ್ಯವಿಲ್ಲ' ಎಂದು ಕಾನೂನು ಸಚಿವ ಎಸ್. ರಘುಪತಿ ಸದನದಲ್ಲಿ ತಿಳಿಸಿದರು.

ಸಾವಿನ ಸಂಖ್ಯೆ 53ಕ್ಕೆ ಏರಿಕೆ: ಕಲ್ಲಕುರಿಚ್ಚಿಯಲ್ಲಿ ವಿಷಯುಕ್ತ ಮದ್ಯಸೇವನೆ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 53ಕ್ಕೆ ಏರಿಕೆಯಾಗಿದೆ. 140 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯಾಡಳಿತವು ತಿಳಿಸಿದೆ.

'ಜಿಲ್ಲೆಯಲ್ಲಿ ಮಂಗಳವಾರ ವಿಷಪೂರಿತ ಮದ್ಯಸೇವಿಸಿದ್ದ 193 ಮಂದಿ ಪೈಕಿ 140 ಮಂದಿಯನ್ನು ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ದಾಖಲಾದವರಿಗೆ ಯಾವುದೇ ಅಪಾಯವಿಲ್ಲ' ಎಂದು ಕಲ್ಲಕುರಿಚ್ಚಿ ಜಿಲ್ಲಾಧಿಕಾರಿ ಎಂ.ಎಸ್. ಪ್ರಶಾಂತ್ ತಿಳಿಸಿದರು.

'ಇದುವರೆಗೂ 53 ಮಂದಿ ಮೃತಪಟ್ಟಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 7 ಮಂದಿಯನ್ನು ಬಂಧಿಸಲಾಗಿದೆ' ಎಂದು ಆಸ್ಪತ್ರೆಯಲ್ಲಿ ಸಂತ್ರಸ್ತರನ್ನು ಭೇಟಿಯಾಗಿ ತಿಳಿಸಿದರು.

ಬಿಹಾರ: ಮತ್ತೊಂದು ಸೇತುವೆ ಕುಸಿತ

ಸಿವಾನ್ (ಪಿಟಿಐ): ಬಿಹಾರದ ಸಿವಾನ್ ಜಿಲ್ಲೆಯ ಸಣ್ಣ ಸೇತುವೆಯೊಂದು ಶನಿವಾರ ಬೆಳಿಗ್ಗೆ ಕುಸಿದಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇತ್ತೀಚೆಗಷ್ಟೇ ರಾಜ್ಯದ ಅರಾರಿಯದಲ್ಲಿ ಹೊಸ ಸೇತುವೆಯೊಂದು ಕುಸಿದಿತ್ತು. ಅದರ ಬೆನ್ನಲ್ಲೇ ಮತ್ತೊಂದು ಸೇತುವೆ ಕುಸಿದು ಬಿದ್ದಿದೆ.

ದುರೌಂಧಾ ಮತ್ತು ಮಹಾರಾಜಗಂಜ್ ತಾಲ್ಲೂಕುಗಳ ಕೆಲ ಹಳ್ಳಿಗಳನ್ನು ಸಂಪರ್ಕಿಸುವ ಈ ಸೇತುವೆಯನ್ನು ಕಾಲುವೆಯ ಮೇಲೆ ನಿರ್ಮಿಸಲಾಗಿತ್ತು. ಅದು ಮುಂಜಾನೆ 5 ಗಂಟೆ ಸುಮಾರಿಗೆ ಕುಸಿದಿದೆ ಎಂದು ಜಿಲ್ಲಾಧಿಕಾರಿ ಮುಕುಲ್ ಕುಮಾರ್ ಗುಪ್ತಾ ತಿಳಿಸಿದ್ದಾರೆ. ಈ ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಇದು ತುಂಬಾ ಹಳೆಯ ಸೇತುವೆಯಾಗಿದ್ದು, ಕಾಲುವೆಯಲ್ಲಿ ನೀರು ಬಿಡುವಾಗ ಪಿಲ್ಲರ್‌ಗಳು ಕುಸಿದಿವೆ.

ನಿಷೇಧ ಕ್ರಮ ಎತ್ತಿಹಿಡಿದ ನ್ಯಾಯಮಂಡಳಿ

ನವದೆಹಲಿ (ಪಿಟಿಐ): ಮುಸ್ಲಿಂ ಲೀಗ್ ಜಮ್ಮು ಮತ್ತು ಕಾಶ್ಮೀರ (ಮಸರತ್ ಆಲಂ ಬಣ) ಹಾಗೂ ಜಮ್ಮು ಮತ್ತು ಕಾಶ್ಮೀರದ ತೆಹರೀಕ್–ಎ–ಹುರಿಯತ್ ಸಂಘಟನೆಗಳ ಮೇಲೆ ಐದು ವರ್ಷಗಳ ಅವಧಿಗೆ ನಿಷೇಧ ಹೇರಿದ ಕೇಂದ್ರ ಸರ್ಕಾರದ ತೀರ್ಮಾನವನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿ ಸ್ಥಾಪಿಸಲಾಗಿರುವ ನ್ಯಾಯಮಂಡಳಿಯು ಶನಿವಾರ ಎತ್ತಿಹಿಡಿದಿದೆ.

ನಿಷೇಧ ಹೇರುವುದಕ್ಕೆ ಬಲವಾದ ಕಾರಣಗಳು ಇವೆಯೇ ಎಂಬುದನ್ನು ಪರಿಶೀಲಿಸಲು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಸಚಿನ್ ದತ್ತ ಅವರು ಇದ್ದ ಏಕಸದಸ್ಯ ನ್ಯಾಯಮಂಡಳಿಯನ್ನು ಯುಎಪಿಎ ಅಡಿಯಲ್ಲಿ ಜನವರಿಯಲ್ಲಿ ರಚಿಸಲಾಗಿತ್ತು.

ಈ ಎರಡು ಸಂಘಟನೆಗಳು ಗಡಿಯಾಚೆಯಿಂದ ಬೆಂಬಲ ಪಡೆದು, ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನದ ಜೊತೆ ವಿಲೀನಗೊಳಿಸಲು ಹಾಗೂ ಇಸ್ಲಾಮಿಕ್ ಆಡಳಿತವನ್ನು ಸ್ಥಾಪಿಸಲು ಕಣಿವೆಯಲ್ಲಿ ಪ್ರತ್ಯೇಕತಾವಾದಿ ಚಟುವಟಿಕೆಗಳನ್ನು ನಡೆಸುತ್ತಿದ್ದವು ಎಂದು ನ್ಯಾಯಮಂಡಳಿಯು ಹೇಳಿದೆ.

ಝೆಕ್–ಜಾರ್ಜಿಯಾ ಪಂದ್ಯ ಡ್ರಾ

ಹ್ಯಾಂಬರ್ಗ್ (ಜರ್ಮನಿ), (ಎಪಿ): ಜಾರ್ಜಿಯಾ ತಂಡ ಯುರೊ 2024 ಫುಟ್‌ಬಾಲ್ ಟೂರ್ನಿಯ 'ಎಫ್' ಗುಂಪಿನ ಪಂದ್ಯದಲ್ಲಿ ಶನಿವಾರ ಝೆಕ್ ರಿಪಬ್ಲಿಕ್ ತಂಡದ ವಿರುದ್ಧ 1-1 ಡ್ರಾ ಸಾಧಿಸಿತು. ಆ ಮೂಲಕ ಪ್ರಮುಖ ಟೂರ್ನಿಯೊಂದರಲ್ಲಿ ಮೊದಲ ಬಾರಿ ಪಾಯಿಂಟ್ ಪಡೆಯಿತು.

ವಿಡಿಯೊ ಮರುಪರಿಶೀಲನೆ ಮತ್ತೆ ಬಳಕೆಯಾಯಿತು. ಇದರಿಂದಾಗಿ ಝೆಕ್ ತಂಡದ ಆ್ಯಡಂ ಹ್ಲೊಝೆಕ್ ಅವರಿಗೆ ಗೋಲು ನಿರಾಕರಿಸಲಾಯಿತು. ಅವರ ಕೈ ಚೆಂಡಿಗೆ ತಾಗಿದ್ದು ಗೋಚರವಾಯಿತು.

ಈ ಟೂರ್ನಿಯಲ್ಲಿ ಪದಾರ್ಪಣೆ ಮಾಡುತ್ತಿರುವ ಏಕೈಕ ತಂಡವಾಗಿರುವ ಜಾರ್ಜಿಯಾ ವಿರಾಮಕ್ಕೆ ಕೆಲವೇ ಕ್ಷಣಗಳ ಮೊದಲು (45 + 4) ಮುನ್ನಡೆ ಪಡೆಯಿತು. ಝೆಕ್ ರಕ್ಷಣೆ ಆಟಗಾರ ರಾಬಿನ್ ಹ್ರನೆಕ್ ಅವರಿಗೆ ಕೈಗೆ ಚೆಂಡು ತಗುಲಿದ ಕಾರಣ ಜಾರ್ಜಿಯಾಕ್ಕೆ 'ಪೆನಾಲ್ಟಿ' ನೀಡಲಾಯಿತು. ಇದನ್ನು ಗೋಲಾಗಿ ಪರಿವರ್ತಿಸುವಲ್ಲಿ ಜಾರ್ಜಸ್ ಮಿಕಾವುತೆಡ್ಜ್ ಯಶಸ್ವಿಯಾದರು.

ಆದರೆ ಝೆಕ್ ತಂಡ ವಿರಾಮ ಕಳೆದು 14 ನಿಮಿಷಗಳ ನಂತರ ಸ್ಕೋರ್ ಸಮ ಮಾಡಿಕೊಂಡಿತು. ಮುಂಚೂಣಿ ಆಟಗಾರರೊಬ್ಬರು ಹೆಡ್ ಮಾಡಿದ ಚೆಂಡು ಗೋಲುಗಂಬಕ್ಕೆ ಬಡಿದು ರಿಬೌಂಡ್ ಆದಾಗ ಪ್ಯಾಟ್ರಿಕ್ ಶಿಕ್ ಅದನ್ನು ಎದೆಯಿಂದ ಗೋಲಿನೊಳಕ್ಕೆ ಕಳುಹಿಸಿದರು. ಇದಾದ ಸ್ವಲ್ಪ ಹೊತ್ತಿನಲ್ಲೇ ಪ್ಯಾಟ್ರಿಕ್ ಮೀನಖಂಡದ ಗಾಯದಿಂದ ನಿರ್ಗಮಿಸಿದರು.

ಜಾರ್ಜಿಯಾಕ್ಕೆ ದೊರೆತ ಇನ್ನೊಂದು ಸುವರ್ಣಾವಕಾಶದಲ್ಲಿ ಸಬಾ ಲೊಬ್ಯಾನಿಡ್ಜ್ ವಿಫಲರಾದರು. ಪ್ರತಿದಾಳಿಯಿಂದ ದೊರೆತ ಅವಕಾಶದಲ್ಲಿ ಅವರು ಗೋಲಿನತ್ತ ಒದ್ದ ಚೆಂಡು ಅಡ್ಡಪಟ್ಟಿಯ ಮೇಲಿಂದ ಹಾದುಹೋಯಿತು.

ಈ ಡ್ರಾದಿಂದಾಗಿ ನಾಕೌಟ್ ಪ್ರವೇಶಿಸಬೇಕಾದರೆ ಈ ಎರಡು ತಂಡಗಳಲ್ಲಿ ಒಂದು ತಂಡ ತನ್ನ ಮುಂದಿನ ಪಂದ್ಯದಲ್ಲಿ ಗೆಲ್ಲುವುದು ಅನಿವಾರ್ಯವಾಗಿದೆ. ಪೋರ್ಚುಗಲ್ ಮತ್ತು ಟರ್ಕಿ ಈ ಗುಂಪಿನಲ್ಲಿರುವ ಇನ್ನೆರಡು ತಂಡಗಳಾಗಿವೆ.

ಗೋಲಿಲ್ಲದೇ 'ಡ್ರಾ': ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ನಡುವೆ ಶುಕ್ರವಾರ ರಾತ್ರಿ ನಡೆದ 'ಡಿ' ಗುಂಪಿನ ಪಂದ್ಯ ಗೋಲಿಲ್ಲದೇ ಡ್ರಾ ಆಯಿತು.

ಜಾರ್ಜಿಯಾದ ಡಿಫೆಂಡರ್ ಒಟಾರ್ ಕಕಾಬೇಡ್ಜ್ (ಎಡಗಡೆ) ಅವರು ಚೆಂಡಿನ ಮೇಲೆ ನಿಯಂತ್ರಣಕ್ಕಾಗಿ ಝೆಕ್ ರಿಪಬ್ಲಿಕ್‌ನ ಡೇವಿಡ್ ಜುರಾಸೆಕ್ (ಬಿಳಿ ಪೋಷಾಕು) ಜೊತೆ ಪೈಪೋಟಿಯಲ್ಲಿ ತೊಡಗಿದರು. ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಕೊಪಾ ಅಮೆರಿಕಾ ಟೂರ್ನಿ: 'ಡ್ರಾ' ಪಂದ್ಯದಲ್ಲಿ ಚಿಲಿ, ಪೆರು

ಆರ್ಲಿಂಗ್ಟನ್ (ಅಮೆರಿಕ), (ಎಎಫ್‌ಪಿ): ಎರಡು ಬಾರಿಯ ಚಾಂಪಿಯನ್ ಚಿಲಿ, ಕೊಪಾ ಅಮೆರಿಕಾ ಟೂರ್ನಿಯ ಮೊದಲ ಪಂದ್ಯವನ್ನು ಶುಕ್ರವಾರ ಪೆರು ಜೊತೆ ಗೋಲಿಲ್ಲದೇ ಡ್ರಾ ಮಾಡಿಕೊಂಡಿತು.

'ಎ' ಗುಂಪಿನ ಪಂದ್ಯದಲ್ಲಿ ಎರಡೂ ತಂಡಗಳು ಸಮಬಲದ ಹೋರಾಟ ನಡೆಸಿದವು. ಆದರೆ ಚಿಲಿ ತಂಡ ಒಂದೆರಡು ಅವಕಾಶಗಳಲ್ಲಿ ಗೋಲು ಗಳಿಸಲು ವಿಫಲವಾಯಿತು. ಹೀಗಾಗಿ ಗುಂಪಿನಿಂದ ಅರ್ಜೆಂಟೀನಾ ಮೊದಲ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಿದೆ.

ವಿಕ್ಟರ್ ದವಿಲ್ಲಾ ಅವರ ಕೆಳಮಟ್ಟದ ಪಾಸ್‌ನಲ್ಲಿ ಇಂಟರ್‌ಮಿಲಾನ್ ಫಾರ್ವರ್ಡ್ ಅಲೆಕ್ಸಿಸ್ ಸ್ಯಾಂಚೆಸ್ ಅವರು ಚೆಂಡನ್ನು ಗೋಲಿನೊಳಕ್ಕೆ ಕಳುಹಿಸಲು ಯಾರ ತಡೆಯೂ ಇರಲಿಲ್ಲ. ಕಾಲಾವಕಾಶವೂ ಇತ್ತು. ಆದರೆ 35 ವರ್ಷದ ಸ್ಯಾಂಚೆಸ್ ಒದ್ದ ಚೆಂಡು ಗೋಲು ಬಾರ್ ಮೇಲಿಂದ ಹೋಯಿತು. ವಿರಾಮ ಸಮೀಪಿಸುವಾಗ ಪೆರು ತಂಡಕ್ಕೆ ದೊರೆತ ಅವಕಾಶವೊಂದರಲ್ಲಿ ಗಿಯಾನ್‌ಲುಕಾ ಲಪಡುಲಾ ಅವರು ಗುರಿತಪ್ಪಿದರು.

ಪೆರು ವಿರುದ್ಧದ ಪಂದ್ಯದಲ್ಲಿ ಚಿಲಿ ತಂಡದ ಅಲೆಕ್ಸಿಸ್ ಸ್ಯಾಂಚೆಜ್ ಅವರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುವುದು —ಎಎಫ್‌ಪಿ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಶೇಖ್ ಹಸೀನಾ ಸಭೆ

ಸಹಕಾರ: ಒಪ್ಪಂದಗಳಿಗೆ ಭಾರತ, ಬಾಂಗ್ಲಾದೇಶ ಸಹಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಭಾರತಕ್ಕೆ ಭೇಟಿ ನೀಡಿರುವ ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಶನಿವಾರ ಸಭೆ ನಡೆಸಿದರು. ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯೂ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿ ಹಲವು ಒಪ್ಪಂದಗಳಿಗೆ ಉಭಯ ನಾಯಕರು ಸಹಿ ಹಾಕಿದರು.

ಕಡಲ ಗಡಿ ರಕ್ಷಣೆ ಹಾಗೂ ಸಾಗರ ಆರ್ಥಿಕತೆಯಲ್ಲಿ ಸಹಕಾರ, ಡಿಜಿಟಲ್ ಕ್ಷೇತ್ರದಲ್ಲಿ ಬಾಂಧವ್ಯ ವೃದ್ಧಿ, ಎರಡೂ ದೇಶಗಳ ನಡುವಿನ ರೈಲ್ವೆ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವುದು ಸೇರಿದಂತೆ ಹಲವು ಒಪ್ಪಂದಗಳಿಗೆ ಸಹಿ ಹಾಕಿದರು.

'ಉಭಯ ದೇಶಗಳ ನಡುವಿನ ಸಹಕಾರ ವೃದ್ಧಿ ಗಮನದಲ್ಲಿಟ್ಟುಕೊಂಡು ನಾವು ಯೋಜನೆ ರೂಪಿಸಿದ್ದೇವೆ. ಪರಿಸರ ಸ್ನೇಹಿ ಯೋಜನೆಗಳಲ್ಲಿ ಪಾಲುದಾರಿಕೆ, ಬಾಹ್ಯಾಕಾಶ, ಡಿಜಿಟಲ್ ಪಾಲುದಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಈ ಯೋಜನೆಗಳಿಂದ ಎರಡೂ ದೇಶಗಳ ಯುವ ಸಮುದಾಯಕ್ಕೆ ಪ್ರಯೋಜನವಾಗಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಭಾರತ ನಮ್ಮ ಪ್ರಮುಖ ನೆರೆಯ ದೇಶ ಮಾತ್ರವಲ್ಲ, ನಮ್ಮ ನಂಬಿಕಸ್ಥ ಮಿತ್ರರಾಷ್ಟ್ರವಾಗಿದೆ' ಎಂದು ಶೇಖ್ ಹಸೀನಾ ಹೇಳಿದ್ದಾರೆ.

ಗೌರವ: ಪ್ರಧಾನಿ ಮೋದಿ ಅವರೊಂದಿಗಿನ ಸಭೆಗೂ ಮುನ್ನ, ಹಸೀನಾ ಅವರು ರಾಜಘಾಟ್‌ಗೆ ತೆರಳಿ, ಮಹಾತ್ಮ ಗಾಂಧಿ ಅವರಿಗೆ ಗೌರವ ಸಲ್ಲಿಸಿದರು. ನಂತರ, ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರಿಗೆ ವಿಧ್ಯುಕ್ತ ಸ್ವಾಗತ ಕೋರಲಾಯಿತು.

ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಶನಿವಾರ ಮಾತುಕತೆ ನಡೆಸಿದರು —ಎಎಫ್‌ಪಿ ಚಿತ್ರ

ಚೀನಾ ದೂರವಿಡುವ ಉದ್ದೇಶ

ಭಾರತೀಯ ವಸ್ತುಗಳನ್ನು ಬಹಿಷ್ಕರಿಸಿ ಎಂಬ ಕೂಗು ಬಾಂಗ್ಲಾದೇಶದಲ್ಲಿ ಬಲವಾಗಿ ಕೇಳಿಬರುತ್ತಿದ್ದರೂ, ಆ ದೇಶದೊಂದಿಗೆ ಹಲವು ಒಪ್ಪಂದಗಳಿಗೆ ಭಾರತ ಸಹಿ ಹಾಕಿರುವುದು ಮಹತ್ವದ ಬೆಳವಣಿಗೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಚೀನಾ ನೀಡುವ ಕಡಿಮೆ ಬಡ್ಡಿ ದರದ ಸಾಲ ಪಡೆಯದಂತೆ ಬಾಂಗ್ಲಾದೇಶವನ್ನು ಮನವೊಲಿಸುವುದು ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬಾಂಗ್ಲಾದೇಶ ಚೀನಾವನ್ನು ಅವಲಂಬಿಸದಂತೆ ಮಾಡುವ ಕಾರ್ಯತಂತ್ರದ ಭಾಗವಾಗಿ ಭಾರತ ಹಲವು ಒಪ್ಪಂದಗಳಿಗೆ ಸಹಿ ಹಾಕಿದೆ.

ತೀಸ್ತಾ ನದಿ ನೀರು ನಿರ್ವಹಣೆಗೆ ಸಂಬಂಧಿಸಿದ ಯೋಜನೆ ಅನುಷ್ಠಾನಕ್ಕಾಗಿ ಬಾಂಗ್ಲಾದೇಶವು ಚೀನಾ ನೆರವನ್ನು ಪಡೆಯದಂತೆ ತಡೆಯುವ ಉದ್ದೇಶ ಭಾರತದ್ದು. ಭಾರತೀಯ ತಂತ್ರಜ್ಞರನ್ನು ಒಳಗೊಂಡ ತಂಡವೊಂದು ಶೀಘ್ರವೇ ಬಾಂಗ್ಲಾದೇಶಕ್ಕೆ ಭೇಟಿ ನೀಡಿ, ಯೋಜನೆಗೆ ಭಾರತ ಯಾವ ರೀತಿ ಹಣಕಾಸು ನೆರವು ನೀಡಲು ಸಾಧ್ಯ ಎಂಬ ಬಗ್ಗೆ ಪರಿಶೀಲನೆ ನಡೆಸಲಿದೆ.

ರಕ್ಷಣಾ ಕ್ಷೇತ್ರದಲ್ಲಿ ಬಾಂಗ್ಲಾದೇಶವು ಚೀನಾ ನೆರವನ್ನು ಪಡೆಯುತ್ತಿರುವುದಕ್ಕೆ ಭಾರತ ಕಳವಳ ವ್ಯಕ್ತಪಡಿಸುತ್ತಲೇ ಇದೆ. 2016ರಿಂದ ಈ ವರೆಗೆ ಬಾಂಗ್ಲಾದೇಶ ಚೀನಾದಿಂದ ಎರಡು ಜಲಾಂತರ್ಗಾಮಿಗಳನ್ನು ಖರೀದಿಸಿದೆ. ಕಾಕ್ಸ್ ಬಜಾರ್ ಬಳಿಯ ಪೆಕುವಾ ಎಂಬಲ್ಲಿ ಚೀನಾ ಜಲಾಂತರ್ಗಾಮಿ ನೆಲೆಯನ್ನು ಅಭಿವೃದ್ಧಿಪಡಿಸುತ್ತಿದೆ. ಇದು ಕೂಡ ಭಾರತದ ಆತಂಕಕ್ಕೆ ಕಾರಣವಾಗಿದೆ.

ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟ • ಕುಲದೀಪ್‌ಗೆ ಮೂರು ವಿಕೆಟ್ • ಬಾಂಗ್ಲಾಗೆ ನಿರಾಶೆ

ನಾಲ್ಕರ ಹತ್ತಿರ ರೋಹಿತ್ ಪಡೆ

ಪ್ರಜಾವಾಣಿ ವಾರ್ತೆ

ನಾರ್ತ್‌ಸೌಂಡ್: ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ಶನಿವಾರ ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟ ರಂಗೇರಿತು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಅಜೇಯ ಓಟವೂ ಮುಂದುವರಿಯಿತು.

ಸೂಪರ್ 8ರ ಹಂತದ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು 50 ರನ್‌ಗಳಿಂದ ಜಯಭೇರಿ ಬಾರಿಸಿದ ಭಾರತ ತಂಡವು ಸೆಮಿಫೈನಲ್‌ನತ್ತ ಮತ್ತೊಂದು ಹೆಜ್ಜೆ ಇಟ್ಟಿತು. ಈ ಹಂತದಲ್ಲಿ ಭಾರತಕ್ಕೆ ಇನ್ನೊಂದು ಪಂದ್ಯ (ಆಸ್ಟ್ರೇಲಿಯಾ ಎದುರು) ಮಾತ್ರ ಬಾಕಿ ಇದೆ. ಈ ಟೂರ್ನಿಯ ಗುಂಪು ಮತ್ತು ಸೂಪರ್ 8ರ ಘಟ್ಟದಲ್ಲಿ ರೋಹಿತ್ ಶರ್ಮಾ ಬಳಗವು ಒಂದೂ ಪಂದ್ಯದಲ್ಲಿ ಸೋತಿಲ್ಲ. ಆದರೆ ಬಾಂಗ್ಲಾದೇಶ ತಂಡವು ಆಡಿದ ಎರಡೂ ಪಂದ್ಯ \ ಗಳಲ್ಲಿ ಪರಾಭವಗೊಂಡು ನಿರ್ಗಮಿಸಿತು.

ಭಾರತದ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಆರಂಭಿಕ ಹಂತದಲ್ಲಿ ತುಸು ಹಿಡಿತ ಸಾಧಿಸುವಲ್ಲಿಯೂ ಯಶಸ್ವಿಯಾಯಿತು. ಆದರೆ 6ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಹಾರ್ದಿಕ್ (ಅಜೇಯ 50; 27ಎ, 4X4, 6X3) ಅವರ ಮಿಂಚಿನ ಆಟದ ಬಲದಿಂದ ಭಾರತವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 196 ರನ್ ಗಳಿಸಿತು. ಚೆಂದದ ಡ್ರೈವ್ ಮತ್ತು ಕಟ್‌ಗಳ ಮೂಲಕ ಹಾರ್ದಿಕ್ ಗಳಿಸಿದ ಬೌಂಡರಿಗಳು ಸೊಗಸಾಗಿದ್ದವು.

ಗುರಿ ಬೆನ್ನಟ್ಟಿದ ಬಾಂಗ್ಲಾದೇಶಕ್ಕೆ ಮೊದಲ ಆಘಾತ ನೀಡಿದವರೂ ಹಾರ್ದಿಕ್. ತಮ್ಮ ತಂಡಕ್ಕೆ ಉತ್ತಮ ಆರಂಭ ನೀಡಿದ್ದ ಲಿಟನ್ ದಾಸ್ (13; 10ಎ) ವಿಕೆಟ್ ಕಬಳಿಸಿದ ಹಾರ್ದಿಕ್ ಬಾಂಗ್ಲಾ ಪತನಕ್ಕೆ ಮುನ್ನುಡಿ ಬರೆದರು. ಅರ್ಷದೀಪ್ ಸಿಂಗ್ (30ಕ್ಕೆ2), ಜಸ್‌ಪ್ರೀತ್ ಬೂಮ್ರಾ (13ಕ್ಕೆ2) ಹಾಗೂ ಕುಲದೀಪ್ ಯಾದವ್ (19ಕ್ಕೆ3) ಅವರ ದಾಳಿಯ ಮುಂದೆ ಬಾಂಗ್ಲಾ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 146 ರನ್ ಗಳಿಸಲಷ್ಟೇ ಶಕ್ತವಾಯಿತು.

ವಿರಾಟ್ ಚೇತರಿಕೆ: ಟೂರ್ನಿಯ ಗುಂಪು ಹಂತದ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ವಿರಾಟ್ ಕೊಹ್ಲಿ ಇಲ್ಲಿ ತುಸು ಚೇತೋಹಾರಿ ಆಟವಾಡಿದರು. ರೋಹಿತ್ ಶರ್ಮಾ (23; 11ಎ) ಅವರೊಂದಿಗಿನ ಮೊದಲ ವಿಕೆಟ್ ಜೊತೆಯಾಟದಲ್ಲಿ ವಿರಾಟ್ 39 ರನ್ ಸೇರಿಸಿದರು.

2ನೇ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಹಾಗೂ ರಿಷಭ್ ಪಂತ್ (36; 24ಎ) ಅವರು 32 ರನ್ ಸೇರಿಸಿದರು. ಆದರೆ ಒಂಬತ್ತನೇ ಓವರ್ ಹಾಕಿದ ಹಸನ್ ಶಕೀಬ್ ಅವರು ವಿರಾಟ್ ಕೊಹ್ಲಿ ಓಟಕ್ಕೆ ತಡೆಯೊಡ್ಡಿದರು. ಅದೇ ಓವರ್‌ನ ಇನ್ನೊಂದು ಎಸೆತದಲ್ಲಿ ಸೂರ್ಯಕುಮಾರ್ ಯಾದವ್ ಔಟಾದರು. ಪಂತ್ ತಮ್ಮ ಆಟದಲ್ಲಿ ಎರಡು ಸಿಕ್ಸರ್ ಮತ್ತು 4 ಬೌಂಡರಿ ಬಾರಿಸಿದರು. 24 ಎಸೆತಗಳಲ್ಲಿ 36 ರನ್ ಹೊಡೆದರು. ಆಗಿನ್ನೂ ತಂಡದ ಮೊತ್ತ 100 ರನ್ ಕೂಡ ದಾಟಿರಲಿಲ್ಲ.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಶಿವಂ ದುಬೆ (34; 24ಎ) ಮತ್ತು ಅವರೊಂದಿಗೆ ಬಂದ ಹಾರ್ದಿಕ್ ಅವರಿಬ್ಬರೂ ಬೌಲರ್‌ಗಳ ಮೇಲೆ ಪ್ರಹಾರ ಆರಂಭಿಸಿದರು. ರಿಷದ್ ಹುಸೇನ್ ಹಾಕಿದ ಓವರ್‌ನಲ್ಲಿ ಶಿವಂ ಕ್ಲೀನ್‌ಬೌಲ್ಡ್ ಆಗುವುದರೊಂದಿಗೆ ಜೊತೆಯಾಟ ಮುರಿಯಿತು. ಹಾರ್ದಿಕ್ 27 ಎಸೆತಗಳಲ್ಲಿ ಅರ್ಧಶತಕ ಹೊಡೆದರು.

ಸ್ಕೋರ್ ಕಾರ್ಡ್

ಭಾರತ 5 ವಿಕೆಟ್‌ಗೆ 196 (20 ಓವರ್‌ಗಳಲ್ಲಿ)
ರೋಹಿತ್ ಸಿ ಜೇಕರ್ ಬಿ ಶಕೀಬ್ 23 (11ಎ, 4x3, 6x1)
ಕೊಹ್ಲಿ ಬಿ ತಂಜಿಮ್ 37 (28ಎ, 4x1, 6x3)
ರಿಷಭ್ ಸಿ ತಂಜಿಮ್ ಬಿ ರಿಷದ್ 36 (24ಎ, 4x4, 6x2)
ಸೂರ್ಯಕುಮಾರ್ ಸಿ ದಾಸ್ ಬಿ ತಂಜಿಮ್ 6 (2ಎ, 6x1)
ಶಿವಂ ಬಿ ರಿಷದ್ 34 (24ಎ, 6x3)
ಹಾರ್ದಿಕ್ ಪಾಂಡ್ಯ ಔಟಾಗದೇ 50 (27ಎ, 4x4, 6x3)
ಅಕ್ಷರ್ ಔಟಾಗದೇ 3 (5ಎ)
ಇತರೆ: 7 (ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-39 (ರೋಹಿತ್ ಶರ್ಮಾ, 3.4), 2-71 (ವಿರಾಟ್ ಕೊಹ್ಲಿ, 8.1), 3-77 (ಸೂರ್ಯಕುಮಾರ್ ಯಾದವ್, 8.3), 4-108 (ರಿಷಭ್ ಪಂತ್, 11.4), 5-161 (ಶಿವಂ ದುಬೆ , 17.2)
ಬೌಲಿಂಗ್: ಮೆಹದಿ ಹಸನ್ 4–0–28–0, ಶಕೀಬ್ ಅಲ್ ಹಸನ್ 3–0–37–1, ತಂಜಿಮ್ ಹಸನ್ ಶಕಿಬ್ 4–0–32–2, ಮುಸ್ತಫಿಜುರ್ ರೆಹಮಾನ್ 4–0–48–0, ರಿಷದ್ ಹುಸೇನ್ 3–0–43–2, ಮಹಮ್ಮದುಲ್ಲಾ 2–0–8–0

ಬಾಂಗ್ಲಾದೇಶ 8 ವಿಕೆಟ್‌ಗೆ 146 (20 ಓವರ್‌ಗಳಲ್ಲಿ)
ದಾಸ್ ಸಿ ಯಾದವ್ ಸಿ ಯಾದವ್ ಬಿ ಪಾಂಡ್ಯ 13 (10ಎ, 4X1, 6X1)
ತಂಜಿಮ್ ಎಲ್‌ಬಿಡಬ್ಲ್ಯು ಕುಲದೀಪ್ 29 (31ಎ, 4X4)
ನಜ್ಮುಲ್ ಹುಸೇನ್ ಸಿ ಅರ್ಷದೀಪ್ ಬಿ ಬೂಮ್ರಾ 40 (32ಎ, 4X1, 6X3)
ತೌಹಿದ್ ಎಲ್‌ಬಿಡಬ್ಲ್ಯು ಕುಲದೀಪ್ 4 (6ಎ)
ಶಕೀಬ್ ಸಿ ಶರ್ಮಾ ಬಿ ಕುಲದೀಪ್ 11 (7ಎ, 4X1, 6X1)
ಮಹಮುದುಲ್ಲಾ ಸಿ ಪಟೇಲ್ ಬಿ ಅರ್ಷದೀಪ್ 13 (15ಎ, 4X1)
ಜೇಕರ್ ಅಲಿ ಸಿ ಕೊಹ್ಲಿ ಬಿ ಅರ್ಷದೀಪ್ 1 (4ಎ)
ರಿಷದ್ ಸಿ ಶರ್ಮಾ ಬಿ ಬೂಮ್ರಾ 24 (10ಎ, 4X1, 6X3)
ಮೆಹದಿ ಹಸನ್ ಔಟಾಗದೇ 5 (4ಎ, 4X1)
ತಂಜಿಮ್ ಔಟಾಗದೇ 1 (1ಎ)
ಇತರೆ: 5 (ಎಲ್‌ಬಿ2, ವೈಡ್ 3)
ವಿಕೆಟ್ ಪತನ: 1-35 (ಲಿಟನ್ ದಾಸ್, 4.3), 2-66 (ತಂಜಿಮ್ ಹಸನ್, 9.4), 3-76 (ತೌಹಿದ್ ಹೃದಯ್, 11.1), 4-98 (ಶಕೀಬ್ ಅಲ್ ಹಸನ್, 13.3), 5-109 (ನಜ್ಮುಲ್ ಹುಸೇನ್ ಶಾಂತೊ, 15.3), 6-110 (ಜೇಕರ್ ಅಲಿ, 16.10),7-138 (ರಿಷದ್ ಹುಸೇನ್, 18.3), 8-145 (ಮಹಮುದುಲ್ಲಾ, 19.5)
ಬೌಲಿಂಗ್: ಅರ್ಷದೀಪ್ ಸಿಂಗ್ 4-0-30-2, ಜಸ್‌ಪ್ರೀತ್ ಬೂಮ್ರಾ 4-0-13-2, ಅಕ್ಷರ್ ಪಟೇಲ್ 2-0-26-0, ಹಾರ್ದಿಕ್ ಪಾಂಡ್ಯ 3-0-32-1, ರವೀಂದ್ರ ಜಡೇಜ 3-0-24-0, ಕುಲದೀಪ್ ಯಾದವ್ 4-0-19-3
ಪಂದ್ಯ ಶ್ರೇಷ್ಠ: ಹಾರ್ದಿಕ್ ಪಾಂಡ್ಯ

ಹೋಪ್ ಅಬ್ಬರಕ್ಕೆ ಅಮೆರಿಕ ಸುಸ್ತು

ವಿಂಡೀಸ್‌ಗೆ ಜಯ; ರಸೆಲ್, ಚೇಸ್ ಅಮೋಘ ಬೌಲಿಂಗ್

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಎಂಟು ಸಿಕ್ಸರ್ ಸಿಡಿಸಿದ ಶಾಯ್ ಹೋಪ್ ಸಿಡಿಲಬ್ಬರದ ಬ್ಯಾಟಿಂಗ್ ಬಲದಿಂದ ವೆಸ್ಟ್ ಇಂಡೀಸ್ ತಂಡವು ಅಮೆರಿಕ ಎದುರು ಜಯಭೇರಿ ಬಾರಿಸಿತು.

ವೆಸ್ಟ್‌ಇಂಡೀಸ್ ತಂಡದ ಬ್ಯಾಟರ್ ಶಾಯ್ ಹೋಪ್ ಬ್ಯಾಟಿಂಗ್. ಎಪಿ/ಪಿಟಿಐ ಚಿತ್ರ

ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 8ರ ಹಂತದ 2ನೇ ಗುಂಪಿನ ಪಂದ್ಯದಲ್ಲಿ ಆತಿಥೇಯ ತಂಡವು 9 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದ ವಿಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆ್ಯಂಡ್ರೆ ರಸೆಲ್ (31ಕ್ಕೆ3) ಮತ್ತು ರಾಸ್ಟನ್ ಚೇಸ್ (19ಕ್ಕೆ3) ಅವರಿಬ್ಬರ ಪರಿಣಾಮಕಾರಿ ದಾಳಿಯಿಂದ ಅಮೆರಿಕ ತಂಡವು 128 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಗುರಿ ಬೆನ್ನಟ್ಟಿದ ವಿಂಡೀಸ್ ತಂಡವು ಕೇವಲ 65 ಎಸೆತಗಳಲ್ಲಿ 130 ರನ್ ಗಳಿಸಿ ಜಯಭೇರಿ ಬಾರಿಸಿತು. ಶಾಯ್ ಹೋಪ್ ಅಮೆರಿಕದ ಬೌಲರ್‌ಗಳನ್ನು ಕಾಡಿದರು.

ಹೋಪ್ ಮತ್ತು ಜಾನ್ಸನ್ ಚಾರ್ಲ್ಸ್ (15; 14ಎ) ಅವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ ಏಳು ಓವರ್‌ಗಳಲ್ಲಿ 67 ರನ್ ದಾಖಲಿಸಿದರು. ಹರಮೀತ್ ಸಿಂಗ್ ಬೌಲಿಂಗ್‌ನಲ್ಲಿ ಜಾನ್ಸನ್ ಕ್ಯಾಚ್ ಪಡೆದ ಮಿಲಿಂದ್ ಕುಮಾರ್ ಸಂತಸಪಟ್ಟರು.

ಆದರೆ ಇದಾದ ನಂತರದ ಆಟದಲ್ಲಿ ಅಮೆರಿಕದವರಿಗೆ ಸಂಭ್ರಮಿಸುವ ಅವಕಾಶವನ್ನು ಹೋಪ್ ಮತ್ತು ಪೂರನ್ ನೀಡಲಿಲ್ಲ. 225ರ ಸ್ಟ್ರೈಕ್‌ರೇಟ್‌ನಲ್ಲಿ 27 ರನ್ ಗಳಿಸಿದ ಪೂರನ್ ಆಟದಲ್ಲಿ 3 ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದರು. ಹೋಪ್ ಮತ್ತು ಪೂರನ್ ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿ, ತಂಡವನ್ನು ಗೆಲುವಿನ ದಡ ಸೇರಿಸಿದರು.

ಅಮೆರಿಕ ತಂಡದ ಎಡಗೈ ಮಧ್ಯಮವೇಗಿ ಸೌರಭ್ ನೇತ್ರಾವಳ್ಕರ್, ಕನ್ನಡಿಗ, ಸ್ಪಿನ್ನರ್ ನಾಸ್ತುಷ್ ಕೆಂಜಿಗೆ ಹಾಗೂ ಶ್ಯಾಂಡ್ಲಿ ಆ್ಯನ್ ಅವರು ದುಬಾರಿಯಾದರು.

ಎಂಟರ ಘಟ್ಟದಲ್ಲಿ ವಿಂಡೀಸ್ ತಂಡಕ್ಕೆ ಇದು ಎರಡನೇ ಪಂದ್ಯ ಮತ್ತು ಮೊದಲ ಗೆಲುವು.

ಸಂಕ್ಷಿಪ್ತ ಸ್ಕೋರು: ಅಮೆರಿಕ: 19.5 ಓವರ್‌ಗಳಲ್ಲಿ 128 (ಆಂಡ್ರೀಸ್ ಗೌಸ್ 29, ನಿತೀಶ್ ಕುಮಾರ್ 20, ಮಿಲಿಂದ್ ಕುಮಾರ್ 19, ವ್ಯಾನ್ ಶೈಕಾವಿಕ್ 18, ಅಲಿ ಖಾನ್ ಔಟಾಗದೆ 14, ಆ್ಯಂಡ್ರೆ ರಸೆಲ್ 31ಕ್ಕೆ3, ಅಲ್ಜರಿ ಜೋಸೆಫ್ 31ಕ್ಕೆ2, ರೊಸ್ಟನ್ ಚೇಸ್ 19ಕ್ಕೆ3) ವೆಸ್ಟ್ ಇಂಡೀಸ್: 10.5 ಓವರ್‌ಗಳಲ್ಲಿ 1 ವಿಕೆಟ್‌ಗೆ 130 (ಶಾಯ್ ಹೋಪ್ ಔಟಾಗದೆ 82, ಜಾನ್ಸನ್ ಚಾರ್ಲ್ಸ್ 15, ನಿಕೊಲಸ್ ಪೂರನ್ ಔಟಾಗದೆ 27, ಹರಮೀತ್ ಸಿಂಗ್ 18ಕ್ಕೆ1) ಫಲಿತಾಂಶ: ವೆಸ್ಟ್ ಇಂಡೀಸ್ ತಂಡಕ್ಕೆ 9 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ರಾಸ್ಟನ್ ಚೇಸ್.

ಟಿ20 ವಿಶ್ವಕಪ್: ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಟೈ	ಅಂಕ	ಎನ್‌ಆರ್‌ಆರ್
ಸೂಪರ್ ಎಂಟರ ಹಂತ–ಗುಂಪು 1						
ಭಾರತ	2	2	0	0	4	2.425
ಆಸ್ಟ್ರೇಲಿಯಾ	1	1	0	0	2	2.471
ಅಫ್ಗಾನಿಸ್ತಾನ	1	0	1	0	0	-2.350
ಬಾಂಗ್ಲಾದೇಶ	2	0	2	0	0	-2.489
ಗುಂಪು 2						
ದಕ್ಷಿಣ ಆಫ್ರಿಕಾ	2	2	0	0	4	0.625
ವೆಸ್ಟ್ ಇಂಡೀಸ್	2	1	1	0	2	1.814
ಇಂಗ್ಲೆಂಡ್	2	1	1	0	2	0.412
ಅಮೆರಿಕ	2	0	2	0	0	-2.908

ಆಸ್ಟ್ರೇಲಿಯಾ–ಅಫ್ಗಾನಿಸ್ತಾನ ಪಂದ್ಯ ಇಂದು

ಕಿಂಗ್ಸ್‌ಟೌನ್ (ಪಿಟಿಐ): ಗೆಲುವಿನ ನಾಗಾಲೋಟದಲ್ಲಿರುವ ಆಸ್ಟ್ರೇಲಿಯಾ ತಂಡವು ಸೂಪರ್ ಎಂಟರ ಘಟ್ಟದ (ಗುಂಪು 1) ಪಂದ್ಯದಲ್ಲಿ ಭಾನುವಾರ ಅಫ್ಗಾನಿಸ್ತಾನ ತಂಡವನ್ನು ಎದುರಿಸಲಿದೆ.

ಭಾರತ ವಿರುದ್ಧ 47 ರನ್‌ಗಳಿಂದ ಸೋತಿರುವ ರಶೀದ್ ಖಾನ್ ಪಡೆಯು ಟೂರ್ನಿಯಲ್ಲಿ ಮುಂದಿನ ಹಾದಿಯನ್ನು ಜೀವಂತವಾಗಿರಿಸಲು ಈ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿದೆ.

ಬಾಂಗ್ಲಾದೇಶವನ್ನು ಒಳಗೊಂಡ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿರುವ ಅಫ್ಗನ್ ತಂಡವು ಸುಧಾರಿತ ಪ್ರದರ್ಶನದ ವಿಶ್ವಾಸದಲ್ಲಿದೆ. ಭಾರತ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.

ಸೂಪರ್ ಎಂಟರಲ್ಲಿ ಆಸ್ಟ್ರೇಲಿಯಾ ತಂಡವು 28 ರನ್‌ಗಳಿಂದ ಬಾಂಗ್ಲಾ ದೇಶವನ್ನು ಹಿಮ್ಮೆಟ್ಟಿಸಿತ್ತು. ಮಳೆ ಬಾಧಿತವಾದ ಆ ಪಂದ್ಯವನ್ನು ಡಕ್ವರ್ಥ್ ಲೂಯಿಸ್ ನಿಯಮದಡಿ ಆಸೀಸ್ ಪಡೆ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಇದೀಗ ಅಫ್ಗನ್ ವಿರುದ್ಧ ಗೆಲುವು ಸಾಧಿಸಿ ಸೆಮಿಫೈನಲ್ ಹಾದಿಯನ್ನು ಸುಗಮಗೊಳಿಸುವತ್ತ ಮಿಚೆಲ್ ಮಾರ್ಷ್ ಪಡೆ ಚಿತ್ತ ಹರಿಸಿದೆ.

ಇಂಗ್ಲೆಂಡ್‌ಗೆ ದೊಡ್ಡ ಗೆಲುವಿನ ಸವಾಲು

ಫಿಲ್ ಸಾಲ್ಟ್ ಎಎಫ್‌ಪಿ ಚಿತ್ರ

ಬ್ರಿಜ್‌ಟೌನ್ (ಪಿಟಿಐ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು, ಎರಡು ಸೋಲುಗಳಿಂದ ‘ಹೈರಾಣಾಗಿರುವ’ ಅಮೆರಿಕ ತಂಡವನ್ನು ಭಾನುವಾರ ನಡೆಯುವ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತ ಪಂದ್ಯದಲ್ಲಿ ಎದುರಿಸಲಿದೆ. ಇಂಗ್ಲೆಂಡ್‌ನ ‘ಪವರ್ ಹಿಟ್ಟರ್’ ಆಟಗಾರರು ಮಿಂಚಿ ನಿರಾಯಾಸ ಗೆಲುವು ಪಡೆದರೆ ಮಾತ್ರ ಆ ತಂಡದ ಸೆಮಿಫೈನಲ್ ಆಸೆ ಜೀವಂತವಾಗುಳಿಯಲಿದೆ.

ದಕ್ಷಿಣ ಆಫ್ರಿಕಾ ಎದುರು ಶುಕ್ರವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ 164 ರನ್‌ಗಳನ್ನು ಬೆಂಬತ್ತುವಾಗ ಹೋರಾಟ ತೋರಿದರೂ ಕೊನೆಯಲ್ಲಿ ದೊಡ್ಡಹೊಡೆತಗಳಿಗೆ ವಿಫಲರಾಗಿ ಏಳು ರನ್‌ಗಳ ಸೋಲನುಭವಿಸಿತ್ತು.

ವೆಸ್ಟ್ ಇಂಡೀಸ್ ಶನಿವಾರ ಅಮೆರಿಕ ವಿರುದ್ಧ ಭರ್ಜರಿ ಗೆಲುವು ದಾಖಲಿಸಿ ನೆಟ್ ರನ್ ರೇಟ್ ಉತ್ತಮಪಡಿಸಿದೆ. ಹೀಗಾಗಿ ಇಂಗ್ಲೆಂಡ್‌ಗೆ ಒತ್ತಡ ಎದುರಾಗಿದೆ.

ದಕ್ಷಿಣ ಆಫ್ರಿಕಾ ಸದ್ಯ ಎರಡನೇ ಗುಂಪಿನಲ್ಲಿ ಎರಡು ಗೆಲುವುಗಳೊಂದಿಗೆ ಅಗ್ರಸ್ಥಾನದಲ್ಲಿದೆ. ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ತಲಾ ಒಂದು ಗೆದ್ದು, ಒಂದು ಸೋತಿವೆ. ವೆಸ್ಟ್ ಇಂಡೀಸ್ ನೆಟ್‌ರನ್‌ರೇಟ್ ಉತ್ತಮವಾಗಿದೆ. ಸೆಮಿಫೈನಲ್ ಆಸೆ ಉಳಿಸಿಕೊಳ್ಳಬೇಕಾದರೆ ಇಂಗ್ಲೆಂಡ್, ಅಮೆರಿಕ ವಿರುದ್ಧ ಕನಿಷ್ಠ 10 ರನ್‌ಗಳಿಂದ ಅಥವಾ ಕಡೇಪಕ್ಷ ಒಂದು ಓವರ್ ಇರುವಂತೆ ಗೆಲ್ಲಬೇಕಾಗುತ್ತದೆ.

ಫಿಲ್ ಸಾಲ್ಟ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅವರೇನಾದರೂ ಬೇಗ ನಿರ್ಗಮಿಸಿದರೆ ಇಂಗ್ಲೆಂಡ್‌ಗೆ ಸಮಸ್ಯೆ ಆಗಲಿದೆ. ಬಟ್ಲರ್ ಮತ್ತು ಬೇಸ್ಟೊ ಅವರು ಒಳ್ಳೆಯ ಲಯದಲ್ಲಿಲ್ಲ. ಒಟ್ಟಾರೆ ಇಂಗ್ಲೆಂಡ್ ಬ್ಯಾಟಿಂಗ್ ಬಲಾಢ್ಯವಾಗಿದೆ. ಹೀಗಾಗಿ ಅಮೆರಿಕದ ಪ್ರಮುಖ ಬೌಲರ್‌ಗಳಾದ ಸೌರಭ್ ನೇತ್ರಾವಳ್ಕರ್ ಮತ್ತು ಹರ್ಮೀತ್ ಸಿಂಗ್ ಅವರಿಗೆ ಸವಾಲು ಎದುರಾಗಿದೆ.

ಬೌಲಿಂಗ್‌ನಲ್ಲಿ ಅದಿಲ್ ರಶೀದ್ ಮತ್ತು ಜೋಫ್ರಾ ಆರ್ಚರ್ ಕ್ರಮವಾಗಿ 13 ಮತ್ತು 12 ವಿಕೆಟ್ ಪಡೆದಿದ್ದು ಯಶಸ್ವಿ ಎನಿಸಿದ್ದಾರೆ. ಮಾರ್ಕ್ ವುಡ್ ಅಂಥ ಯಶಸ್ಸು ಪಡೆದಿಲ್ಲ. ಕಡೆಯ 5 ಪಂದ್ಯಗಳಲ್ಲಿ ಅವರಿಗೆ ವಿಕೆಟ್ ಸಿಕ್ಕಿಲ್ಲ.

ಲೀಗ್ ಹಂತದಲ್ಲಿ ಗಮನ ಸೆಳೆದಿದ್ದ ಅಮೆರಿಕ ನಂತರ ಅಂಥ ಆಟ ಆಡಿಲ್ಲ. ಆ ತಂಡ ಸೆಮಿಫೈನಲ್‌ಗೆ ತಲುಪಿದರೆ ಅದು ಪವಾಡವೇ. ಅಮೆರಿಕ ಪರ ಆಂಡ್ರೀಸ್ ಗೌಸ್ ಮತ್ತು ಆರನ್ ಜೋನ್ಸ್ ಉತ್ತಮವಾಗಿ ಆಡುತ್ತಿದ್ದಾರೆ.

ಆದರೆ ಪಾಕ್ ಎದುರು ಮೂಡಿಬಂದ ಸಾಂಘಿಕ ಆಟ ನಂತರ ಬಂದಿಲ್ಲ.

ಸೌರಭ್ ನೇತ್ರಾವಳ್ಕರ್ ಎಎಫ್‌ಪಿ ಚಿತ್ರ

ಇಂದಿನ ಪಂದ್ಯಗಳು

ಅಫ್ಗಾನಿಸ್ತಾನ Vs ಆಸ್ಟ್ರೇಲಿಯಾ (ಬೆಳಿಗ್ಗೆ 6)
ಅಮೆರಿಕ Vs ಇಂಗ್ಲೆಂಡ್ (ರಾತ್ರಿ 8)
ಲೈವ್: ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ಡ್ಯುಯಥ್ಲಾನ್ ಸ್ಪರ್ಧೆ

ಬೆಂಗಳೂರು: ಆರೋಗ್ಯ ಮತ್ತು ಫಿಟ್‌ನೆಸ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಗಸ್ಟ್ 10ರಂದು ನಂದಿ ಬೆಟ್ಟಗಳ ಬಳಿ ಅಲ್ಟಿಮೆಟ್ ಡ್ಯುಯಥ್ಲಾನ್ ಚಾಲೆಂಜ್ ‘ಗೊರಿಲ್ಲಾ ಟ್ರಯಲ್’ ಆಯೋಜಿಸಲಾಗಿದೆ ಎಂದು ಬಿಟ್‌ಸ್ಪೋರ್ಟ್ ನಿರ್ದೇಶಕ ಪ್ರವೀಣ್ ರೆಡ್ಡಿ ಹೇಳಿದ್ದಾರೆ.

ಗೊರಿಲ್ಲಾ ಟ್ರಯಲ್ ವಿಭಾಗವು ಓಟ ಮತ್ತು ಸೈಕ್ಲಿಂಗ್‌ನ ವಿಭಿನ್ನ ಸಂಯೋಜನೆಯನ್ನು ಒಳಗೊಂಡಿದೆ. ಸ್ಪ್ರಿಂಟ್ ಡ್ಯುಯಥ್ಲಾನ್ (25 ಕಿ.ಮೀ.), ಸ್ಟ್ಯಾಂಡರ್ಡ್ ಡ್ಯುಯಥ್ಲಾನ್ (32.5 ಕಿ.ಮೀ) ಮತ್ತು ಎಂಡ್ಯೂರೆನ್ಸ್ ಡ್ಯುಯಥ್ಲಾನ್ (47.5 ಕಿ.ಮೀ.) ಸ್ಪರ್ಧೆಗಳು ನಡೆಯಲಿವೆ.

‘ಬೆಂಗಳೂರಿನ ಜನರನ್ನು ಗಮನದಲ್ಲಿಟ್ಟುಕೊಂಡು ಗೊರಿಲ್ಲಾ ಟ್ರಯಲ್ ಆಯೋಜಿಸಲಾಗಿದೆ. ಕಾಂಕ್ರೀಟ್ ಕಾಡಿನಿಂದ ಹೊರಬಂದು, ಪ್ರಶಾಂತವಾದ ಪ್ರಕೃತಿ ಸೌಂದರ್ಯ ಸವಿಯುವ ಅವಕಾಶ ಇಲ್ಲಿದೆ. ಭಾಗವಹಿಸುವ ಪ್ರತಿಯೊಬ್ಬರಿಗೂ ಒಂದು ಸಸಿಯನ್ನು ನೀಡಲಾಗುತ್ತದೆ’ ಎಂದು ಪ್ರವೀಣ್ ರೆಡ್ಡಿ ತಿಳಿಸಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ನಗಾಲ್

ಚೆನ್ನೈ (ಪಿಟಿಐ): ಭಾರತದ ಟೆನಿಸ್ ಆಟಗಾರ ಸುಮಿತ್ ನಗಾಲ್ ಅವರು ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ಸ್ಪರ್ಧೆಗೆ ಅರ್ಹತೆ ಪಡೆದುಕೊಂಡಿದ್ದಾರೆ.

26 ವರ್ಷದ ನಗಾಲ್ ಅವರಿಗೆ ಇದು ಎರಡನೇ ಒಲಿಂಪಿಕ್ ಕೂಟವಾಗಿದೆ. 2020ರ ಟೋಕಿಯೊ ಕೂಟಕ್ಕೂ ಅರ್ಹತೆ ಪಡೆದಿದ್ದ ಅವರು, ಅಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದರು.

‘2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅಧಿಕೃತವಾಗಿ ಅರ್ಹತೆ ಪಡೆದಿದ್ದೇನೆ ಎಂದು ತಿಳಿಸಲು ಖುಷಿಯಾಗುತ್ತಿದೆ. ನನ್ನ ಪಾಲಿಗೆ ಅವಿಸ್ಮರಣೀಯ ಕ್ಷಣ’ ಎಂದು ಅವರು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವುದು ನನ್ನ ವೃತ್ತಿಜೀವನದ ಮಹತ್ವದ ಗಳಿಗೆ. ನಂತರದಲ್ಲಿ ಪ್ಯಾರಿಸ್ ಕೂಟಕ್ಕೆ ಅರ್ಹತೆ ಪಡೆಯುವುದು ದೊಡ್ಡ ಗುರಿಯಾಗಿತ್ತು. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಆಡುವ ಕ್ಷಣಕ್ಕಾಗಿ ಎದುರು ನೋಡುತ್ತಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಮಹಿಳಾ ಕ್ರಿಕೆಟ್: ಭಾರತ–ದಕ್ಷಿಣ ಆಫ್ರಿಕಾ ಹಣಾಹಣಿ ಇಂದು

ಕ್ಲೀನ್‌ಸ್ವೀಪ್ ಮೇಲೆ ಹರ್ಮನ್ ಪಡೆ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡಗಳು ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಮುಖಾಮುಖಿಯಾಗಲಿವೆ.

ಏಕದಿನ ಕ್ರಿಕೆಟ್ ಸರಣಿಯ ಮೂರನೇ ಹಾಗೂ ಕೊನೆಯ ಪಂದ್ಯ ಇದಾಗಿದೆ. ಭಾರತ ತಂಡವು 2–0ಯಿಂದ ಮುನ್ನಡೆಯಲ್ಲಿದೆ. ಇದೀಗ ಕ್ಲೀನ್‌ಸ್ವೀಪ್ ಮೇಲೆ ಕಣ್ಣಿಟ್ಟಿದೆ.

ಸರಣಿಯ ಎರಡನೇ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗವು ರೋಚಕ ಜಯ ಸಾಧಿಸಿತ್ತು. ಆ ಪಂದ್ಯದಲ್ಲಿ ಹರ್ಮನ್ ಮತ್ತು ಸ್ಮೃತಿ ಮಂದಾನ ಶತಕಗಳನ್ನು ಗಳಿಸಿದ್ದರು. ದಕ್ಷಿಣ ಆಫ್ರಿಕಾದ ನಾಯಕಿ ಲೌರಾ ವೋಲ್ವಾರ್ಟ್ ಮತ್ತು ಮೆರಿಜಾನ್ ಕಾಪ್ ಅವರೂ ಶತಕ ದಾಖಲಿಸಿದ್ದರು. ಭಾರತ ತಂಡವು ಒಡ್ಡಿದ 325 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ಪ್ರವಾಸಿ ಪಡೆಯು 4 ರನ್‌ಗಳಿಂದ ಸೋತಿತ್ತು. ಇದೀಗ ಸಮಾಧಾನಕರ ಗೆಲುವು ಸಾಧಿಸುವ ಛಲದಲ್ಲಿದೆ.

ಆ ಪಂದ್ಯದಲ್ಲಿ 600ಕ್ಕೂ ಹೆಚ್ಚು ರನ್‌ಗಳು ಹರಿದಿದ್ದವು. ಉಭಯ ತಂಡಗಳ ಬೌಲರ್‌ಗಳೂ ದುಬಾರಿಯಾಗಿದ್ದರು. ದಕ್ಷಿಣ ಆಫ್ರಿಕಾದ ಬೌಲರ್‌ಗಳಿಗೆ ಸ್ಮೃತಿ ಮಂದಾನ ಅವರನ್ನು ಕಟ್ಟಿಹಾಕುವುದು ಕಠಿಣ ಸವಾಲಾಗಿದೆ.

ಏಕೆಂದರೆ ಸ್ಮೃತಿ ಕಳೆದ ಎರಡೂ ಪಂದ್ಯಗಳಲ್ಲಿ ಶತಕ ಗಳಿಸಿದ್ದಾರೆ. ಅವರು ಸತತ ಎರಡು ಏಕದಿನ ಪಂದ್ಯಗಳಲ್ಲಿ ಶತಕ ಹೊಡೆದ ಭಾರತದ ಮೊದಲ ಆಟಗಾರ್ತಿಯಾಗಿದ್ದಾರೆ. ಅಲ್ಲದೇ ಅವರು ಮಿಥಾಲಿ ರಾಜ್ (7 ಶತಕ) ಅವರ ದಾಖಲೆಯನ್ನೂ ಸರಿಗಟ್ಟಿದರು. ಹರ್ಮನ್ ಪ್ರೀತ್ ಕೂಡ ಅಮೋಘ ಲಯದಲ್ಲಿದ್ದಾರೆ. ಆರಂಭಿಕ ಬ್ಯಾಟರ್ ಶೆಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್ ಅವರು ಲಯಕ್ಕೆ ಮರಳುವ ಅಗತ್ಯವಿದೆ.

ಭಾರತ ತಂಡದ ಆಟಗಾರ್ತಿಯರು ತಾಲೀಮು ನಡೆಸಿದರು –ಪ್ರಜಾವಾಣಿ ಚಿತ್ರ ವಿ ಪುಷ್ಕರ್

ಈ ಪಂದ್ಯದಲ್ಲಿ ಕೆಲವು ಆಟಗಾರ್ತಿಯರಿಗೆ ವಿಶ್ರಾಂತಿ ನೀಡುವ ಸಾಧ್ಯತೆ ಇದೆ. ಅಲ್ಲದೇ ಕನ್ನಡತಿ ಶ್ರೇಯಾಂಕಾ ಪಾಟೀಲ, ಸೈಕಾ ಇಶಾಕ್ ಮತ್ತು ಬ್ಯಾಟರ್ ಪ್ರಿಯಾ ಪೂನಿಯಾ ಅವರಿಗೆ ಅವಕಾಶ ಲಭಿಸುವ ಸಾಧ್ಯತೆ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 1.30. ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಟಿಟಿ: ತನಿಷ್ಕಾಗೆ ಚಾಂಪಿಯನ್

ಬೆಂಗಳೂರು: ಅಥರ್ವ ನವರಂಗ ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 15 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ಪ್ರಶಸ್ತಿಯನ್ನು ಗೆದ್ದುಕೊಂಡರು.

ವಿವಿ ಪುರಂನ ಮ್ಯಾಚ್ ಪಾಯಿಂಟ್‌ನಲ್ಲಿ ಶನಿವಾರ ನಡೆದ ಬಾಲಕರ ಫೈನಲ್‌ನಲ್ಲಿ ಅಥರ್ವ 11-8, 11-8, 11-8ರಿಂದ ಅರ್ನವ್ ಎನ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಅಥರ್ವ ಅವರು ಸಿದ್ಧಾಂತ್ ಧರಿವಾಲ್ ವಿರುದ್ಧ; ಅರ್ನವ್ ಅವರು ಗೌರವ್ ಗೌಡ ವಿರುದ್ಧ ಗೆಲುವು ಸಾಧಿಸಿದ್ದರು. ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ 11-8, 11-6, 11-6ರಿಂದ ಹಿಯಾ ಸಿಂಗ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಆಯುಷಿ ಬಿ. ಗೋಡ್ಸೆ ವಿರುದ್ಧ; ಹಿಯಾ ಅವರು ಕೈರಾ ಬಾಳಿಗ ವಿರುದ್ಧ ಗೆದ್ದರು.

ಪ್ರಶಸ್ತಿ ಪತ್ರದೊಂದಿಗೆ ಅಥರ್ವ ನವರಂಗ ಮತ್ತು ತನಿಷ್ಕಾ ಕಪಿಲ್

ಫುಟ್‌ಬಾಲ್: ನಾಳೆ ಆಯ್ಕೆ ಟ್ರಯಲ್ಸ್

ಬೆಂಗಳೂರು: ಜೂನಿಯರ್ ಬಾಲಕರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ರಾಜ್ಯ ತಂಡದ ಆಯ್ಕೆಗೆ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು ಇದೇ 24ರಂದು ಮಧ್ಯಾಹ್ನ 3 ಗಂಟೆಗೆ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಟ್ರಯಲ್ಸ್ ಆಯೋಜಿಸಿದೆ. 2009ರ ಜನವರಿ 1ರಿಂದ 2010ರ ಡಿಸೆಂಬರ್ 31ರ ಅವಧಿಯಲ್ಲಿ ಜನಿಸಿದ ಆಟಗಾರರು ಮಾತ್ರ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬಹುದು. ಆಟಗಾರರು ಜನನ ಪ್ರಮಾಣ ಪತ್ರದ ಪ್ರತಿಯನ್ನು ತರುವುದು ಕಡ್ಡಾಯ ಎಂದು ಕೆಎಸ್‌ಎಫ್‌ಎ ಕಾರ್ಯದರ್ಶಿ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್ಚರಿ ಕಾಂಪೌಂಡ್ ಫೈನಲ್‌ನಲ್ಲಿ ಎಸ್ಟೋನಿಯಾ ವಿರುದ್ಧ ಜಯ

ವಿಶ್ವಕಪ್ ಹ್ಯಾಟ್ರಿಕ್ ಚಿನ್ನಗೆದ್ದ ಮಹಿಳಾ ತಂಡ

ಅಂತ್ಯಾಲ (ಟರ್ಕಿ), (ಪಿಟಿಐ): ಭಾರತ ಮಹಿಳಾ ಕಾಂಪೌಂಡ್ ಆರ್ಚರಿ ತಂಡ ಶನಿವಾರ ನಡೆದ ಹುಂಡೈ ಆರ್ಚರಿ ಮೂರನೇ ಹಂತದ ವಿಶ್ವಕಪ್ ಫೈನಲ್‌ನಲ್ಲೂ ಉತ್ತಮ ಫಾರ್ಮ್ ಪ್ರದರ್ಶಿಸಿ ಎಸ್ಟೋನಿಯಾ ತಂಡವನ್ನು ಸೋಲಿಸಿ ಚಿನ್ನದ ಪದಕ ಗೆದ್ದುಕೊಂಡಿತು. ಆ ಮೂಲಕ ವಿಶ್ವಕಪ್‌ನಲ್ಲಿ ಚಿನ್ನದ ಪದಕಗಳ ಹ್ಯಾಟ್ರಿಕ್ ಸಾಧಿಸಿತು.

ಜ್ಯೋತಿ ಸುರೇಖಾ ವೆನ್ನಂ, ಅದಿತಿ ಸ್ವಾಮಿ ಮತ್ತು ಪರ್ಣೀತ್ ಕೌರ್ ಅವರಿದ್ದ ತಂಡ ಅಮೋಘ ಪ್ರದರ್ಶನ ನೀಡಿದ್ದು 232–229 ರಲ್ಲಿ ಎಸ್ಟೋನಿಯಾ ತಂಡದ(ಲಿಸೆಲ್ ಜಾತ್ಮಾ, ಮೀರಿ–ಮರಿಟಾ ಪಾಸ್ ಮತ್ತು ಮರಿಸ್ ಟೆಟ್ಸ್‌ಮನ್) ವಿರುದ್ಧ ಏಕಪಕ್ಷೀಯ ಫೈನಲ್ ಜಯಿಸಿತು.

ಈ ಋತುವಿನಲ್ಲಿ ಅಜೇಯವಾಗಿರುವ ಭಾರತ, ಇದಕ್ಕೆ ಮೊದಲು ಶಾಂಘೈ ಮತ್ತು ಯೆಚಿಯೊನ್‌ನಲ್ಲಿ (ಕ್ರಮವಾಗಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ) ನಡೆದ ಮೊದಲೆರಡು ಸ್ಟೇಜ್ ವಿಶ್ವಕಪ್‌ಗಳಲ್ಲೂ ಚಿನ್ನದ ಪದಕ ಕೊರಳಿಗೆ ಹಾಕಿಕೊಂಡಿತ್ತು.

ಪರ್ಣೀತ್ ಕೌರ್, ಜ್ಯೋತಿ ಸುರೇಖಾ ವೆನ್ನಂ ಮತ್ತು ಅದಿತಿ ಸ್ವಾಮಿ ಪಿಟಿಐ ಚಿತ್ರ

ಪ್ರಿಯಾಂಶ್‌ಗೆ ಬೆಳ್ಳಿ: ಪುರುಷರ ಕಾಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಿಯಾಂಶ್ ಅವರು ಕೂದಲೆಳೆಯ ಅಂತರದಲ್ಲಿ ಚಿನ್ನವನ್ನು ತಪ್ಪಿಸಿಕೊಂಡರು. ಅವರು ಫೈನಲ್‌ನಲ್ಲಿ 148–149ರಿಂದ ವಿಶ್ವದ ನಂ.1 ಬಿಲ್ಗಾರ ಮೈಕ್ ಸ್ಕ್ಲೋಸರ್ ವಿರುದ್ಧ ಸೋತು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟರು.

ಈ ಋತುವಿನಲ್ಲಿ ಪ್ರಿಯಾಂಶ್ ಅವರಿಗೆ ಡಚ್ ಆಟಗಾರನ ವಿರುದ್ಧ ಇದು ಎರಡನೇ ಸೋಲು. ಕಳೆದ ತಿಂಗಳು ಯೆಚಿಯೋನ್‌ನಲ್ಲಿ ನಡೆದ ಎರಡನೇ ಹಂತದ ವಿಶ್ವಕಪ್‌ನಲ್ಲಿ ಪ್ರಿಯಾಂಶ್ ಅವರು ಮೈಕ್ ವಿರುದ್ಧ ಪರಾಭವಗೊಂಡಿದ್ದರು.

ಪ್ರಿಯಾಂಶ್ ಅವರಿಗೆ ಇದು ವಿಶ್ವಕಪ್‌ನಲ್ಲಿ ಎರಡನೇ ಬೆಳ್ಳಿ ಪದಕವಾಗಿದೆ. ಏಪ್ರಿಲ್‌ನಲ್ಲಿ ಶಾಂಘೈನಲ್ಲಿ ನಡೆದ ಆರಂಭಿಕ ವಿಶ್ವಕಪ್‌ನಲ್ಲಿ ಪ್ರಿಯಾಂಶ್ ಬೆಳ್ಳಿ ಗೆದ್ದಿದ್ದರು. ಅವರು ಫೈನಲ್‌ನಲ್ಲಿ 147-150ರಿಂದ ಆಸ್ಟ್ರಿಯಾದ ನಿಕೊ ವೀನರ್ ವಿರುದ್ಧ ಸೋತಿದ್ದರು.

ಅಂಕಿತಾ ಭಕತ್ ಮತ್ತು ಧೀರಜ್ ಬೊಮ್ಮದೇವರ ಅವರು ಕ್ರಮವಾಗಿ ರೀಕರ್ವ್ ಮಹಿಳೆಯರ ಮತ್ತು ಪುರುಷರ ವಿಭಾಗದ ವೈಯಕ್ತಿಕ ಸ್ಪರ್ಧೆಯ ಸೆಮಿಫೈನಲ್ ತಲುಪಿದ್ದು, ಭಾನುವಾರ ಭಾರತ ಎರಡು ಪದಕಗಳ ನಿರೀಕ್ಷೆಯಲ್ಲಿದೆ.